ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಸ್ತ್ರೀ ಜನ್ಮದಲ್ಲಿ ಕಲಿಯುವುದು ಪುರುಷ ಜನ್ಮದಲ್ಲಿ ಕಲಿಯುವುದು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್


ಅನುವಾದ : ಉಮಾಲೋಕೇಶ್



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಸ್ತ್ರೀ ಜನ್ಮದಲ್ಲಿ ಕಲಿಯುವುದು
# ಪುರುಷ ಜನ್ಮದಲ್ಲಿ ಕಲಿಯುವುದು

ತಟವರ್ತಿ ವೀರರಾಘವರಾವು



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ

ಕನ್ನಡ ಅನುವಾದ : **ಉಮಾ ಲೋಕೇಶ್**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Stree Janmadalli Kaliyuvudu Purusha Janmadali kaliyuvudu**
Edited & Published by **Srirama Publications,**
Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
**M.: 9449695503, 8050082689**

ಮೊದಲನೆಯ ಮುದ್ರಣ : 2025

ಹಕ್ಕುಗಳು : ಪ್ರಕಾಶಕರು

ಪ್ರಕಾಶಕರು : ಶ್ರೀರಾಮ ಪಬ್ಲಿಕೇಷನ್ಸ್
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್ ಫೀಲ್ಡ್,
ಬೆಂಗಳೂರು – 560 066
ಮೊ. : 9449695503

ಬಳಸಿದ ಕಾಗದ : ಮ್ಯಾಪಲಿಥೊ ಡೆಮಿ 1/8

ಪ್ರತಿಗಳು : 1000

ಬೆಲೆ : 60/–

ಪುಟಗಳು : iv+60=64

ಮುಖಪುಟ : ಚಂದ್ರಕಾಂತ ಪಟ್ಟಣ

ಅಕ್ಷರ ಜೋಡಣೆ : **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**
ಮೊ: 96328 12541

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,<br>
ಎಚ್. ಎನ್. ಶ್ರೀನಿವಾಸ ಮತ್ತು<br>
ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು, ಶ್ರೀರಾಮಧಾಮ ಧ್ಯಾನಕೇಂದ್ರ

# ಸ್ತ್ರೀ ಜನ್ಮದಲ್ಲಿ ಕಲಿಯುವಂತಹವು ಪುರುಷ ಜನ್ಮದಲ್ಲಿ ಕಲಿಯುವಂತಹವು

ಸಹಜವಾಗಿ ನಾನು ಸ್ತ್ರೀ ಅಥವಾ ನಾನು ಪುರುಷ ಎನ್ನುತ್ತಾರೆ. ಆದರೆ ಇವೆಲ್ಲ ಆತ್ಮ ಪರಿಣಾಮ ಕ್ರಮದಲ್ಲಿ ನಮಗೆ ಈ ಜನ್ಮಗಳು ಬಂದಿವೆ. ಸ್ತ್ರೀಯಾದರೆ, ಸ್ತ್ರೀ ಜನ್ಮ ಎನ್ನುತ್ತೇವೆ, ಪುರುಷನಾದರೆ ಪುರುಷ ಜನ್ಮಎನ್ನುತ್ತೇವೆ. ಆದರೆ ನಾವು ಸ್ತ್ರೀಯರೂ ಅಲ್ಲ, ಪುರುಷರೂ ಅಲ್ಲ, ನಾವೆಲ್ಲರೂ, ಆತ್ಮರು. ಆತ್ಮಸ್ವರೂಪರಾದ ನಾವು ಪೂರ್ಣಾತ್ಮದಿಂದಾಗಲಿ, ಮೂಲ ಚೈತನ್ಯದಿಂದಾಗಲಿ ಬೇರ್ಪಟ್ಟ ಅಂಶಾತ್ಮಗಳು. ಈ ಅಂಶಾತ್ಮ ಒಂದು ಮಾನವ ಶರೀರದಲ್ಲಿ ಪ್ರವೇಶಿಸಲ್ಪಟ್ಟು ಜೀವಿಯಾಗಿ ಕರೆಯಲ್ಪಡುತ್ತದೆ.

ಆ ಜೀವಿಗೆ ಪೂರ್ಣಾತ್ಮ ಒಂದು ಲಕ್ಷ್ಯವನ್ನು ನಿರ್ದೇಶಿಸುತ್ತದೆ. ಅದೇನೆಂದರೆ, ನೀನು ಈ ಭೂಮಿಯ ಮೇಲೆ ಎಷ್ಟೋ ಪಾಠಗಳನ್ನು ಕಲಿತುಕೊಂಡು, ಜ್ಞಾನವನ್ನು ಹೊಂದಿ ನಮ್ಮ ಸ್ಥಾಯಿಗೆ ಬರಬೇಕು. ಅಂದರೆ ಪೂರ್ಣಾತ್ಮವಾಗಬೇಕು. ಅಲ್ಲಿಯವರೆಗೂ ನೀನು ಜನ್ಮಗಳು ತೆಗೆದುಕೊಳ್ಳುತ್ತಾ ಇರುವೆ ಎಂದು ಹೇಳಿ ಜನನ ಮರಣ ಚಕ್ರದಲ್ಲಿ ಪ್ರವೇಶಿಸುವಂತೆ ಮಾಡುತ್ತದೆ. ಹಾಗೆ ಪ್ರತಿಯೊಬ್ಬರೂ ಮಾನವ ಜನ್ಮದಲ್ಲಿ ಪ್ರವೇಶಿಸುತ್ತಾರೆ. ಅಂದಿನಿಂದ ಕರ್ಮ ಚಕ್ರವೂ ಪ್ರಾರಂಭವಾಗುತ್ತದೆ.

ಹಾಗೆಯೇ ಜನನ ಮರಣ ಚಕ್ರದಲ್ಲಿ ಪ್ರವೇಶಿಸಿದ ಅಂಶಾತ್ಮ ಪೂರ್ಣಾತ್ಮವಾಗಬೇಕೆಂದರೆ, 400 ರಿಂದ 500 ಜನ್ಮಗಳು ಬೇಕಾಗುತ್ತದೆ ಎಂದು ಪತ್ರೀಜಿಯವರು ಹೇಳಿದ್ದಾರೆ.

ಹಾಗೆಯೇ ಜನನ ಮರಣ ಚಕ್ರದಲ್ಲಿ ಪ್ರವೇಶಿಸಿದ ಇವರು ಎಷ್ಟೋ ಕಲಿಯಬೇಕು. ಕಾರಣ, ಇವರು ಕೂಡಾ ಪೂರ್ಣಾತ್ಮರಾಗಬೇಕು. ಏಕೆಂದರೆ ಪೂರ್ಣಾತ್ಮಕ್ಕೆ ತಿಳಿಯದಿರುವುದು ಯಾವುದೂ ಪೂರ್ಣಾತ್ಮವನ್ನು ಸಹ ಸೃಷ್ಟಿಕರ್ತ ಎನ್ನುತ್ತಾರೆ. ಅಂದರೆ ಕೋಕ್ರಿಯೆಟರ್ ಎಂದು ಕರೆಯುತ್ತಾರೆ.

ಸೃಷ್ಟಿಕರ್ತನು ಈ ಸೃಷ್ಟಿಯಲ್ಲಿ ಎಷ್ಟೋ ಲೋಕಗಳನ್ನು, ಎಷ್ಟೋ ವಿಧವಾದ ಜೀವಿಗಳನ್ನು ಹೇಗೆ ಸೃಷ್ಟಿ ಮಾಡುತ್ತಾ ಇರುತ್ತಾನೋ! ಹಾಗೆ ಅಂಶಾತ್ಮವಾದ ನಾವು ಕೂಡಾ ಆ ಪೂರ್ಣಾತ್ಮ ಸ್ಥಾಯಿಗೆ ಏರಿ ಅಂತಹ ಕೆಲಸಗಳನ್ನೇ ಮಾಡಬಲ್ಲೆವು. ಅಂತಹ ಕೆಲಸಗಳನ್ನು ಮಾಡಬೇಕು ಎಂದರೆ ಎಷ್ಟೋ ಕಲಿತುಕೊಳ್ಳಬೇಕು. ಅದಕ್ಕೆ ಅಷ್ಟು ಜನ್ಮಗಳು ಬೇಕಾಗುತ್ತದೆ.

ಆದ್ದರಿಂದ ಈ ಅಂಶಾತ್ಮ ಎಲ್ಲಾ ವಿಧವಾದ ಪಾಠಗಳು ಕಲಿಯಬೇಕಾದ್ದರಿಂದ ಅರ್ಧ ಪುರುಷ ಜನ್ಮಗಳು, ಅರ್ಧ ಸ್ತ್ರೀ ಜನ್ಮಗಳನ್ನು ತೆಗೆದುಕೊಳ್ಳುತ್ತದೆ. ಅಷ್ಟೇ ಅಲ್ಲ ಎಷ್ಟೋ ಮತಗಳಲ್ಲಿ, ಪ್ರಾಂತಗಳಲ್ಲಿ, ಕುಲಗಳಲ್ಲಿ, ಕುಟುಂಬಗಳಲ್ಲಿಯೂ ಜನ್ಮ ತೆಗೆದುಕೊಂಡು ಅನೇಕ ಪಾಠಗಳನ್ನು ಕಲಿಯುತ್ತದೆ. ಏಕೆಂದರೆ ಎಲ್ಲಾ ವಿಧವಾದ ಪಾಠಗಳು ಒಂದೇ ವಿಧವಾದ ಜನ್ಮದಲ್ಲಿ ಬರುವುದಿಲ್ಲ. ಅದು ಸಾಧ್ಯವೂ ಇಲ್ಲ.. ಒಂದು ಲಕ್ಷಣ ಕಲಿತುಕೊಳ್ಳಲು ತುಂಬಾ ಜನ್ಮಗಳು ಬೇಕಾಗುವುದು. ಹಾಗೆ ಅನೇಕ ಜನ್ಮಗಳಲ್ಲಿ ಕಲಿಯುತ್ತಾ ಪೂರ್ಣ ಸ್ಥಿತಿ ಹೊಂದಿ ಕೊನೆಗೆ ಪ್ರತಿ ಆತ್ಮ ಪೂರ್ಣಾತ್ಮವಾಗಿ ಬದಲಾಗುತ್ತದೆ. ಲಕ್ಷ್ಯ ಸಾಧಿಸುವವರೆಗೂ ಆತ್ಮಕ್ಕೆ ತೃಪ್ತಿ ಇರುವುದಿಲ್ಲ.

ನೋಡಿ ನೀವು ನಿಮ್ಮ ಮನೆ ಬಿಟ್ಟು ಇತರ ರಾಜ್ಯಗಳಿಗಾಗಲಿ, ದೇಶಗಳಿಗಾಗಲಿ ಹೋದಿರಿ ಎಂದುಕೊಳ್ಳಿ. ಅಲ್ಲಿ ಎಷ್ಟು ಎಂಜಾಯ್ ಮಾಡಿದರೂ, ನೀವು ಅಲ್ಲಿಯೇ ಇದ್ದು ಬಿಡೋಣ ಎಂದು ಅಂದುಕೊಳ್ಳುವುದಿಲ್ಲ. ಯಾವಾಗ ಮನೆಗೆ ಸೇರುತ್ತೇವೋ, ಎಂದುಕೊಳ್ಳುತ್ತೀರಿ. ಹಾಗೆಯೇ ಪೂರ್ಣಾತ್ಮದಿಂದ ಬೇರ್ಪಟ್ಟ ಅಂಶಾತ್ಮವಾದ ನಾವು ಮತ್ತೆ ನಮ್ಮ ಸ್ವಲೋಕ ಅಂದರೆ ಪೂರ್ಣಾತ್ಮವಿರುವ ಸತ್ಯಲೋಕ ಸೇರುವವರೆಗೂ ನಮಗೆ ತೃಪ್ತಿ ಇರುವುದಿಲ್ಲ.

ನೋಡಿ ಯಾರಾದರೂ ಎಲ್ಲಿಗೆ ಹೋದರೂ ಸ್ವಗೃಹವನ್ನು ಸೇರಲೇಬೇಕು. ನಮ್ಮ ಸ್ವಗೃಹವೇ ಸತ್ಯ ಲೋಕ. ಅಲ್ಲಿ ಸೇರುವವರೆಗೂ ಈ ಜೀವನ ಪ್ರಯಾಣ ನಿಲ್ಲುವುದಿಲ್ಲ. ಹಾಗಾದರೆ ಅಲ್ಲಿಗೆ ಹೇಗೆ ಸೇರಬೇಕು ಎಂದರೆ ಎಷ್ಟೋ ಪಾಠಗಳನ್ನು ಕಲಿಯಬೇಕು. ಎಷ್ಟೋ ಅನುಭವಗಳನ್ನು ಹೊಂದಬೇಕು, ಎಷ್ಟೋ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಆದ್ದರಿಂದ ಸ್ತ್ರೀ ಜನ್ಮದಲ್ಲಿ ಏನು ಕಲಿಯುತ್ತೇವೆ? ಪುರುಷ ಜನ್ಮಗಳಲ್ಲಿ ಏನು ಕಲಿಯುತ್ತೇವೆ? ಎನ್ನುವ ಕೆಲವು ವಿಷಯಗಳನ್ನು ತಿಳಿದುಕೊಳ್ಳೋಣ.

**ಸ್ತ್ರೀ ಜನ್ಮಗಳಲ್ಲಿ ಮುಖ್ಯವಾಗಿ ಕಲಿಯುವುದು:**

1. ಪ್ರೇಮ 2. ತಾಳ್ಮೆ 3. ಸಹನೆ 4. ತ್ಯಾಗ 5. ಪವಿತ್ರತೆ. ಇವುಗಳನ್ನು ಕಲಿಯುತ್ತೇವೆ.

**ಪುರುಷ ಜನ್ಮಗಳಲ್ಲಿ ಮುಖ್ಯವಾಗಿ ಕಲಿಯುವುದು:**

1. ಧೈರ್ಯ 2. ವೀರತ್ವ

3. ನಿರ್ಭಯ 4. ಸಾಹಸ

5. ಉಪಕ್ರಮ. ಇವುಗಳನ್ನು ಕಲಿತುಕೊಳ್ಳುತ್ತೇವೆ ಇವು ಕೆಲವು ಮುಖ್ಯವಾದ ಲಕ್ಷಣಗಳು... ಇವುಗಳೇ ಅಲ್ಲದೇ ಇನ್ನೂ ಎಷ್ಟೋ ಕಲಿಯುತ್ತೇವೆ.

ಹಾಗೆ ಜನ್ಮ ತೆಗೆದುಕೊಂಡ ನಂತರ ಪುರುಷ ಜನ್ಮಗಳಲ್ಲಿ ಕೆಲವು, ಸ್ತ್ರೀ ಜನ್ಮದಲ್ಲಿ ಕೆಲವು ಕಲಿತುಕೊಳ್ಳುತ್ತೇವೆ. ಈ ಜನ್ಮ ಪರಂಪರೆಯಲ್ಲಿ ಪ್ರಾರಂಭ ಜನ್ಮದಲ್ಲಿ ಅಂದರೆ 100

ರಿಂದ 150 ಜನ್ಮಗಳಲ್ಲಿ ಇರುವವರ ಸ್ಥಿತಿ ಒಂದೇ ವಿಧವಾಗಿರುತ್ತದೆ. ಮಧ್ಯಸ್ಥ ಜನ್ಮಗಳು. ಅಂದರೆ 150 ರಿಂದ 300 ಜನ್ಮದಲ್ಲಿ ಇರುವವರ ಪರಿಸ್ಥಿತಿ ಮತ್ತೊಂದು ವಿಧವಾಗಿರುತ್ತದೆ. ಹಾಗೆ ಕೊನೆಯ ಜನ್ಮಗಳು ಅಂದರೆ 300 ರಿಂದ 400 ಜನ್ಮಗಳಲ್ಲಿ ಇರುವವರ ಪರಿಸ್ಥಿತಿ ಮತ್ತಷ್ಟು ಬದಲಾಗುತ್ತದೆ. ಹಾಗೆಯೇ ಕೊನೆಯ ಜನ್ಮಗಳಲ್ಲಿ ಇರುವವರ ಪರಿಸ್ಥಿತಿ 400 ಜನ್ಮಗಳು ದಾಟಿದವರ ಪರಿಸ್ಥಿತಿ ಸಂಪೂರ್ಣ ವಿಭಿನ್ನವಾಗಿರುತ್ತದೆ.

ಇಲ್ಲಿ ಸ್ತ್ರೀಯಾಗಿ ಕೆಲವು ಜನ್ಮಗಳಲ್ಲಿ ಕಲಿತು, ಮತ್ತೆ ಪುರುಷ ಜನ್ಮಕ್ಕೆ ಬಂದಿದ್ದಾರೆ ಎಂದುಕೊಳ್ಳಿ. ಅವರು ಪುರುಷನಾಗಿ ಇದ್ದರೂ ಆ ಸ್ತ್ರೀಯ ಜನ್ಮದಲ್ಲಿ ಕಲಿತುಕೊಂಡಂತಹ ಲಕ್ಷಣಗಳು ಅವರಲ್ಲಿ ಕಾಣಿಸುತ್ತವೆ. ಅದಕ್ಕೆ ಮೊದಲು ಸ್ತ್ರೀ ಜನ್ಮದಲ್ಲಿ ಪ್ರೇಮವನ್ನು ಕಲಿತುಕೊಂಡಿದ್ದರೆ, ಪುರುಷನಾಗಿ ಜನಿಸಿದರು ಕೂಡ ಆ ಪ್ರೇಮವನ್ನೇ ಪ್ರದರ್ಶಿಸುತ್ತಾರೆ.

ಹಾಗೆ ಪುರುಷ ಜನ್ಮದಲ್ಲಿ ಧೈರ್ಯ ಕಲಿತುಕೊಂಡು, ನಂತರ ಸ್ತ್ರೀ ಜನ್ಮ ತೆಗೆದುಕೊಂಡರೆ ಈ ಮೊದಲು ಕಲಿತ ಧೈರ್ಯವನ್ನು ಸ್ತ್ರೀಯಾಗಿ ಪ್ರದರ್ಶಿಸುತ್ತೇವೆ. ಆ ಗಂಡ ಹೆಂಡತಿಯನ್ನು ನೋಡಿದರೆ ಸ್ತ್ರೀಗೆ ಇರುವ ಧೈರ್ಯ, ಆ ಪುರುಷನಿಗೆ ಇರುವುದಿಲ್ಲ. ಆಗ ಆಕೆ ನೀನು ಗಂಡಸೇ!? ಎಂದು ಹೇಳುವುದು ನಡೆಯುತ್ತದೆ. ಏಕೆಂದರೆ ಅವನು ಇನ್ನೂ ಧೈರ್ಯ ಎನ್ನುವ ಲಕ್ಷಣ ಕಲಿತಿಲ್ಲ.

ಹಾಗೆಯೇ ಸ್ತ್ರೀ ಜನ್ಮಗಳಲ್ಲಿ ಕಲಿತುಕೊಂಡು ಪುರುಷ ಜನ್ಮಕ್ಕೆ ಬಂದ ನಂತರವೂ. ಸ್ತ್ರೀ ಗುಣಗಳನ್ನೇ ಪ್ರದರ್ಶಿಸುತ್ತಾರೆ. ಹಾಗೆಯೇ ಪುರುಷ ಜನ್ಮದಲ್ಲಿ ಕಲಿತುಕೊಂಡು ಸ್ತ್ರೀ ಜನ್ಮಕ್ಕೆ ಬಂದರೂ ಪುರುಷ ಲಕ್ಷಣಗಳನ್ನು ಪ್ರದರ್ಶಿಸುತ್ತಾರೆ.

ಸಹಜವಾಗಿ ಅಷ್ಟು ಜನ್ಮಗಳು ಏಕೆ? ಒಂದೇ ಜನ್ಮದಲ್ಲಿ ಎಲ್ಲಾ ಸಾಧಿಸಲಾರವೇ? ಎಂದು ಕೊಳ್ಳಬಹುದು. ಆದರೆ ಯಾರಿಗಾದರೂ ಒಂದು ಗುಣವಾಗಲಿ ಲಕ್ಷಣವಾಗಲಿ ಬದಲಾಗಬೇಕು ಎಂದರೆ ಕೆಲವು ಜನ್ಮಗಳೇ ಹಿಡಿಯುತ್ತದೆ. ಅದಕ್ಕೆ ಲೋಕದಲ್ಲಿ, "ಹುಟ್ಟಿನೊಂದಿಗೆ ಬಂದ ಗುಣ ಸುಟ್ಟರು ಹೋಗುವುದಿಲ್ಲ" ಎನ್ನುತ್ತಾರೆ.

ದೃಢತೆ ಇಲ್ಲದವರಿಗೆ ಒಂದೊಂದು ಲಕ್ಷಣ ಸಾಧಿಸಬೇಕೆಂದರೆ, ಕೆಲವು ಜನ್ಮಗಳೇ ಹಿಡಿಯುತ್ತದೆ. ಒಂದು ವೇಳೆ ದೃಢತೆಯಿಂದ ಸಾಧಿಸಬೇಕೆಂದುಕೊಂಡರೂ, ಈ ಸೃಷ್ಟಿಯಲ್ಲಿ ಕಲಿತುಕೊಳ್ಳಬೇಕಾಗಿರುವುದು, ಹೊಂದಬೇಕಾಗಿರುವುದು ಎಷ್ಟೋ ಇದೆ. ನನಗೂ ಜ್ಞಾನ ಬೆಳೆಯುತ್ತಾ ಹೋದಂತೆ ಕಲಿಯಬೇಕಾದದ್ದು ಇನ್ನೂ ಇದೆ ಎನ್ನುವುದು ಅರ್ಥವಾಯಿತು.

ಎಷ್ಟೋ ಜನರು ಏನು ಹೇಳುತ್ತಾರೆ ಎಂದರೆ, ಆ ಭಗವಂತ ನನ್ನನ್ನು ಏಕೆ ಸೃಷ್ಟಿಸಬೇಕು? ಏಕೆ ಇಷ್ಟು ಕಷ್ಟಗಳನ್ನು ಕೊಡಬೇಕು? ನಾನೇನು ಕೇಳಿದ್ದೇನೆ? ಎಂದು ಸಂಕಟ ಪಡುತ್ತಾರೆ. ಅವರು ಅದನ್ನು ಕಷ್ಟಗಳು ಎಂದುಕೊಳ್ಳುತ್ತಾರೆ. ಆದರೆ ಆ ಕಷ್ಟಗಳ

ಮೂಲಕ ಇವರು ಕಲಿಯಬೇಕಾದ ಪಾಠಗಳು ಇವೆ ಎಂದು ಅವರಿಗೆ ತಿಳಿದಿಲ್ಲ. ಆ ಕಷ್ಟಗಳ ಮೂಲಕವೇ ಅವರು ಎಷ್ಟೋ ಕಲಿಯುತ್ತಾರೆ.

ನೀವು ಸ್ತ್ರೀಯಾದರೂ, ಪುರುಷರಾದರೂ, ನಿಮ್ಮ ಜೀವನದಲ್ಲಿ ಏನು ನಡೆಯುತ್ತಿದ್ದರೂ, ಆ ನಡೆಯುವುದರ ಕುರಿತು ಸಂಕಟ ಪಡುವುದು, ಸಂತೋಷಿಸುವುದು ಅಲ್ಲ. ಒಂದು ಸಂಘಟನೆ ನಡೆದರೂ, ಒಂದು ಜಗಳ ನಡೆದರೂ ಅಥವಾ ಯಾವುದೇ ಲಾಭ ಬಂದರೂ, ನಷ್ಟ ವಾದರೂ, ಅದರಲ್ಲಿ ನಾನು ಏನು ಕಲಿಯಬೇಕು?ಎನ್ನುವ ದೃಷ್ಟಿಯಿಂದ ನೀವು ಆಲೋಚಿಸಬೇಕು. ಖಂಡಿತವಾಗಿ ಅದರಲ್ಲಿ ಕಲಿಯಬೇಕಾಗಿರುವುದು ಇರುತ್ತದೆ. ಅದು ಕಲಿತ ನಂತರ ನೀವು ತುಂಬಾ ಬೇಗ ಬೆಳೆಯುತ್ತಿರಿ, ಬೇಗ ಅಭಿವೃದ್ಧಿಯಾದವರಿಗೆ ಜನ್ಮಗಳು ಕಡಿಮೆಯಾಗುತ್ತದೆ.

ಆದ್ದರಿಂದ ಲಾಭ ಬಂದರೆ ಹಿಗ್ಗುವುದು, ನಷ್ಟ ಬಂದರೆ ಕುಗ್ಗುವುದಲ್ಲ. ನಷ್ಟ ಬಂದರೆ ಏನು ಕಲಿಯಬೇಕು? ಲಾಭ ಬಂದರೆ ಏನು ಕಲಿಯಬೇಕು? ಎನ್ನುವುದನ್ನು ತಿಳಿದುಕೊಳ್ಳಬೇಕು. ಅದನ್ನು ಕಲಿಯಲು ಪ್ರಯತ್ನ ಮಾಡಬೇಕು. ಅಷ್ಟೇ ಹೊರತು ನಷ್ಟ ಬರುತ್ತದೆ ಎಂದು ಅಳುವುದಲ್ಲ.

ನೆನಪಿರಲಿ ನಿಮ್ಮ ಲಾಭವು ಶಾಶ್ವತವಲ್ಲ, ನಿಮ್ಮ ನಷ್ಟವು ಶಾಶ್ವತವಲ್ಲ. ನಿಮ್ಮ ಸುಖವು ಶಾಶ್ವತವಲ್ಲ, ಕಷ್ಟವೂ ಶಾಶ್ವತವಲ್ಲ. ಈ ಸೃಷ್ಟಿಯಲ್ಲಿ ನಿಮ್ಮ ಜೀವನದಲ್ಲಿ ಯಾವುದು ಶಾಶ್ವತವಲ್ಲ.. ಈ ಸೃಷ್ಟಿಯಲ್ಲಿ ಇದು ಅರ್ಥಮಾಡಿಕೊಂಡರೆ ನೀವು ದುಃಖಿಸುವುದಿಲ್ಲ.

ನಿಮ್ಮ ಜೀವನದಲ್ಲಿ ಏನು ನಡೆಯುತ್ತಿದ್ದರೂ, ಪ್ರತಿಯೊಂದು ನಾನು ಪಾಠಗಳು ಕಲಿತು ಕಲಿತುಕೊಳ್ಳಲು ನಡೆಯುತ್ತಿದೆ ಎನ್ನುವುದನ್ನು ಮರೆಯದಿರಿ. ನಿಮ್ಮ ಜನ್ಮಗಳನ್ನು ನೀವೇ ಆಯ್ಕೆ ಮಾಡಿಕೊಂಡು ಬರುವಿರಿ ಎಂದು ಪತ್ರೀಜಿಯವರು ಹೇಳಿದ್ದಾರಲ್ಲವೇ. ವಿವಿಧ ಜನ್ಮಗಳನ್ನು ಏಕೆ ಆಯ್ದುಕೊಂಡಿದ್ದೇವೆ? ಅಂದರೆ ಆ ಜನ್ಮದ ಮೂಲಕವೇ ಆ ಸ್ತ್ರೀ ಜನ್ಮದ ಮೂಲಕವೇ... ಆ ಬಡವನ ಜನ್ಮದ ಮೂಲಕವೇ... ಆ ಕುಲದಲ್ಲಿ, ಆ ಮತದಲ್ಲಿ, ಆ ದೇಶದಲ್ಲಿ, ಆ ಪ್ರಾಂತ್ಯದಲ್ಲಿ ಕಲಿಯಬೇಕಾಗಿರುವುದು ಕಲಿತುಕೊಳ್ಳಲು ಅಂತಹ ಜನ್ಮ ತೆಗೆದುಕೊಂಡಿದ್ದೇವೆ ಎಂದು ತಿಳಿದುಕೊಳ್ಳಿ.

ತುಂಬಾ ಜನರು ಏನೆಂದುಕೊಳ್ಳುತ್ತಾರೆ ಎಂದರೆ, ಅರೇ! ಆ ಕುಲದಲ್ಲಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಧನವಂತನಾಗಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು ಆ ದೇಶದಲ್ಲಿ ಹುಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಏನೋ ಈ ಅಡವಿಯಲ್ಲಿ ಹುಟ್ಟಿದ್ದೇನೆ ಎಂದುಕೊಳ್ಳುತ್ತಾರೆ. ಆದರೆ ಅವರಿಗೆ ತಿಳಿದಿಲ್ಲ ಇದೆಲ್ಲಾ ಕಲಿಯಬೇಕಾಗಿದೆ ಎಂದು. ಆದ್ದರಿಂದ ಯಾವುದಕ್ಕೂ ಸಂಕಟ ಪಡಬೇಕಾದ ಕೆಲಸವಿಲ್ಲ. ಏನು ನಡೆದರೂ, ನಡೆಯುತ್ತಿದ್ದರೂ ಎಲ್ಲಾ ನಮ್ಮ ಒಳಿತಿಗೆ, ಹಾಗೆ ನಮ್ಮ ಅಭಿವೃದ್ಧಿಗೆ ಎಂದು ಜೀವನದಲ್ಲಿ ಕಲಿಯುತ್ತಾ ಇರುವುದೇ ನಾವು ಮಾಡಬೇಕಾಗಿರುವ ಕೆಲಸ.

ಕೆಲವರು ಮಕ್ಕಳು ಹುಟ್ಟದಿದ್ದರೆ ದುಃಖಿಸುತ್ತಾರೆ. ಆದರೆ ಅದರಿಂದಲೂ ಕಲಿಯಬೇಕಾಗಿರುವುದು ಇರುತ್ತದೆ. ಮಕ್ಕಳು ಇದ್ದರೆ ಏನು? ಇಲ್ಲದಿದ್ದರೇನು ? ಪತ್ರೀಜಿಯವರು ಯಾರ ಮೇಲೆಯೂ, ಯಾವುದರ ಮೇಲೂ ಮಮಕಾರ ಇರಬಾರದು ಎಂದು ಹೇಳುತ್ತಾರೆ. ಅದಕ್ಕೆ ಮೊದಲ ಜನ್ಮಗಳಲ್ಲಿ ನಿನಗೆ ಆ ಮಮಕಾರ ಹೋಗಿರಲಿಲ್ಲವಾದ್ದರಿಂದ, ಮಕ್ಕಳು ಇಲ್ಲದೆ ಬೆಳೆಯಬೇಕು? ಅಭಿವೃದ್ಧಿ ಹೊಂದಬೇಕು ಎಂದು ಆ ವಿಧವಾದ ಜನ್ಮ ತೆಗೆದುಕೊಂಡಿರುವೆ.

ಅಷ್ಟೇ ಅಲ್ಲ ಹಿಂದಿನ ಜನ್ಮಗಳಲ್ಲಿ ನೀನು ಮಾಡಿದ ಪಾಪಗಳಿಂದ ಪಾಠಗಳು ಕಲಿಯಬೇಕು ಎಂದು ನಿನಗೆ ಮಕ್ಕಳು ಇಲ್ಲದೆ ಇರಬಹುದು. ನೀನು ಹಿಂದಿನ ಜನ್ಮದಲ್ಲಿ ಕೋಳಿ ಮೊಟ್ಟೆಯನ್ನು ತುಂಬಾ ಇಷ್ಟದಿಂದ ತಿಂದಿರುವೆ... ಅಂದರೆ, ಈ ಭೂಮಿ ಮೇಲೆ ಒಂದು ಜೀವಿಯನ್ನು ಬರದಿರುವಂತೆ ತಡೆದಿರುವೆ. ನಿನ್ನ ರುಚಿಗಾಗಿ ನಿನ್ನ ಹಸಿವು ತೀರಿಸಿಕೊಳ್ಳಲು ಪಿಂಡದ ಹಂತದಲ್ಲಿರುವ ಕೋಳಿ ಮೊಟ್ಟೆಯನ್ನು ತಿಂದಿರುವೆ. ಹಾಗೆ ಮಾಡಿದ ಕರ್ಮದಿಂದ ಪಾಠ ಕಲಿಯಲು ಈ ಜನ್ಮದಲ್ಲಿ ಮಕ್ಕಳಿಲ್ಲದಂತೆ ಜನ್ಮ ತೆಗೆದುಕೊಂಡಿರುವೆ.

ನೀನು ಬಂದಿರುವುದು ಮಕ್ಕಳಿಗಾಗಿ ಅಲ್ಲ ನೀನು ಆತ್ಮ, ನಿನ್ನ ಗುರಿ ಲಕ್ಷ್ಯ ಸಾಧಿಸಲು ಬಂದಿರುವೆ ಎನ್ನುವುದನ್ನು ಮರೆಯಬಾರದು.

ಮಕ್ಕಳು ಇರುವವರು ಅವರ ಮೇಲೆ ಮಮಕಾರದಿಂದ ಜೀವನವೆಲ್ಲ ಅವರಿಗಾಗಿಯೇ ವ್ಯಯಿಸುತ್ತಾರೆ. ಅವರಿಗೆ ಮತ್ತ್ಯಾವುದು ಕೆಲಸ ಇರುವುದಿಲ್ಲ. ಆತ್ಮವಾದರೂ ತಾನು ಎಷ್ಟೋ ಕಲಿತುಕೊಳ್ಳಬೇಕು, ಎಷ್ಟು ಬೆಳವಣಿಗೆಯಾಗಬೇಕು ಎನ್ನುವ ವಿಷಯ ಅವರಿಗೆ ತಿಳಿದಿಲ್ಲ. ಅದು ತಿಳಿಯದೆ ಈ ಮಗನ ಮೇಲೆ, ಮಗಳ ಮೇಲೆ ಮಮಕಾರದಲ್ಲಿದ್ದು ಅವರಿಗಾಗಿಯೇ ಜೀವನವನ್ನು ಕಳೆಯುತ್ತಾರೆ. ಎಷ್ಟೋ ನಷ್ಟ ಹೊಂದುತ್ತಾರೆ.

ಹಾಗೆ ಯಾವುದೋ ಪಾಠ ಕಲಿಯಬೇಕೆಂದು ಈ ಜನ್ಮ ತೆಗೆದುಕೊಂಡಿರುವೆ ಹೊರತು ಮೊದಲು ಎಷ್ಟೋ ಜನ್ಮಗಳಲ್ಲಿ ಮಕ್ಕಳನ್ನು ಪಡೆದಿಲ್ಲ ಹೇಳಿ!? ಯಾರಿಗೆ ಮಕ್ಕಳು ಇರುವುದಿಲ್ಲ? ಯಾವಾಗಲೂ ಮಕ್ಕಳೊಂದಿಗೆ ಕಳೆಯುತ್ತಿದ್ದರೆ ಯಾವಾಗ ಕಲಿಯುತ್ತಾರೆ? ಒಬ್ಬ ಪತ್ರೀಜಿಯವರಂತೆ, ಶಿರಡಿ ಬಾಬಾರವರಂತೆ, ಸತ್ಯ ಸಾಯಿ ಬಾಬಾರವರಂತೆ, ವೇಮನನಂತೆ, ವಿವೇಕಾನಂದರಂತೆ ಆತ್ಮಾಭಿವೃದ್ಧಿಯಾಗಬೇಕು ಅಲ್ಲವೇ?

ಮಕ್ಕಳ ಮೇಲೆ ಮಮಕಾರ ಆ ಮೋಜು ಅವರಿಗೆ ಇರುವುದಿಲ್ಲ. ಅವರು ಅವೆಲ್ಲವನ್ನು ಈ ಮುಂಚಿನ ಜನ್ಮಗಳಲ್ಲಿ ಕಲಿತುಕೊಂಡಿದ್ದಾರೆ ಹಾಗಾಗಿ ಕಲಿಯಲು ಇನ್ನೇನು ಇರುತ್ತದೆ? ಅದಕ್ಕೆ ಕೆಲವರು ಶಂಕರಾಚಾರ್ಯರಂತೆ, ವಿವೇಕಾನಂದರಂತೆ,

ವಿವಾಹವನ್ನು ಮಾಡಿಕೊಳ್ಳುವುದಿಲ್ಲ. ಅವರಿಗೆ ಬೇಕಾಗಿರುವುದು ಜನ್ಮಗಳಲ್ಲ ಜೀವನ ಲಕ್ಷ್ಯ. ನಾನು ಪೂರ್ಣಾತ್ಮನಾಗಬೇಕು, ಒಬ್ಬ ಸಹ ಸೃಷ್ಟಿಕರ್ತನಾಗಬೇಕು, ಸತ್ಯ ಲೋಕವನ್ನು ಸೇರಬೇಕು, ಎನ್ನುವ ತೀವ್ರ ಆಕಾಂಕ್ಷೆಯ ಹೊರತು, ಯಾವುದರ ಮೇಲೆಯೂ ಅವರ ಗಮನ ಇರುವುದಿಲ್ಲ.

ಯಾವುದರ ಮೇಲೆ ಮಮಕಾರವಿದ್ದರೂ, ಮತ್ತೆ ಜನ್ಮ ತೆಗೆದುಕೊಳ್ಳಬೇಕು. ಅದರಲ್ಲಿಯೇ ಮುಳುಗಿ ಹೋದರೆ ಹೇಗೆ? ನಿಜವಾಗಿ ನೀನು ಯಾರು? ಎಲ್ಲಿಂದ ಬಂದಿರುವೆ? ಏತಕ್ಕಾಗಿ ಬಂದಿರುವೆ ?

ಇದು ಆಲೋಚಿಸುವುದೇ ಇಲ್ಲ! ನಾನು ಸ್ತ್ರೀ ಎನ್ನುವೆ, ಈ ಕುಲ, ಆ ಮತ ಎನ್ನುವೆ. ಎಂಜಾಯ್ ಮಾಡಲು ಮಾತ್ರ ನೋಡುತ್ತಿರುವೆ. ಗಂಡ ಹೋದರೆ ಅಳು, ಹೆಂಡತಿ ಹೋದರೆ ಅಳು, ಮಕ್ಕಳಿಲ್ಲದಿದ್ದರೆ ಅಳು. ಆತ್ಮವಾದ ನೀನು ಆ ಮೇಲಿನ ಲೋಕಗಳಿಂದ ಬಂದಿರುವುದು ಏತಕ್ಕಾಗಿ? ಹೀಗೆ ದುಃಖಿಸಲೆಂದೆ? ಅಥವಾ ಪಾಠಗಳನ್ನು ಕಲಿಯಲೆಂದೇ..?

ಆದ್ದರಿಂದ ಏನು ನಡೆದರೂ, ಏನೋ ನಡೆಯುತ್ತಿದ್ದರೂ, ಯಾವ ಸಂಘಟನೆ ನಡೆದರೂ, ಇದರಿಂದ ನಾನು ಕಲಿಯಬೇಕಾದದ್ದು ಏನಿದೆ? ಎಂದು ಪ್ರಶ್ನಿಸಿಕೊಳ್ಳಬೇಕು. ಅಷ್ಟೇ ಹೊರತು ಅಯ್ಯೋ ! ಹೀಗಾಯ್ತು, ಈ ರೋಗ ಬಂದಿದೆ,  ಈ ಆರ್ಥಿಕ ತೊಂದರೆ ಬಂದಿದೆ,  ಇದರಿಂದ ಹೇಗೆ ಹೊರಬರುವ ಬರುತ್ತೇನೆ? ಅಥವಾ ನನ್ನ ವೃದ್ಯಾಪದಲ್ಲಿ ಈ ಮಕ್ಕಳು ನೋಡಿಕೊಳ್ಳುವರೋ, ಇಲ್ಲವೋ? ಎಂದು ಭಾದೆ ಪಡುತ್ತಾರೆ. ಆದರೆ ನೀವು ಮಾಡಬೇಕಾಗಿರುವುದು ಮಾಡಿ ನಡೆಯಬೇಕಾದದ್ದು ಅದೇ ನಡೆಯುತ್ತದೆ.

ಭೂಮಿ ಮೇಲೆ ಕಳುಹಿಸಿದವನು, ನಿಮಗೆ ತಿಂಡಿ ಇಲ್ಲದೆ ಮಾಡುವನೆ? ಶ್ರೀರಾಮತೀರ್ಥರಿಗೆ ಹೀಗೆಯೇ ವಿರಕ್ತಿ ಬಂದಿತು. ಆತ ಮೋಕ್ಷ ಹೊಂದಬೇಕೆಂದು ಎಲ್ಲವನ್ನು ಬಿಟ್ಟು ಚಿಕ್ಕ ಮೂಟೆಯಲ್ಲಿ ಒಂದು ಅಂಗವಸ್ತ್ರ ಒಂದು ಚೊಂಬು, ಒಂದು ಗ್ಲಾಸ್ ಇಟ್ಟುಕೊಂಡು, ಎಲ್ಲಿ ಸಾಧ್ಯವಾದರೆ ಅಲ್ಲೆಲ್ಲಾ ಸಾಧನೆ ಮಾಡುತ್ತಾ ಓಡಾಡುತ್ತಿದ್ದನು. ಆತನಿಗೆ ಎಲ್ಲೋ ಒಂದು ಕಡೆ ಏನೋ ಒಂದನ್ನು ಯಾರೋ ಒಬ್ಬರು ಕೊಡುತ್ತಲೇ ಇರುತ್ತಿದ್ದರು. ಹಾಗೆ ಪ್ರಯಾಣ ಮಾಡುತ್ತಾ ಇದ್ದಾಗ ಆತನಿಗೆ ಅನಿಸಿತು.

ನಾನು ಈ ಮೂಟೆ ಹೊತ್ತುಕೊಂಡು ಹೋಗುತ್ತಿದ್ದೇನೆ....? ನನ್ನನ್ನು ಸೃಷ್ಟಿಸಿದವನು ನನ್ನ ಅಗತ್ಯಗಳನ್ನು ತೀರಿಸುವುದಿಲ್ಲವೇ!? ಇದು ನನಗೆ ಏಕೆ ಎಂದು ಆ ಮೂಟೆಯನ್ನು ಪಕ್ಕದಲ್ಲಿರುವ ನದಿಯಲ್ಲಿ ಬಿಸಾಡಿದನು. ಆಗ ಆತನ ಬಳಿ ಏನೂ ಇರಲಿಲ್ಲ. ಹಾಗೆ ಸಾಧನೆ ಮೇಲೆ ದೃಷ್ಟಿ ಇರಿಸಿದನು. ಆತನಿಗೆ ಯಾರೋ ಒಬ್ಬರು ಯಾವುದೋ ಒಂದನ್ನು ತುಂಬಿಸಿಕೊಡುತ್ತಿದ್ದರು.

ಆ ಸಮಯಕ್ಕೆ ಇವೆಲ್ಲವೂ ಇದ್ದರೇ ಮಾತ್ರ, ನಮ್ಮ ಜೀವನ ನಡೆಯುತ್ತದೆ ಎಂದುಕೊಳ್ಳುವುದು ತುಂಬಾ ಮೂರ್ಖತ್ವ ಎಂದು ಆತನ ಜೀವನ ನೋಡಿ ನಾವು ಕಲಿತುಕೊಳ್ಳಬಹುದು. ಆದ್ದರಿಂದ, ಸಂಪಾದಿಸುವುದರ ಮೇಲೆಯೇ ದೃಷ್ಟಿ ಇರಿಸುವುದರಿಂದ ಜನ್ಮಗಳು ಹೆಚ್ಚಾಗುತ್ತವೆಯೇ ಹೊರತು ಅದಕ್ಕಿಂತ ಮತ್ತೇನು ನಡೆಯುವುದಿಲ್ಲ. ಅದಕ್ಕೆ ಪತ್ರೀಜಿಯವರು ಅಗತ್ಯಕ್ಕೆ ತಕ್ಕಂತೆ ಪರಿಮಿತವಾಗಿರಿ ಎಂದು ಹೇಳುತ್ತಾರೆ.

ನಿಮಗೆ ಇರಲು ಬಾಡಿಗೆ ಮನೆಯೋ, ಸ್ವಂತ ಮನೆಯೋ ,ಯಾವುದೋ ಒಂದು ಇದೆ ಅಲ್ಲವೇ? ತಿನ್ನುವುದಕ್ಕೆ ಇದೆಯಲ್ಲವೇ.  ಉಟ್ಟುಕೊಳ್ಳಲು ಯಾವುದೋ ಒಂದು ವಸ್ತ್ರ ಇದೆಯಲ್ಲವೇ. ಸಹಜೀವನ ಮಾಡಲು ಒಂದು ಜೊತೆ ಅಂದರೆ ಗಂಡನಾಗಲಿ ಹೆಂಡತಿಯಾಗಲಿ ಇದ್ದಾರಾ, ಇಲ್ಲವೋ ಎನ್ನುವುದನ್ನು ನೋಡಿಕೊಳ್ಳಬೇಕು.

ಅಗತ್ಯಗಳು ನೆರವೇರುತ್ತಿದ್ದರೆ, ಇರುವ ಸಮಯವೆಲ್ಲ ಈ ಪಾಠ ಕಲಿತುಕೊಳ್ಳಲು, ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬೇಕು. ಅದಕ್ಕೆ ನಾನು ಭೀಮವರಂ ಕ್ಲಾಸ್ ಬಿಡಬೇಡಿ ಅವಕಾಶ ಮಾಡಿಕೊಂಡು ಬರಲು ಪ್ರಯತ್ನಿಸಿ ಎನ್ನುತ್ತೇನೆ. ಝೂಮ್ ಕ್ಲಾಸುಗಳನ್ನು ಬಿಡಬೇಡಿ ಎನ್ನುತ್ತೇನೆ.

ನಿಮ್ಮಲ್ಲಿ ತುಂಬಾ ಜನ ಈ ದಿನ ರೆಕಾರ್ಡ್ ಆಗುತ್ತಿದೆ ಅಲ್ಲವೇ, ನಂತರ ಕೇಳಬಹುದು ಎಂದುಕೊಳ್ಳುವಿರಿ. ಆದರೆ ಝೂಮ್ ಲೈವ್‌ನಲ್ಲಿ ನೀವು ಕೇಳಿದ್ದು, ಬಿಸಿಬಿಸಿಯಾದ ರೊಟ್ಟಿ ತಿಂದಂತೆ. ನಂತರ ನೋಡುವುದು ತಣ್ಣಗಾದ ದೋಸೆ ತಿಂದಂತೆ. ಲೈವ್‌ನಲ್ಲಿದ್ದರೆ ಆತ ಇನ್ನು ಏನು ಹೇಳುತ್ತಾರೆ? ಇನ್ನು ಏನು ತಿಳಿದುಕೊಳ್ಳುತ್ತೇವೆ? ಎಂದು ಎಷ್ಟೋ ಆತುರದಿಂದ ಇರುತ್ತೀರಿ. ಏನೋ ಒಂದು ಕೆಲಸ ಮಾಡುತ್ತಾ ಕೇಳಿದರೆ ಅಷ್ಟು ಗಮನ ಇರುವುದಿಲ್ಲ. ಕೇಳಿದ್ದು ಹಾಗೆ ಮರೆತು ಬಿಡುತ್ತೀರಿ.

ಝೂಮ್‌ನಲ್ಲಿ ಗಮನವಿರಿಸಿ ಕೇಳುತ್ತಾ ಇದ್ದರೆ, ಚೆನ್ನಾಗಿ ಅರ್ಥವಾಗುತ್ತದೆ. ಖಂಡಿತವಾಗಿ ಆಚರಣೆಯೂ ಇರುತ್ತದೆ. ಹಾಗೆ ಎಷ್ಟೋ ಶ್ರದ್ಧೆ ತೋರಿಸಿದರೆ, ಎಲ್ಲಾ ಪಾಠಗಳು ಕಲಿತುಕೊಳ್ಳುತ್ತಾರೆ. ಜನ್ಮಗಳನ್ನು ಕಡಿಮೆ ಮಾಡಿಕೊಳ್ಳುತ್ತಾರೆ.

ಅಷ್ಟೇ ಅಲ್ಲ ನಿಮಗೆ ನಷ್ಟ ಬಂದರೂ, ಕಷ್ಟ ಬಂದರೂ, ಪಾಠ ಕಲಿತುಕೊಳ್ಳಲು ಬಂದಿದೆ ಎಂದು ತಿಳಿದುಕೊಳ್ಳಬೇಕು.

ಗಂಡ ಹೆಂಡತಿ ಮಧ್ಯೆ ಜಗಳಗಳು ನಡೆಯುತ್ತದೆ. ಏನು ಸಂಸಾರ ಹೀಗೆ ಆಯಿತು ಎಂದುಕೊಳ್ಳುತ್ತಾರೆ. ನೀವು ಆತ್ಮ ಎನ್ನುವುದು ಅರ್ಥವಾದರೆ, ತಿಳುವಳಿಕೆ ಇದ್ದರೆ, ಅದರಿಂದ ಪಾಠಗಳು ಕಲಿಯಬೇಕಾಗಿರುವುದು ಇದೆ ಎನ್ನುವುದು ಅರ್ಥವಾಗುತ್ತದೆ. ಆಗ ಹಠಸಾಧಿಸುವಿಕೆ ಇರುವುದಿಲ್ಲ, ದ್ವೇಷಗಳು ಇರುವುದಿಲ್ಲ, ವಿಷಯಗಳಲ್ಲಿ ಗೊಂದಲ

ಇರುವುದಿಲ್ಲ, ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ, ಧರ್ಮವನ್ನು ತಪ್ಪುವುದಿಲ್ಲ, ಸೃಷ್ಟಿ ನಿಯಮಗಳನ್ನು ತಿಳಿದುಕೊಳ್ಳುತ್ತೀರಿ. ಸೃಷ್ಟಿಗೆ ಅನುಗುಣವಾಗಿ ಜೀವಿಸುವಿರಿ.

ಆದ್ದರಿಂದ ಸತ್ಯ ತಿಳಿದುಕೊಂಡವನಿಗೆ, ಅಂದರೆ ನಾನು ಆತ್ಮ ಎನ್ನುವ ವಿಷಯ ತಿಳಿದುಕೊಂಡವನಿಗೆ ದುಃಖವೇ ಇರುವುದಿಲ್ಲ. ಎಲ್ಲವನ್ನು ಕಲಿಯಲು ಎನ್ನುವುದು ಅರ್ಥವಾಗುತ್ತದೆ. ಎಲ್ಲಾ ಆನಂದವೇ ಇರುತ್ತವೆ. ಒಂದು ವಿಧವಾಗಿ ಈ ಸತ್ಯವು ನನ್ನ ಜೀವನವನ್ನು ಬದಲಾಯಿಸಿತು, ದೇಹವೇ ನಾನು ಎಂದುಕೊಂಡಾಗ, ಇನ್ನು ಸಂಪಾದಿಸಬೇಕೆಂದುಕೊಂಡೆನು. ನಾನು ಆತ್ಮ ಎಂದು ಅರ್ಥವಾದ ನಂತರ ಎಷ್ಟು ಸಂಪಾದಿಸಿದರೂ, ಏನು ಉಪಯೋಗ? ಈ ಸಂಪಾದನೆಯಿಂದ ಆತ್ಮಕ್ಕೆ ಏನು ಲಾಭವಿಲ್ಲ ಅಲ್ಲವೇ? ಎಂದು ತಿಳಿದುಕೊಂಡೆನು.

ಮೇಲಾಗಿ ಆ ಸಂಪಾದನೆಗಾಗಿ ಈ ದೇಹದೊಂದಿಗೆ ಮಾಡುವ ತಪ್ಪುಗಳು, ಪಾಪಗಳು, ಅಧರ್ಮವಾದ ಕೆಲಸಗಳಿಂದ ಬರುವ ಫಲಿತವನ್ನು ಮತ್ತೆ ಅನುಭವಿಸಬೇಕು ಎನ್ನುವುದು ಅರ್ಥವಾಗಿ, ಎಲ್ಲಾ ವ್ಯಾಪಾರಗಳನ್ನು ಬಿಟ್ಟು ಜ್ಞಾನ ಸಂಪಾದನೆಯ ಮೇಲೆ ದೃಷ್ಟಿ ಇರಿಸಿದೆನು. ಈ ದೇಹ ಕೇವಲ ಪಾಠಗಳನ್ನು ಕಲಿತುಕೊಳ್ಳಲು ಎನ್ನುವುದನ್ನು ತಿಳಿದುಕೊಂಡೆನು.

ಅಂತಹ ಅವಕಾಶವನ್ನು ಈ ಸೃಷ್ಟಿಯಲ್ಲಿ ನೀಡಲ್ಪಟ್ಟಿದೆ. ಈ ದೇಹ ಎಷ್ಟು ದಿನ ಇರುತ್ತದೆ? ಎಷ್ಟು ದಿನ ಕೆಲಸ ಮಾಡುತ್ತದೆ? ಆಲೋಚಿಸಿದರೆ, ಬಾಲ್ಯ ಕೆಲಸ ಮಾಡುವುದಿಲ್ಲ, ವೃದ್ಯಾಪ್ಯವು ಕೆಲಸ ಮಾಡುವುದಿಲ್ಲ, ಯೌವ್ವನದಲ್ಲಿ ಮೋಜು, ಕೋರಿಕೆಗಳೊಂದಿಗೆ ಸರಿಹೋಗುತ್ತದೆ. ಆತ್ಮದ ಕುರಿತು ಆಲೋಚಿಸಲು ಸಮಯ ಎಲ್ಲಿದೆ ಹೇಳಿ?

ಅದಕ್ಕೆ ಶಂಕರಾಚಾರ್ಯರು

**ಬಾಲಸ್ತಾವತ್ ಕ್ರೀಡಾ ಸಕ್ತಃ**
**ತರುಣಸ್ತಾವತ್ತರುಣಿಸ್ತ ಕ್ತಃ ।**
**ವೃದ್ಧಸ್ತಾವತ್ಚಿಂತಾಸಕ್ತಃ**
**ಪರಸೇ ಬ್ರಹ್ಮಣಿ ಕೌಪಿನ ಸಕ್ತಃ ॥**

ತಾ :– ಬಾಲ್ಯದಲ್ಲಿ ಆಟ ಪಾಠಗಳಲ್ಲಿ ಆಸಕ್ತಿಯಿಂದ, ಯೌವ್ವನವೆಲ್ಲಾ ಸ್ತ್ರೀ ವ್ಯಾಮೋಹಗಳಿಂದ, ವಾರ್ಧಕ್ಯದಲ್ಲಿ ಸಂಸಾರ ಚಿಂತೆಗಳಿಂದ ಜೀವನವೆಲ್ಲ ಕಳೆಯುತ್ತಿದ್ದಾರೆ ಹೊರತು ಪರಬ್ರಹ್ಮ ತತ್ವದಲ್ಲಿ ಆಸಕ್ತಿಯುಳ್ಳವರು ಯಾರೂ ಇಲ್ಲ.

ಹಾಗಾದರೆ ಮತ್ತೆ ಆತ್ಮವಾಗಿರುವ ನಿನ್ನ ಕುರಿತು ನೀನು ಯಾವಾಗ ಆಲೋಚಿಸುವೆ?

ಎನ್ನುತ್ತಾರೆ ಶಂಕರಾಚಾರ್ಯರು. ಬರುವುದು ಹೋಗುವುದೇನಾ, ಅದಕ್ಕೆ " ಪುನರಪಿ ಜನನಂ ಪುನರಪಿ ಮರಣಂ" ಎಂದು ಹೇಳಿದ್ದಾರೆ.

ಆದ್ದರಿಂದ ದೇಹ ಎನ್ನುವ ಭಾವದಲ್ಲೇ ಇದ್ದರೆ ನಿಮ್ಮ ಜನ್ಮ ವ್ಯರ್ಥ ಮಾಡಿಕೊಂಡಂತೆ. ನಾನು ಆತ್ಮ ಎನ್ನುವ ತಿಳುವಳಿಕೆ ಉಂಟಾದರೆ ಎಷ್ಟೋ ಕಲಿತುಕೊಳ್ಳುತ್ತೇವೆ. ಈ ದೇಹ ಎನ್ನುವುದು ಆತ್ಮಕ್ಕೆ ಒಂದು ಅಮೂಲ್ಯವಾದ ಅವಕಾಶ , ಆದ್ದರಿಂದ ನಾನು ದೇಹ ಎನ್ನುವಂತೆ ಜೀವಿಸುವವರ ವರ್ತನೆ ನಾನು ಆತ್ಮ ಎನ್ನುವಂತೆ ಜೀವಿಸುವವರ ವರ್ತನೆಯು ಒಂದಕ್ಕೊಂದು ಸಂಪೂರ್ಣ ವಿಭಿನ್ನವಾಗಿರುತ್ತದೆ.

ನಾನು ದೇಹ ಎಂದು ಜೀವಿಸುವವನು, ಇತರರು ಬೇರೆ ಎನ್ನುವ ಭಾವದಲ್ಲಿಯೇ ಇರುತ್ತಾನೆ. ಅವನು ತಪ್ಪು ಮಾಡುತ್ತಿದ್ದಾನೆ, ಅವನು ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾನೆ ಎಂದು ಬೇರೆಯವರನ್ನು ವಿಮರ್ಶಿಸುತ್ತಾ ಇರುತ್ತಾನೆ. ಇತರರನ್ನು ನೋಡಿದರೆ ಅಸೂಯೆಯಿಂದ ದುಃಖಿಸುತ್ತಾ ಇರುತ್ತಾನೆ. ತನ್ನ ಪಕ್ಕದಲ್ಲಿರುವವರ ಮೇಲೆ ದ್ವೇಷವನ್ನು ಬೆಳೆಸಿಕೊಳ್ಳುತ್ತಾನೆ. ನಾನು ಆತ್ಮನು, ಅವರು ಆತ್ಮ ಸ್ವರೂಪರೇ ಎಲ್ಲರೂ ಆತ್ಮಾಭಿವೃದ್ಧಿ ಹೊಂದಲು ಬಂದವರೇ ಎನ್ನುವ ಸತ್ಯ ಅವನಿಗೆ ತಿಳಿದಿಲ್ಲ.

ಈ ಅಜ್ಞಾನದಲ್ಲಿ ಇರುವವನು ತನ್ನ ಕೆಲಸ ತಾನು ನೋಡಿಕೊಳ್ಳುವುದಿಲ್ಲ. ಯಾವಾಗಲೂ ಇತರರ ಗೊಡವೆಯೇ, ತನ್ನ ಕುರಿತು ಆಲೋಚಿಸುವುದಿಲ್ಲ, ಇತರ ಕುರಿತು ಆಲೋಚಿಸುತ್ತಾನೆ. ಪತ್ರೀಜಿಯವರು ಇತರರ ಗೊಡವೆ ನಿಮಗೇಕೆ ? ಎಂದು ಹೇಳುತ್ತಾರೆ. ಯಾರು ಏನು ಕಲಿಯಬೇಕು? ಅದು ಕಲಿಯುತ್ತಾ ಇರುತ್ತಾರೆ ನಿನ್ನ ಕೆಲಸ ನೀನು ನೋಡಿಕೊ ಎನ್ನುತ್ತಾರೆ. ಯಾರನ್ನು ವಿಮರ್ಶಿಸಬಾರದು, 'ನೋ ಕಾಮೆಂಟ್ಸ್' ಎನ್ನುತ್ತಾರೆ.

ಪತ್ರೀಜಿಯವರು ಒಂದು ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂದರೆ, ಭೂಮಿ ಮೇಲೆ ಬಂದವರು ಯಾರಾದರೂ, ಯಾವ ಸ್ಥಾಯಿಯಿಯಲ್ಲಿ ಇರುವವರಾದರೂ, ತಪ್ಪುಗಳನ್ನು ಮಾಡುತ್ತಾರೆ. ಆಯಾ ಸ್ಥಾಯಿಯಲ್ಲಿರುವವರು, ಆ ಸ್ಥಾಯಿಗೆ ತಕ್ಕಂತೆ ತಪ್ಪುಗಳನ್ನು ಮಾಡುತ್ತಾರಂತೆ. ಆದ್ದರಿಂದ ತಪ್ಪು ಮಾಡದವರು ಯಾರು ಇರುವುದಿಲ್ಲ ಎಂದಿದ್ದಾರೆ.

" A " ಲೆವೆಲ್ ನಲ್ಲಿ ಇರುವವನು "A" ತಪ್ಪುಗಳು ಮಾಡುತ್ತಾನೆ. "B" ಲೆವೆಲ್ ನಲ್ಲಿ ಇರುವವನಿಗೆ "A" ತಪ್ಪು ಮಾಡುತ್ತಿರುವಂತೆ ಅನಿಸುತ್ತದೆ. "A " ಸ್ಥಾಯಿ ಯಲ್ಲಿರುವವನು "B" ಸ್ಥಾಯಿಗೆ ಬಂದರೆ, ಆಗ ಅವನಿಗೆ "A" ತಪ್ಪುಗಳು ಕಾಣಿಸುತ್ತವೆ. ಹಾಗೆಯೇ "Z" ವರೆಗೆ ಬಂದವನಿಗೆ "Y" ಮಾಡುವ ತಪ್ಪುಗಳು ಕಾಣಿಸುತ್ತವೆ. ಹಾಗೆ ಅವರವರ ಸ್ಥಾಯಿಯಲ್ಲಿ ಅವರು ತಪ್ಪುಗಳು ಮಾಡುತ್ತಾ ಇರುತ್ತಾರೆ.

ಹಾಗೆ ಎಲ್ಲರೂ ತಪ್ಪುಗಳು ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ ಇರುವವರೇ. ಪಾಠಗಳು ಕಲಿಯುತ್ತಾರೆ, ತಪ್ಪುಗಳನ್ನು ಸರಿ ಮಾಡಿಕೊಳ್ಳುತ್ತಾರೆ. ಯಾವಾಗ ಅವರು Z ಸ್ಥಾಯಿಗೆ ಬರುತ್ತಾರೋ, ಸಂಪೂರ್ಣವಾಗಿ ತಪ್ಪುಗಳು ಮಾಡುವುದಿಲ್ಲವೋ, ಆಗ ಅವರಿಗೆ ಜನ್ಮವಿರುವುದಿಲ್ಲ.

ಈ ಕಾಷಾಯಗಳನ್ನು ಧರಿಸುವುದು ಕೂಡಾ ಎಲ್ಲರನ್ನೂ ಮೋಸಗೊಳಿಸುವುದೇ ಹೊರತು, ಬೇರೆ ಏನೂ ಇಲ್ಲ. ಮೇಲಿನ ಸ್ಥಾಯಿಗೆ ಹೋದ ನಂತರ ಹಾಗೇ ಕಾಷಾಯ ಹಾಕಿಕೊಂಡರೆ ಅವರು ತಪ್ಪು ಮಾಡಿದಂತೆ. ಪತ್ರೀಜಿಯವರು ಸ್ವಾಮಿ ವಿವೇಕಾನಂದರ ವಿಷಯದಲ್ಲೂ ಅದೇ ಹೇಳಿದ್ದಾರೆ .

ಹಾಗೆ ರಾಮಕೃಷ್ಣ ಪರಮಹಂಸರು ವಿವಾಹ ಮಾಡಿಕೊಂಡು, ತನ್ನ ಹೆಂಡತಿಗೆ ನೀಡಬೇಕಾದ ಸುಖವನ್ನು ನೀಡದೆ ತಾಯಿಯ ಸಮಾನವಾಗಿ ನೋಡಿದ್ದರು. ಅದು ಆ ಸ್ಥಾಯಿಯಲ್ಲಿ ಆತ ಮಾಡಿದ ತಪ್ಪು. ಈ ಕಾರಣದಿಂದ ಮತ್ತೆ ಇನ್ನೊಂದು ಜನ್ಮ ತೆಗೆದುಕೊಂಡು, ಅದನ್ನು ಸರಿ ಮಾಡಿಕೊಳ್ಳಬೇಕಾಗಿರುತ್ತದೆಯಂತೆ. ಹಾಗೆ ಆ ಸ್ಥಾಯಿಗೆ ಹೋದವರು ಕೆಲವರು ತಮಗಿರುವ ಶಕ್ತಿಗಳನ್ನು ಪ್ರದರ್ಶಿಸುತ್ತಾರೆ.... ಪ್ರಜೆಗಳನ್ನು ಜ್ಞಾನದೊಂದಿಗೆ ಹಿಡಿದಿಟ್ಟುಕೊಳ್ಳಬೇಕೇ ಹೊರತು ಶಕ್ತಿಯೊಂದಿಗೆ ಹಿಡಿದಿಟ್ಟು ಕೊಳ್ಳಬಾರದು ಎನ್ನುತ್ತಾರೆ. ಅದಕ್ಕೆ ಪತ್ರೀಜಿ ಯವರು ಎಷ್ಟು ಸಿದ್ಧಿ ಇದ್ದರೂ, ಏನು ಇಲ್ಲದಂತೆ ಇರುತ್ತಿದ್ದರು.

ಆದ್ದರಿಂದ ನಾನು ಆತ್ಮ ಎನ್ನುವುದು ತಿಳುವಳಿಕೆ ಇರುವವನು, ನಾನು ಈ ಸಂಘಟನೆಯಿಂದ ಕಲಿತುಕೊಳ್ಳುತ್ತಿದ್ದೇನೆ ಎನ್ನುವ ಭಾವನೆಯಲ್ಲಿ ಇರುತ್ತಾನೆ. ನಾನು ದೇಹ ಎನ್ನುವ ಅಜ್ಞಾನದಲ್ಲಿ ಇರುವವನು ತಪ್ಪುಗಳು ಮಾಡುತ್ತಾ ಇರುತ್ತಾನೆ. ಇದರಲ್ಲಿ ಆತ್ಮವಾಗದೆ ಇರುವವರು ಯಾರು ಹೇಳಿ? ಎಲ್ಲರೂ ಮೂಲ ಚೈತನ್ಯದಿಂದ ಬಂದವರೇ ಅಲ್ಲವೇ? ಎಲ್ಲರೂ ಒಂದೇ ಅಲ್ಲವೇ? ಕೆಲವು ಜನ್ಮಗಳು ಹೆಚ್ಚಾಗಿ ತೆಗೆದುಕೊಂಡು ಅವರು ಕೆಲವು ಕಲಿಯುತ್ತಾರೆ, ಸ್ವಲ್ಪ ಜನ್ಮಗಳು ಕಡಿಮೆ ತೆಗೆದುಕೊಂಡವರು ಇನ್ನು ಕಲಿತಿಲ್ಲ... ಅಷ್ಟೇ ಹೊರತು ವ್ಯತ್ಯಾಸ ಎನ್ನುವುದು ಇರುವುದಿಲ್ಲ. ಕೆಲವು ಜನ್ಮಗಳು ಹೋದರೆ ಅವನು ಆ ಸ್ಥಾಯಿಗೆ ಬರುತ್ತಾನೆ.

ಅವರು ಮಾಡುವುದರಲ್ಲಿ ತಪ್ಪು ಕಾಣಿಸಿದರೆ, ಆ ತಪ್ಪನ್ನು ಖಂಡಿಸಬೇಕು. ವಿಮರ್ಶಿಸಬಾರದು. ಪತ್ರೀಜಿಯವರು ಖಂಡಿಸುತ್ತಿದ್ದರು. ಅವರು ವಿಗ್ರಹ ಆರಾಧನೆ ಬೇಡ ಎಂದರು. ಆದರೆ ವಿಗ್ರಹರಾದನೆ ಮಾಡುವವರು ಕೋಟಿ ಜನರಿದ್ದಾರೆ. ವಿಗ್ರಹ ಆರಾಧನೆ ಬೇಡ ಎಂದರೆ ಅವರಿಗೆ ತುಂಬಾ ನೋವಾಗುತ್ತದೆ. ಅಷ್ಟೇ ಅಲ್ಲದೆ ಈತ ಮತ ಬದಲಾವಣೆಗೆ ಬಂದಿದ್ದಾನೆ ಎಂದು ಭಾವಿಸುತ್ತಾರೆ. ಅವರು ಯಾರನ್ನು

ವಿಮರ್ಶಿಸುವವರಲ್ಲ. ಅಜ್ಞಾನದೊಂದಿಗೆ ಮಾಡುವ ಆ ಕೆಲಸವನ್ನು ಖಂಡಿಸುವವರು ಅಷ್ಟೇ.

ನೀವು ಸತ್ಯವನ್ನು ತಿಳಿದುಕೊಳ್ಳಿ, ಸತ್ಯವನ್ನು ಆಶ್ರಯಿಸಿ ಎನ್ನುತ್ತಿದ್ದರು. ಸತ್ಯವನ್ನು ಆಶಯಿಸಿದವರು ವಿಜಯಿಗಳಾಗಿ ಮುಂದೆ ಸಾಗುತ್ತಾರೆ. ಅಸತ್ಯವನ್ನು ಆಶ್ರಯಿಸುವವರು, ಜೀವನವನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ. ಅದಕ್ಕೆ ಖಂಡಿಸುತ್ತಿದ್ದರು.

ಹಾಗೆ ಅವರು "ಮಾಂಸಾಹಾರ ಬೇಡ ಶಾಖಾಹಾರವೇ ತಿನ್ನಬೇಕು" ಎಂದು ಯಾವುದೇ ಮುಲಾಜಿಲ್ಲದೆ, ನಿರ್ಭಯವಾಗಿ ಹೇಳುತ್ತಿದ್ದರು. ಲೋಕದಲ್ಲಿ ನೋಡಿದರೆ ಮಾಂಸ ತಿನ್ನುವವರು ಹೆಚ್ಚಾಗಿದ್ದಾರೆ. ಅವರು ಏನು ಹೇಳುತ್ತಾರೆಂದರೆ, ಈತ ಈಗ ಹೇಳುತ್ತಿದ್ದಾನೆ? ನಮ್ಮ ತಾತಂದಿರು ತಿಂದಿದ್ದಾರೆ, ಮುತ್ತಾತಂದಿರು ತಿಂದಿದ್ದಾರೆ ಎನ್ನುತ್ತಾರೆ. ಇನ್ನು ಕೆಲವರು ಅದು ನಮ್ಮ ವ್ಯಾಪಾರ, ಅದು ಬಿಟ್ಟರೆ ನಾವು ಹೇಗೆ ಜೀವಿಸಬೇಕು ಎಂದು ಮಾತನಾಡಿದರೂ ಯಾರು ಬಾಧೆಪಟ್ಟರೂ, ಏನು ಮಾಡಿದರೂ, ಸತ್ಯವನ್ನು ನಿರ್ಭಯವಾಗಿ ಹೇಳುತ್ತಿದ್ದರು.

ಪತ್ರೀಜಿಯವರ 18 ಆದರ್ಶ ಸೂತ್ರಗಳಲ್ಲಿ 14ನೇ ಸೂತ್ರ, ವಿಗ್ರಹ ಆರಾಧನೆ ಬೇಡ, ಸತ್ಯಾರಾಧನೆ ಮಾಡಬೇಕು ಎಂದಿದ್ದಾರೆ. ಅವರು ಸತ್ಯವೇ ಭಗವಂತ, ವಿಗ್ರಹವು ಭಗವಂತನಲ್ಲ. ಮಾನವನು ಮಾಡಿದ ವಿಗ್ರಹ ಭಗವಂತನು ಹೇಗೆ ಆಗುತ್ತಾನೆ? ಮಾನವನನ್ನು ಮಾಡಿದವನೇ ಭಗವಂತ. ಆತನೇ ಸತ್ಯ, ಆತನನ್ನೇ ಹಿಡಿಯಬೇಕು ಎಂದು ಯಾವುದೇ ಅಂಜಿಕೆ ಇಲ್ಲದೆ ಹೇಳಿದ್ದಾರೆ. ಮೊದಲಿಗೆ ಈತ ಈ ಒಂದು ಪಾಯಿಂಟ್ ತೆಗೆದರೆ ಚೆನ್ನಾಗಿರುತ್ತಿತ್ತು ಎಂದು ನಾನು ಮೊದಲು ಚಿಂತೆಮಾಡುತ್ತಿದ್ದೆನು.

ನಂತರ ಈ ಸತ್ಯ ಅರ್ಥವಾದ ಮೇಲೆ, ದೈವವೆಂದರೆ ಏನು ತಿಳಿದುಕೊಂಡು ನೇರವಾಗಿ ಮಾಂಸಾಹಾರದ ಬಿಡುವುದರ ಮೇಲೆ ಪುಸ್ತಕ ಬರೆದೆನು. ಆಗ ಪತ್ರೀಜಿಯವರ ಕುರಿತು ಅರ್ಥವಾಯಿತು. ಆತ ಸತ್ಯವನ್ನು ಹೇಳುತ್ತಿದ್ದಾರೆ ಎನಿಸಿತು. ಅಂದಿನಿಂದ ನಾನೂ ಹೇಳಲು ಆರಂಭಿಸಿದ್ದೇನೆ. ಆದ್ದರಿಂದ ಪ್ರತಿಯೊಬ್ಬರೂ ನಾನು ಹೇಳಿದ್ದೆ ಸರಿ ಎಂದು ಯಾವಾಗಲೂ ಅಂದುಕೊಳ್ಳಬಾರದು. ಈಗ ಇರುವ ಜ್ಞಾನಪರಿಧಿಯಲ್ಲಿ ನಿನಗೆ ಹಾಗೆ ಅನಿಸುತ್ತದೆ ಸತ್ಯ ತಿಳಿದು ನಿನ್ನ ಜ್ಞಾನ ಬೆಳೆಯುತ್ತಾ ಹೋದಂತೆ, ನಿನ್ನ ಅಭಿಪ್ರಾಯ ನೀನೇ ಬದಲಾಯಿಸಿಕೊಳ್ಳುವೆ.

ತುಂಬಾ ಜನರು ನಾನು ದೇಹವಲ್ಲ ಆತ್ಮ ಎಂದು ತಿಳಿದುಕೊಳ್ಳುವುದೇ ಜ್ಞಾನ ಎಂದುಕೊಳ್ಳುತ್ತಾರೆ. ಆದರೆ ಈ ಕಣ್ಣಿಗೆ ಕಾಣದೇ ಇರುವುದನ್ನು ತಿಳಿದುಕೊಳ್ಳುವುದೇ, ಜ್ಞಾನ. ಈ ಕಣ್ಣಿನಿಂದ ತಿಳಿದುಕೊಳ್ಳುವುದೆಲ್ಲಾ ಅಜ್ಞಾನವೇ... ಈ ಚರ್ಮ ಚಕ್ಷುವಿನಿಂದ ತಿಳಿದುಕೊಳ್ಳದಿರುವುದೇ ಜ್ಞಾನ. ಅದನ್ನು ಎಷ್ಟು ತಿಳಿದುಕೊಂಡರೆ, ನೀವು ಅಷ್ಟು

ಜ್ಞಾನವಂತರು. ಈ ಕಣ್ಣಿನಿಂದ ನೀವು ತಿಳಿದುಕೊಳ್ಳುವುದೆಲ್ಲ ಅಸತ್ಯವೇ... ಈ ಕಣ್ಣಿನೊಂದಿಗೆ ತಿಳಿಯಲಾರದ್ದೆಲ್ಲ ಸತ್ಯ.

ನೀ ಕಣ್ಣಿನೊಂದಿಗೆ ನೀವು ತಿಳಿದುಕೊಂಡು ನಾನು ಎಷ್ಟೋ ತಿಳಿದುಕೊಂಡಿದ್ದೇನೆ, ಎಂದುಕೊಂಡರೆ... ನೀವೇನೂ ಜ್ಞಾನವನ್ನು ಹೊಂದಿದಂತಲ್ಲ. ಎಷ್ಟು ತಿಳಿದುಕೊಂಡರೂ, ಅದು ಅಜ್ಞಾನವೇ. ನಿಮ್ಮ ಕಣ್ಣಿನೊಂದಿಗೆ ನೋಡುವುದು ಯಾವುದಾದರೂ, ಅದು ಶಾಶ್ವತವಾಗಿ ಇರುವುದಲ್ಲ. ಎಲ್ಲ ಅದೃಶ್ಯವಾಗುವುದೇ, ಇಲ್ಲವಾಗುವುದೇ, ಶಾಶ್ವತವಲ್ಲದ್ದೇ, ಬದಲಾವಣೆ ಹೊಂದುವಂತಹುದೇ....ಈ ಕಣ್ಣಿನೊಂದಿಗೆ ನೀನು ಏನು ನೋಡಿದರೂ, ಅದು ಅಸತ್ಯವೇ. ನೀನು ಮೂರನೇ ಕಣ್ಣಿನೊಂದಿಗೆ ನೋಡುವುದೇ ಸತ್ಯ. ಈ ಶರೀರದೊಂದಿಗೆ ನೀನು ಅದೃಶ್ಯವಾಗುವ ಈ ಪ್ರಪಂಚದಲ್ಲಿ ಮಾತ್ರ ಸುತ್ತಬಲ್ಲೆ ... ಆದರೆ ನಿನ್ನ ಸೂಕ್ಷ್ಮ ಶರೀರದೊಂದಿಗೆ ಈ ಕಣ್ಣಿಗೆ ಕಾಣದ ಎಷ್ಟೋ ಲೋಕಗಳಲ್ಲಿ ತಿರುಗಾಡಬಲ್ಲೆ, ಎಷ್ಟೋ ತಿಳಿದುಕೊಳ್ಳಬಲ್ಲೆ.

ಆ ಜ್ಞಾನವನೆಲ್ಲಾ ಸಂಪಾದಿಸಿಕೊಳ್ಳಲೆಂದೇ ಈ ಅತೀಂದ್ರಿಯ ಶಕ್ತಿಗಳು. ನೀನು ಸಾಧನೆಯನ್ನು ತೀವ್ರವಾಗಿ ಮಾಡಿದಾಗ, ನಿನ್ನಲ್ಲಿ ಅಂತಹ ಹಂಬಲ ಏರ್ಪಟ್ಟಾಗ ನಿನಗೆ ಇನ್ನು ಯಾವ ತೊಂದರೆ ಇಲ್ಲದೆ, ಅದರಲ್ಲಿಯೇ ಇದ್ದಾಗ, ನೀನು ಕಲಿಯಬೇಕಾದ ಅಗತ್ಯ ಇರುವಾಗ ಆ ಪ್ರಕೃತಿಯೇ ನಿನಗೆ ಆ ಶಕ್ತಿಯನ್ನು ನೀಡುತ್ತದೆ. ಅದು ಯಾರಿಗಾದರೂ ಕೊಡುತ್ತದೆ. ಅದನ್ನು ನೀನು ನಿನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಬೇಕು ಆದರೆ ಸ್ವಾರ್ಥಕ್ಕೆ ಉಪಯೋಗಿಸಬಾರದು.

ಆದ್ದರಿಂದ ನಾವು ಸ್ತ್ರೀಯಾದರೂ ಸರಿ ಪುರುಷರಾದರೂ ಸರಿ ಯಾರಾದರೂ ಸರಿ ಯಾವಾಗಲೂ ನಾನು ಆತ್ಮ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ದೇಹವನ್ನು ನಾನು ಕೆಲವು ಪಾಠಗಳನ್ನು ಕಲಿಯಲು ಮಾತ್ರವೇ ತೆಗೆದುಕೊಂಡಿದ್ದೇನೆ, ಅಷ್ಟೇ ಹೊರತು ಇಲ್ಲಿ ಏನೋ ಎಂಜಾಯ್ ಮಾಡಲು, ಅನುಭವಿಸಲು, ಸುಖಪಡಲು ಅಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ಜ್ಞಾನ ಹೆಚ್ಚುತ್ತಾ ಹೋದಂತೆ ನಿಮಗೆ ದುಃಖ ಇರುವುದಿಲ್ಲ. ಅಜ್ಞಾನದಲ್ಲಿದ್ದರೇನೇ ದುಃಖವಿರುತ್ತದೆ. ಅದಕ್ಕೆ ಪತ್ರೀಜಿಯವರು "ಸಾಸಿವೆಯಷ್ಟು ದುಃಖವಿದ್ದರೂ ನೀನು ಅಜ್ಞಾನದಲ್ಲಿ ಇದ್ದಂತೆ" ಎಂದು ಹೇಳಿದ್ದಾರೆ. ಸೀತಾದೇವಿ ಗಂಡನಿಗೆ ದೂರವಾಗಿ ಅಶೋಕವನದಲ್ಲಿದ್ದರೂ ಕೂಡ ಶೋಕಿಸಲಿಲ್ಲ ಕಾರಣ ಆಕೆ ಜ್ಞಾನಿ.

ಆದ್ದರಿಂದ ಈಗ ಸ್ತ್ರೀ ಜನ್ಮದಲ್ಲಿ ಕಲಿತುಕೊಳ್ಳುವುದರ ಕುರಿತು ತಿಳಿದುಕೊಳ್ಳೋಣ.

**ಸ್ತ್ರೀ ಜನ್ಮದಲ್ಲಿ ಕಲಿಯಬೇಕಾಗಿರುವವು**

ಸ್ತ್ರೀ ಜನ್ಮದಲ್ಲಿ ಮುಖ್ಯವಾಗಿ ಪ್ರೇಮ, ತಾಳ್ಮೆ, ಸಹನೆ, ತ್ಯಾಗ, ಪವಿತ್ರತೆ ಯಂತಹವುಗಳನ್ನು ಕಲಿಯುತ್ತಾರೆ. ಈ ಲಕ್ಷಣಗಳಲ್ಲಿ ಮೊದಲನೆಯದಾದ, "ಪ್ರೇಮ"ದ ಕುರಿತು ತಿಳಿದುಕೊಳ್ಳೋಣ.

# 1) ಪ್ರೇಮ

ಸ್ತ್ರೀ ತನ್ನ ಗಂಡನನ್ನು, ಮಕ್ಕಳನ್ನು ಎಷ್ಟೋ ಇಷ್ಟಪಡುತ್ತಾಳೆ. ಅವರನ್ನು ಎಷ್ಟೋ ಪ್ರೇಮಿಸುತ್ತಾಳೆ. ಸ್ತ್ರೀಗೆ ಎಲ್ಲರಿಗಿಂತ ಅವರೇ ಮುಖ್ಯ.... ಅವರಿಗಾಗಿ ಎಷ್ಟೋ ಸುಖಗಳನ್ನು ತ್ಯಜಿಸುತ್ತಾಳೆ. ಅದಕ್ಕೆ ಕಾರಣ ಅವರ ಮೇಲಿರುವ ಪ್ರೇಮವೇ.

ಮಾನವರು ಆರಂಭಿಕ ಜನ್ಮಗಳಲ್ಲಿ ತಮೋಗುಣದಲ್ಲಿ ಇರುತ್ತಾರೆ. 100 ರಿಂದ 150 ಜನ್ಮಗಳು ದಾಟುವ ಹೊತ್ತಿಗೆ, ರಜೋಗುಣಕ್ಕೆ ಬರುತ್ತಾರೆ.150 ರಿಂದ 300 ಜನ್ಮಗಳನ್ನು ದಾಟುತ್ತಿದ್ದಂತೆ ಸಾತ್ವಿಕ ಗುಣಕ್ಕೆ ಬರುತ್ತಾರೆ. 300ರಿಂದ 400 ಜನ್ಮಗಳು ದಾಟುತ್ತಿದ್ದಂತೆ, ಶುದ್ಧ ಸಾತ್ವಿಕ ಗುಣಕ್ಕೆ ಬರುತ್ತಾರೆ. 400 ರಿಂದ 450 ಜನ್ಮಗಳು ದಾಟುವಷ್ಟರಲ್ಲಿ ನಿರ್ಗುಣಕ್ಕೆ ಬರುತ್ತಾರೆ.

ತಮೋಗುಣದಲ್ಲಿ ಇರುವವರ ಲಕ್ಷಣ ಸೋಮಾರಿತನ. ಇವರು ಯಾವಾಗಲೂ ತಮ್ಮ ಕುರಿತಾಗಿಯೇ ಯೋಚಿಸುತ್ತಾರೆ. ರಜೋಗುಣದಲ್ಲಿ ಇರುವವರಿಗೆ ಅಹಂಕಾರ ಇರುತ್ತದೆ. ಎಲ್ಲದಕ್ಕೂ ನಾನು, ನಾನು.. ಎನ್ನುವಂತಹ ಭಾವ ಇರುತ್ತದೆ. ಸಾತ್ವಿಕ ಗುಣಕ್ಕೆ ಬರುವ ಹೊತ್ತಿಗೆ, ಸ್ವಲ್ಪ ಎಲ್ಲರ ಕುರಿತು ಆಲೋಚಿಸುತ್ತಾರೆ. ನಿರ್ಗುಣಕ್ಕೆ ಬರುವ ಹೊತ್ತಿಗೆ ನಿಸ್ವಾರ್ಥವಾಗಿ ಎಲ್ಲರನ್ನೂ ಪ್ರೇಮಿಸುತ್ತಾರೆ. ತಮೋಗುಣದಲ್ಲಿ ದೇಹ ಸ್ಥಿತಿ, ರಜೋಗುಣದಲ್ಲಿ ಮನೋಸ್ಥಿತಿ, ಸಾತ್ವಿಕ ಗುಣದಲ್ಲಿ ಬುದ್ಧಿಯ ಸ್ಥಿತಿ, ನಿರ್ಗುಣದಲ್ಲಿ ಆತ್ಮ ಸ್ಥಿತಿಯಲ್ಲಿ ಇರುತ್ತಾರೆ.

ಅಂದರೆ ತಮೋಗುಣದಲ್ಲಿ ದೇಹಕ್ಕೆ ಪ್ರಾಮುಖ್ಯತೆ ಇರುತ್ತದೆ. ರಜೋಗುಣದಲ್ಲಿ ಮನಸ್ಸಿಗೆ ಪ್ರಾಮುಖ್ಯತೆ ಇರುತ್ತದೆ. ಸಾತ್ವಿಕ ಗುಣದಲ್ಲಿ ಬುದ್ಧಿಗೆ ಪ್ರಾಮುಖ್ಯತೆ. ಅಂದರೆ ಬುದ್ಧಿಯು ಚೆನ್ನಾಗಿ ಕೆಲಸ ಮಾಡುತ್ತದೆ. ನಿರ್ಗುಣದಲ್ಲಿ ಆತ್ಮಕ್ಕೆ ಪ್ರಾಮುಖ್ಯತೆ ಇರುತ್ತದೆ ಅಂದರೆ ಆತ್ಮ ಸ್ಥಿತಿಯಲ್ಲಿ ಜೀವಿಸುತ್ತಾರೆ.

ಆದ್ದರಿಂದ ಈ ಗುಣಗಳು ಬದಲಾಗುತ್ತಾ ಹೋದಂತೆ, ಯಾವ ಸ್ತ್ರೀಯಲ್ಲಾದರೂ ಪ್ರೇಮವೂ ಬದಲಾಗುತ್ತಾ ಇರುತ್ತದೆ. ನಿಧಾನವಾಗಿ ಈ ತಮೋಗುಣ, ರಜೋಗುಣದಲ್ಲಿ ಸೀಮಿತವಾಗಿರುವಂತಹ ಪ್ರೇಮ... ಅಂದರೆ ತನ್ನ ಗಂಡ ತನ್ನ ಮಕ್ಕಳು ಆದ್ದರಿಂದ ಪ್ರೇಮಿಸುತ್ತಾರೆ. ಸಾತ್ವಿಕ ಹಾಗೂ ನಿರ್ಗುಣ ಸ್ಥಿತಿ ಸೇರುವ ಹೊತ್ತಿಗೆ ಸೀಮಿತವಿಲ್ಲದ ಪ್ರೇಮವಾಗಿ ಬದಲಾಗುತ್ತದೆ. ಅಂದರೆ ಆತ್ಮಾಭಿವೃದ್ಧಿ ಆಗುತ್ತಾ ಹೋದಂತೆ ಈ ಪ್ರೇಮ ಎನ್ನುವುದು ಸಹಜ ಗುಣವಾಗುತ್ತದೆ. ತನ್ನ ಮಕ್ಕಳು ಗಂಡ ಎನ್ನದೆ, ಎಲ್ಲರನ್ನೂ ಕೂಡ ಪ್ರೇಮಿಸುವ ಸ್ಥಾಯಿಗೆ ಬೆಳೆಯುತ್ತಾ ಹೋಗುತ್ತಾರೆ.

ಹಾಗೆ ಈ ಪ್ರೇಮ ಎನ್ನುವ ಲಕ್ಷಣ ಸ್ತ್ರೀ ಜನ್ಮಗಳಲ್ಲಿ ತುಂಬಾ ಹೆಚ್ಚಾಗಿ ಕಲಿಯುತ್ತಾರೆ. ಪುರುಷ ಜನ್ಮಗಳಲ್ಲಿಯೂ ಕಲಿಯುತ್ತಾರೆ... ಆದರೆ ಸ್ತ್ರೀ ಜನ್ಮದಲ್ಲಿ ಕಲಿತಷ್ಟು ಇರುವುದಿಲ್ಲ.

ಆದ್ದರಿಂದ ಈ ಪ್ರೇಮ ಎನ್ನುವ ಲಕ್ಷಣ ಯಾರಲ್ಲಿ ಆದರೂ ಹೆಚ್ಚಬೇಕು ಎಂದರೆ ಪೂರ್ಣಾತ್ಮ ಸ್ಥಿತಿಗೆ ಹೋಗಬೇಕು. ಪೂರ್ಣಾತ್ಮ ಎಂದರೆ ಯಾರು? ಭಗವಂತ. ಆತ ಪ್ರೇಮ ಸ್ವರೂಪ. ಪ್ರೇಮ ಎನ್ನುವುದು ಆತನ ಸಹಜ ಲಕ್ಷಣ. ಅದಕ್ಕೆ ಪೂರ್ಣಾತ್ಮ ಸ್ಥಿತಿಗೆ ಬೆಳೆಯುತ್ತಿದ್ದಂತೆ ಪ್ರೇಮ ಎನ್ನುವುದು ಸಹಜ ಲಕ್ಷಣವಾಗುತ್ತದೆ.

ಅದಕ್ಕೆ ಸತ್ಯಾ ಸಾಯಿಬಾಬಾ ಅವರು ಪ್ರೇಮ, ಸೇವೆ ಎಂದು ಯಾವಾಗಲೂ ಹೇಳುತ್ತಾರೆ. ಒಬ್ಬೊಬ್ಬ ಗುರುವು ಲೋಕದಲ್ಲಿರುವ ಮಾನವರಿಗೆ ಕೆಲವು ಕೆಲವು ಲಕ್ಷಣಗಳನ್ನು ಚೆನ್ನಾಗಿ ಬೋಧಿಸಲೆಂದು ಭೂಮಿ ಮೇಲೆ ಬರುತ್ತಾರೆ. ಈ ಸಾತ್ವಿಕ ಗುಣಲಕ್ಷಣ ಚೆನ್ನಾಗಿ ಎಲ್ಲರಲ್ಲೂ ಮೂಡಿಸುವುದೇ ಸತ್ಯ ಸಾಯಿಬಾಬಾ ಅವರ ಅವತಾರದ ಲಕ್ಷ್ಯ. ಪತ್ರೀಜಿಯವರ ಜನ್ಮ ಲಕ್ಷ್ಯ ಏನೆಂದರೆ, ಈ ಸಾತ್ವಿಕ ಗುಣಕ್ಕೆ ಬಂದವರನೆಲ್ಲಾ ನಿರ್ಗುಣಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿದರು.

ಅದಕ್ಕೆ ತಕ್ಕ ಸಾಧನೆ ನೀಡಿ, ಈ ಸಾತ್ವಿಕ ಗುಣವನ್ನೂ ಕೂಡಾ ದಾಟಿಸುವ ಪ್ರಯತ್ನವನ್ನು ಪತ್ರೀಜಿ ಮಾಡಿದರು. ಅವರು ಯಾರಿಗಾದರೂ ತಮೋಗುಣ ರಜೋಗುಣ ದೋಷಗಳು ಇರುತ್ತವೆ. ಹಾಗೆಯೇ ಸಾತ್ವಿಕ ಗುಣ ದೋಷವು ಕೂಡಾ ಇರುತ್ತದೆ ಎಂದು ಪತ್ರಿಜಿಯವರು ಹೇಳುವುದೇ ಅಲ್ಲದೆ, ಅದನ್ನು ದಾಟುವ 'ಶ್ವಾಸದ ಮೇಲೆ ಗಮನ' ಧ್ಯಾನ ಸಾಧನೆ ನೀಡಿದರು. ಆ ವಿಧವಾದ ಜ್ಞಾನವನ್ನು ಕೂಡಾ ಹಂಚಿದರು.

ಹೀಗೆ ಸ್ತ್ರೀ ಜನ್ಮದಲ್ಲಿ ಯಾರಾದರೂ ಪ್ರೇಮ ಎನ್ನುವುದನ್ನು ಚೆನ್ನಾಗಿ ಕಲಿತುಕೊಳ್ಳುತ್ತಾರೆ. ಮೊದಲು ಸೀಮಿತವಿರುವ ಪ್ರೇಮ ಇರುತ್ತದೆ. ನಿಧಾನವಾಗಿ ದೇವರ ಲಕ್ಷಣವಾದ ಸೀಮಿತವಲ್ಲದ ಸಹಜ ಪ್ರೇಮವಾಗುತ್ತದೆ. ಅದಕ್ಕೆ ಈ 'ಶ್ವಾಸದ ಮೇಲೆ ಗಮನ' ಎನ್ನುವುದು ಉಪಕರಿಸುತ್ತದೆ. ಯಾರು ಈ 'ಶ್ವಾಸದ ಮೇಲೆ ಗಮನ' ಧ್ಯಾನ ಮಾಡುತ್ತಾ ಇರುತ್ತಾರೋ... ನಿಧಾನವಾಗಿ ಮನಸ್ಸಿನ ಒಂದು ಪ್ರಾಮುಖ್ಯತೆ ಕಡಿಮೆಯಾಗಿ, ಆತ್ಮದ ಪ್ರಾಮುಖ್ಯತೆ ಹೆಚ್ಚುವುದರಿಂದ ಅವರಲ್ಲಿ ಆ ಲಕ್ಷಣಗಳು ನಿಧಾನವಾಗಿ ಮಾನವನಲ್ಲಿ ಒಗ್ಗೂಡುತ್ತವೆ.

## 2) ತಾಳ್ಮೆ

ಸ್ತ್ರೀ ಜನ್ಮದಲ್ಲಿ ಕಲಿಯುವ ಮತ್ತೊಂದು ಲಕ್ಷಣವೇ ತಾಳ್ಮೆ. ಈ ಗುಣ ಸ್ತ್ರೀಯರಲ್ಲಿ ಎಷ್ಟೋ ಇರುತ್ತದೆ. ಅವರ ಜೀವನದಲ್ಲಿ ತುಂಬಾ ಕಷ್ಟಗಳು ಇರುತ್ತವೆ. ಎಷ್ಟು ಕಷ್ಟ ಇದ್ದರೂ, ಮಕ್ಕಳಿಗಾಗಿ ತಾಳ್ಮೆಯಿಂದ ಸಂಸಾರವನ್ನು ನಡೆಸಿಕೊಂಡು ಹೋಗುತ್ತಾರೆ.

ಹಾಗೆ ಸಂಭೋಗ ಸಮಯದಲ್ಲೂ ಕೂಡ ಗಂಡನನ್ನು ಸಂತೋಷಪಡಿಸಲು ಎಷ್ಟೇ ನೋವಾದರೂ, ಸಹಿಸಿಕೊಳ್ಳುತ್ತಾರೆ. ತನ್ನ ಸುಖಕ್ಕಿಂತ ಗಂಡನ ಸುಖವೇ ಮುಖ್ಯವಾಗಿ

ಭಾವಿಸುತ್ತಾರೆ. ಅದಕ್ಕೆ ಆ ಸಮಯದಲ್ಲಿ ಗಂಡ ಎಷ್ಟು ಕಠಿಣವಾಗಿ ವರ್ತಿಸಿದರು ಸಹಿಸಿಕೊಳ್ಳುತ್ತಾಳೆ. ಆದರೆ ಗಂಡನನ್ನು ಮಾತ್ರ ಬಿಡಲು ಇಷ್ಟಪಡುವುದಿಲ್ಲ. ಅದಕ್ಕೆ ಸ್ತ್ರೀ ಜನ್ಮ ಎನ್ನುವುದು ತಾಳ್ಮೆಯನ್ನು ಕಲಿಯಲು ಇದೆ ಎಂದು ಹೇಳಿ ಹಿರಿಯರು ಹೇಳುತ್ತಾರೆ.

ಅಷ್ಟೇ ಅಲ್ಲ ಗಂಡ ಮರಣ ಹೊಂದಿದರೂ ಎಷ್ಟೋ ತಾಳ್ಮೆಯಿಂದ ಇರುತ್ತಾಳೆ. ಕಾರಣ ಮಕ್ಕಳಿಗಾಗಿ... ಅವಳು ಎಷ್ಟೋ ತ್ಯಾಗ ಮಾಡುತ್ತಾಳೆ. ಸ್ತ್ರೀ ಜನ್ಮದಲ್ಲಿ ಎಷ್ಟು ತಾಳ್ಮೆಯಿಂದ ಇರುತ್ತಾರೆ ಎನ್ನುವುದು, ಗಂಡನನ್ನು ಕಳೆದುಕೊಂಡವರಿಗೆ ಅದು ತಿಳಿಯುತ್ತದೆ. ಅದೇ ಪುರುಷನಾದರೆ ಹೆಂಡತಿ ಹೋದರೆ, ಇನ್ನೊಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಎರಡು ಅಥವಾ ಮೂರು ಮದುವೆಯನ್ನಾದರೂ ಮಾಡಿಕೊಳ್ಳುತ್ತಾರೆ. ಆದರೆ ಸಹಜವಾಗಿ ಸ್ತ್ರೀ ಅದಕ್ಕೆ ಇಷ್ಟಪಡುವುದಿಲ್ಲ. ಮತ್ತೆ ಹೇಗೆ ಇರಬಲ್ಲಳು? ಎಂದರೆ ಆಕೆಯಲ್ಲಿರುವ ತಾಳ್ಮೆಯ ಗುಣದಿಂದಲೇ ಇರಬಲ್ಲಳು.

ನಾವು ಗಮನಿಸಿದರೆ ಸಹಜವಾಗಿ ಹೆಂಡತಿಯರಿಗಿಂತ, ಗಂಡಂದಿರು ಮೊದಲು ಸಾಯುತ್ತಾರೆ. ಗಂಡನಿಲ್ಲದ ಹೆಂಡತಿಯರು ಎಷ್ಟೋ ಜನರು ಕಾಣಿಸುತ್ತಾರೆ. ಹೆಂಡತಿ ಇಲ್ಲದ ಗಂಡಂದಿರು ತುಂಬಾ ಕಡಿಮೆ ಪ್ರಮಾಣದಲ್ಲಿ ಕಾಣಿಸುತ್ತಾರೆ. ಕಾರಣ ಅವರು ಎರಡನೆಯ ಮದುವೆ ಮಾಡಿಕೊಳ್ಳುವುದರಿಂದಲೂ ಇರಬಹುದು.

ಗಂಡಂದಿರು ಏಕೆ ಮೊದಲು ಹೋಗುತ್ತಾರೆ? ಎಂದರೆ ಅದಕ್ಕೆ ಮುಖ್ಯ ಕಾರಣ ಗಂಡ ಜೀವನದಲ್ಲಿ ಕುಟುಂಬಕ್ಕಾಗಿ ಎಷ್ಟೋ ಕಷ್ಟ ಪಡುತ್ತಾನೆ. ಎಷ್ಟೋ ಸಮಸ್ಯೆಗಳು ಒತ್ತಡಗಳೊಂದಿಗೆ ಹೈರಾಣಾಗುತ್ತಾರೆ. ಸಹಜವಾಗಿ ಸಂಪಾದನೆಯ ಜವಾಬ್ದಾರಿ, ಕುಟುಂಬದ ಪೋಷಣೆಯ ಜವಾಬ್ದಾರಿ ಗಂಡನಿಗೆ ಇರುತ್ತದೆ. ಅಂತಹ ಕೆಲವು ಒತ್ತಡಗಳನ್ನು ಹೆಂಡತಿಯ ದೃಷ್ಟಿಗೆ ತರೆದಂತೆ ತಾನೇ ನಿರ್ವಹಿಸುತ್ತಿರುತ್ತಾನೆ. ತುಂಬಾ ಸೋತು ಹೋಗುತ್ತಾನೆ. ಆದ್ದರಿಂದ ಅವನು ಸ್ವಲ್ಪ ಮೊದಲೇ ನಿಷ್ಕ್ರಮಿಸುತ್ತಾನೆ ಎಂದುಕೊಳ್ಳುತ್ತೇನೆ. ಜೀವನದಲ್ಲಿ ಪುರುಷನಿಗೆ ಇರುವಂತಹ ಒತ್ತಡಗಳು ಸ್ತ್ರೀಗೆ ಇರುವುದಿಲ್ಲ.

ಸ್ತ್ರೀ ಬೇಕೆಂದೆ ಅವೆಲ್ಲವನ್ನು ತನ್ನ ಮೇಲೆ ಎಳೆದುಕೊಳ್ಳುತ್ತಿದ್ದಾಳೆ, ಹೊರತು ಇಲ್ಲದಿದ್ದರೆ ಸ್ತ್ರೀಗೆ ಕಡಿಮೆ ಎಂದು ಹೇಳಬಹುದು. ಎಲ್ಲವೂ ತನ್ನದೇ ಎಂದು ಭಾವಿಸುತ್ತಾ ತಾನು ಒತ್ತಡಕ್ಕೆ ಗುರಿಯಾಗುತ್ತಾಳೆ. ಆದ್ದರಿಂದ ಗಂಡ ದೂರವಾದರೆ ಸಂಪೂರ್ಣ ಕುಟುಂಬದ ಜವಾಬ್ದಾರಿ ವಹಿಸಬೇಕೆಂದರೆ, ಎಷ್ಟು ತಾಳ್ಮೆ ಇರಬೇಕು ಒಂದು ಸಾರಿ ಆಲೋಚಿಸಿ.

ಮಾನವರಿಗೆ ಮೂರು ವಿಧವಾದ ಅಗ್ನಿಗಳು ಪ್ರಜ್ವಲಿಸುತ್ತಾ ಇರುತ್ತದೆ. ಅದು ಜಠರಾಗ್ನಿ, ಕಾಮಾಗ್ನಿ, ಜ್ಞಾನಾನಾಗ್ನಿ. ಜಠರಾಗ್ನಿ.. ಜಠರಾಗ್ನಿ ಎಂದರೆ ಹಸಿವು. ಈ

ಜಠರಾಗ್ನಿ ದಹಿಸುವಾಗ ಹಸಿವನ್ನು ತಣಿಸಿಕೊಳ್ಳದಿದ್ದರೆ ಸಹಿಸಿಕೊಳ್ಳುವುದು ಎಷ್ಟು ಕಷ್ಟವೋ.. ಕಾಮಾಗ್ನಿ ಪ್ರಜ್ವಲಿಸುವಾಗ ಆ ಕೋರಿಕೆಗಳನ್ನು ತಣಿಸದಿದ್ದರೆ ಅದು ಸಹಿಸಿಕೊಳ್ಳುವುದೂ ಅಷ್ಟೇ ಕಷ್ಟ. ಕೋರಿಕೆ ಎನ್ನುವುದು ಮೇಲೆ ಕಾಣಿಸುವುದಿಲ್ಲ ಆದ್ದರಿಂದ ಸಹಿಸಿಕೊಳ್ಳುವುದು ಎನ್ನುವುದು ಸಾಮಾನ್ಯವಾದ ವಿಷಯವಲ್ಲ.

ಈಗ ವಿದೇಶಗಳಲ್ಲಿ ಪುರುಷರೇ ಅಲ್ಲದೆ ಸ್ತ್ರೀಯರು ಕೂಡ ಮತ್ತೆ ವಿವಾಹಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಆದರೆ ಭಾರತ ದೇಶದಲ್ಲಿ ಈ ಆಚಾರ ಕಡಿಮೆ. ಸಾಧಾರಣವಾಗಿ ಈ ಹಿಂದೂ ಮತದಲ್ಲಿ, ಭಾರತ ದೇಶದಲ್ಲಿ ಗಂಡ ಸತ್ತರೆ ಹೆಂಡತಿ ವಿವಾಹ ಮಾಡಿಕೊಳ್ಳುವುದಿಲ್ಲ. ಗಂಡ ಹೋದ ಕೂಡಲೇ ಇನ್ನೂ ನೀನಿನ್ನು ಏನು ಕೆಲಸಕ್ಕೆ ಬರುವುದಿಲ್ಲ ಎನ್ನುವಂತೆ ಬಳೆಯನ್ನು ತೆಗೆಯುತ್ತಾರೆ, ಕುಂಕುಮವನ್ನು ತೆಗೆಯುತ್ತಾರೆ, ತಲೆ ಬೋಳಿಸುತ್ತಾರೆ. ಇನ್ನು ಇದೇ ನಿನ್ನ ಜೀವನ ಎಂದು ಹೇಳುತ್ತಾರೆ. ಆಕೆಯ ನೋವು ಯಾರಿಗೂ ಅರಿವಾಗುವುದಿಲ್ಲ. ಮೇಲಾಗಿ ಆಕೆ ಯಾವುದಕ್ಕೂ ಕೆಲಸಕ್ಕೆ ಬರುವುದಿಲ್ಲ ಎಂದು ಬಹಿಷ್ಕರಿಸುತ್ತಾರೆ. ಆದರೆ ಈಗ ಎಲ್ಲರಂತೆ  ಅವರಿಗೂ ಕೋರಿಕೆಗಳು ಇರುತ್ತವೆ ಎಂದು ಹಿರಿಯರು ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಸ್ವಲ್ಪ ಸ್ವಲ್ಪವಾಗಿ ಸಮಾಜದಲ್ಲಿ ಬದಲಾವಣೆ ಬರುತ್ತಿದೆ. ಅಂದರೆ ಹಿಂದೂ ಮತದಲ್ಲಿ ಆ ವಿಧವಾಗಿ ತಾಳ್ಮೆ ಎನ್ನುವಂತಹ ಲಕ್ಷಣ ಚೆನ್ನಾಗಿ ಕಲಿತುಕೊಳ್ಳುತ್ತಾರೆ.

ಗೌತಮ ಬುದ್ಧ 2500 ವರ್ಷಗಳ ಹಿಂದೆ ಏನು ಮಾಡಿದ? ಎಂದರೆ ಈ ಜ್ಞಾನವನ್ನು ಹೊಂದಿ, ಎಷ್ಟೋ ದೇಶಗಳನ್ನು ಪರ್ಯಟನೆ ಮಾಡಿ ಆ ದೇಶಗಳೆಲ್ಲ ಇರುವವರೆಲ್ಲರನ್ನು ತನ್ನ ಮಾರ್ಗಕ್ಕೆ ತಂದನು. ಆ ಸಮಯದಲ್ಲಿ ಆತ ಕಾಲ್ನಡಿಗೆಯಲ್ಲಿ ಈ ಜ್ಞಾನವನ್ನು ಬೋಧಿಸಿದ್ದರಿಂದ ಭಾರತ ದೇಶದಲ್ಲಿ ಇರುವಂತಹ ಹಿಂದೂ ಮತವು ಹೋಗಿ ಬೌದ್ಧ ಮತವಾಗಿ ಬದಲಾಯಿತು.

ಆಗ ಈ ಹಿಂದೂಮತದಲ್ಲಿ ಜನ್ಮ ತೆಗೆದುಕೊಂಡು ಕಲಿಯಬೇಕಾಗಿರುವುದನ್ನು ಕಲಿತು ಕೊಳ್ಳುವ ಅವಕಾಶ ಇಲ್ಲದಾಯಿತು. ಹಿಂದೂ ಮತವೇ ಇಲ್ಲದಿದ್ದರೆ ಹಿಂದೂ ಮತದ ಆಚಾರಗಳನ್ನು ಅನುಸರಿಸುತ್ತಾ, ಕಲಿಯಬೇಕಾಗಿರುವುದನ್ನು ಎಲ್ಲಿ ಕಲಿಯುತ್ತಾರೆ? ಆದ್ದರಿಂದ ಪ್ರಕೃತಿ ಶಂಕರಾಚಾರ್ಯರನ್ನು ಭೂಮಿ ಮೇಲೆ ಕಳುಹಿಸಿತು.

ಆತ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕಾಲ್ನಡಿಗೆಯಲ್ಲಿ ತಿರುಗಾಡಿ ಈ ಬೌದ್ಧ ಮತವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ. ಭಾರತ ದೇಶದಲ್ಲಿ ಮತ್ತೆ ಹಿಂದೂ ಮತವನ್ನು ಪರಿಚಯಿಸಿದರು. ಆತ ಬೌದ್ಧ ಮಠಗಳನ್ನು ತೆರವುಗೊಳಿಸಿ ಆಲಯಗಳನ್ನು ಕಟ್ಟಿಸಿದರು. ಹಾಗೆ ಶಂಕರಾಚಾರ್ಯರು ಮತ್ತೆ ಹಿಂದೂ ಮತವನ್ನು ಪುನರುದ್ಧರಿಸುವುದು ನಡೆಯಿತು. ಸೃಷ್ಟಿಯಲ್ಲಿ ಈ ಬದಲಾವಣೆ ತರುವ ಸೃಷ್ಟಿಕರ್ತನದೇ.

ಏಕೆಂದರೆ ಲೋಕದಲ್ಲಿ ಹಿಂದುವಾಗಿ ಜೀವಿಸುತ್ತಾ, ಕಲಿಯಬೇಕಾಗಿರುವುದನ್ನು ಕಲಿಯ ಬೇಕಾದ್ದರಿಂದ.

ಆದ್ದರಿಂದ ಪ್ರತಿಯೊಬ್ಬರೂ ಎಲ್ಲವನ್ನೂ ಕಲಿಯಬೇಕು. ಅಂದರೆ ಪ್ರತಿ ಆತ್ಮ ಹಿಂದುವಾಗಿಯೂ ಕಲಿತುಕೊಳ್ಳಬೇಕು. ಎಲ್ಲಾ ಮತಗಳಲ್ಲೂ ಕಲಿಯಬೇಕು, ಹಾಗೆ ಎಲ್ಲಾ ಕುಲಗಳಲ್ಲಿ ಕಲಿಯುವುದು ಇರುತ್ತದೆ. ಎಲ್ಲಾ ಪ್ರಾಂತ್ಯಗಳಲ್ಲಿ ಹುಟ್ಟಿ ಕಲಿತುಕೊಳ್ಳಬೇಕು. ಹಾಗೆ ಧನವಂತನಾಗಿ, ಬಡವನಾಗಿ ಎಷ್ಟೋ ವಿಧವಾಗಿ ಕಲಿತುಕೊಳ್ಳಬೇಕು.

ಹಿಂದೆ ಈ ಹಿಂದೂ ಮತ ಆಚಾರಗಳಲ್ಲಿ ಗಂಡ ಮರಣಿಸಿದರೆ ಮತ್ತೆ ವಿವಾಹ ಮಾಡದಂತೆ ಅವರನ್ನು ಬಹಿಷ್ಕರಿಸಿದಂತೆ ನೋಡಿಕೊಳ್ಳುತ್ತಿದ್ದರು. ಸಮಾರಂಭಗಳಿಗೆ ಬರಲು ಬಿಡುತ್ತಿರಲಿಲ್ಲ. ಹೊರಗೆ ಕಾಣಿಸಬಾರದು ವಿಧವೆ ಎನ್ನುವ ಬಿರುದು ಕೂಡ ಕೊಡುತ್ತಿದ್ದರು.

ಈಗ ಅವೆಲ್ಲವೂ ಬದಲಾಗಿವೆ ಎಂದುಕೊಳ್ಳಿ ಹಾಗೆ ಮತ್ತೆ 1000, 2000 ವರ್ಷಗಳಾಗುವ ಹೊತ್ತಿಗೆ ಇನ್ನು ಎಷ್ಟೋ ವಿಧವಾದ ಬದಲಾವಣೆಗಳು ಬರಬಹುದು. ಸೃಷ್ಟಿಯಲ್ಲಿ ಬದಲಾವಣೆ ಎನ್ನುವುದು ಕೂಡಾ ಸಹಜವೇ.

ಯಾವುದು ಏನಾದರೂ ಆ ತಾಳ್ಮೆ ಎನ್ನುವುದನ್ನು ಸ್ತ್ರೀ ಜನ್ಮದಲ್ಲಿ ಚೆನ್ನಾಗಿ ಕಲಿಯುತ್ತಾರೆ ಎನ್ನುವುದು ನಮಗೆ ಅರ್ಥವಾಗುತ್ತದೆ. ಅಷ್ಟೇ ಅಲ್ಲ ಸ್ತ್ರೀ ಜನ್ಮದಲ್ಲಿ, ಆಕೆ ಗರ್ಭ ಧರಿಸಿದ ಸಮಯದಲ್ಲಿ ಎಷ್ಟು ತಾಳ್ಮೆಯಿಂದ ಇರುತ್ತಾಳೆ ಎನ್ನುವುದು ನಾವು ಗಮನಿಸಬಹುದು. 9 ತಿಂಗಳು ಮಗುವನ್ನು ಹೊತ್ತು ಪ್ರಸವ ಸಮಯದಲ್ಲೂ ಎಷ್ಟೋ ನೋವನ್ನು ಸಹಿಸಿಕೊಳ್ಳುತ್ತಾಳೆ. ಶಿಶುವಿಗೆ ಜನ್ಮ ನೀಡುವುದು ಸ್ತ್ರೀಯ ಜವಾಬ್ದಾರಿ ಹೊರತು ಪುರುಷನದಲ್ಲ. ಅದು ಎಷ್ಟು ಬಾಧಾಕರ ಎಂದರೆ ಆಕೆ ಪ್ರಸವಿಸುವ ಸಮಯದಲ್ಲಿ ಮತ್ತೆ ಜೀವನದಲ್ಲಿ ಗಂಡನೊಂದಿಗೆ ಸೇರಬಾರದು ಎಂದು ನಿರ್ಣಯಿಸಿಕೊಳ್ಳುತ್ತಾಳೆ. ಎಷ್ಟು ನಿರ್ಣಯಿಸಿಕೊಂಡರೂ ಅದು 'ಪ್ರಸೂತಿ ವೈರಾಗ್ಯ' ಅಲ್ಲಿವರೆಗೆ ಮಾತ್ರ ಇರುತ್ತದೆ.

ಆ ಸಮಯದಲ್ಲಿ ಸ್ತ್ರೀ ಎಷ್ಟು ತಾಳ್ಮೆಯನ್ನು ಕಲಿಯುತ್ತಾಳೆ. ಪ್ರತಿ ಸ್ತ್ರೀ ಕೂಡ ತನ್ನ ಜೀವನದಲ್ಲಿ ಎಷ್ಟೋ ವಿಧಗಳಾಗಿ, ಎಷ್ಟೋ ವಿಷಯಗಳಲ್ಲಿ, ಎಷ್ಟೋ ಸಂದರ್ಭದಲ್ಲಿ, ಎಷ್ಟೋ ತಾಳ್ಮೆಯನ್ನು ತಂದುಕೊಳ್ಳುತ್ತಾಳೆ. ಆ ತಾಳ್ಮೆಯ ಲಕ್ಷಣ ಸಂಪೂರ್ಣವಾಗಿ ಒಂದೇ ಜನ್ಮದಲ್ಲಿ ಅದು ಅಭ್ಯಾಸವಾಗುವುದಿಲ್ಲ. ಕೆಲವು ಜನ್ಮಗಳು ತೆಗೆದುಕೊಂಡು, ಪ್ರತಿ ಜನ್ಮದಲ್ಲಿ ಈ ತಾಳ್ಮೆ ಎನ್ನುವ ಲಕ್ಷಣವನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸಿಕೊಳ್ಳುತ್ತಾರೆ. ಆಗ ತಾಳ್ಮೆ ಎನ್ನುವುದು ಪರಾಕಾಷ್ಠೆಗೆ ಹೋಗುತ್ತದೆ. ಸಹಜ ಲಕ್ಷಣವಾಗುತ್ತದೆ.

ಈ ಸೃಷ್ಟಿಯಲ್ಲಿ ಯಾವುದೂ ಶಾಶ್ವತವಲ್ಲ. ಅಂದರೆ ನಮಗೆ ಬಂದ ಕಷ್ಟಗಳಾಗಲಿ, ನಷ್ಟಗಳಾಗಲಿ, ರೋಗಗಳಾಗಲಿ, ಯಾವುದಾದರೂ ಸರಿ ಶಾಶ್ವತವಲ್ಲ. ಆದರೆ ಸಹಜವಾಗಿ

ಕಷ್ಟ ಬಂದಾಗ ಸಹಿಸಲಾರದೆ ದೇವಾಲಯಗಳಿಗೆ ಹೋಗುತ್ತಾರೆ. ಚರ್ಚಿಗೆ ಹೋಗುತ್ತಾರೆ, ಮಸೀದಿಗೆ ಹೋಗುತ್ತಾರೆ. ಗುರುಗಳನ್ನು ಸ್ವಾಮೀಜಿಯನ್ನು, ಬಾಬಾರನ್ನು ಹಿಂಬಾಲಿಸುತ್ತಾರೆ. ಹಾಗೆ ಇನ್ನೂ ಕೆಲವು ಸ್ಥಳಗಳಿಗೆ ಅಲೆಯುತ್ತಾರೆ.

ಆದರೆ ಸ್ವಲ್ಪ ತಿಳುವಳಿಕೆ ಇರುವವನು, ಈ ಕಷ್ಟವೇಕೆ ಬಂದಿದೆ? ಎಂದು ಆಲೋಚಿಸುತ್ತಾನೆ. ನಮ್ಮ ಧ್ಯಾನಿಗಳು, ನಾವು ಹಿಂದೆ ಮಾಡಿದ ಕರ್ಮಗಳಿಂದ ಅವು ಎಂದು ಹೇಳುತ್ತಾರೆ. ಈ ಕರ್ಮಗಳಿಂದ ಬಂದಿರುವಂತಹ ಕಷ್ಟ ಹೇಗೆ ಹೋಗುತ್ತದೆ? ಅಂದರೆ ಆ ಕಷ್ಟವನ್ನು ಅನುಭವಿಸಿದರೆ ಹೋಗುತ್ತದೆ. ಆ ಕಷ್ಟವನ್ನು ಅನುಭವಿಸಬೇಕೆಂದರೆ ಕೆಲವು ದಿನಗಳು ತಾಳ್ಮೆ ಇರಬೇಕಲ್ಲವೇ! ಅದನ್ನು ಸಹಿಸಿಕೊಂಡರೆ ನಿಧಾನವಾಗಿ ಅದರಿಂದ ಹೊರಬರುತ್ತಾರೆ.

ಈ ಧ್ಯಾನ ಮಾರ್ಗಕ್ಕೆ ಬಂದ ನಮಗೆ ಇರುವ ಲಾಭ ಏನೆಂದರೆ? ಧ್ಯಾನ ಮಾಡುವುದರಿಂದ ಅಪಾರವಾಗಿ ಶಕ್ತಿ ಸಂಪಾದಿಸುತ್ತೇವೆ. ಯಾವಾಗಾದರೆ ಆ ಶಕ್ತಿ ಇರುತ್ತದೋ, ಏನನ್ನಾದರೂ ಚೆನ್ನಾಗಿ ತಡೆದುಕೊಳ್ಳುತ್ತೇವೆ, ಸಹಿಸಿಕೊಳ್ಳುತ್ತೇವೆ. ಹಾಗೆ ಸಹಿಸಿಕೊಳ್ಳುವುದರಿಂದ ಆ ಸಮಸ್ಯೆಯಿಂದ ಸ್ವಲ್ಪ ಸಮಯಕ್ಕೆ ಹೊರ ಬರುತ್ತೇವೆ.

ಪತ್ರೀಜಿಯವರಲ್ಲೂ ಈ ತಾಳ್ಮೆ ಎನ್ನುವುದನ್ನು ನಾನು ಗಮನಿಸಿದೆನು. ಆತನನ್ನು ಎಷ್ಟೋ ಜನ ಅವರ ಶಿಷ್ಯರೇ ಅವರ ಮಾತುಗಳನ್ನು ಟೀಕಿಸಿದರೂ ಆದರೆ ಆತ ಯಾರನ್ನು ಏನು ಅನ್ನಲಿಲ್ಲ. ಎಲ್ಲರ ವಿಮರ್ಶೆಗಳನ್ನು ಶಾಂತವಾಗಿ ಕೇಳಿ ವರ್ಷಗಳ ಕಾಲ ಸಹಿಸಿಕೊಂಡರು.

ಕೊನೆಗೆ ಯಾರು ಆತನನ್ನು ಟೀಕಿಸಿದ್ದರೋ, ಅವರೇ ಮತ್ತೆ ಅವರ ದಾರಿಗೆ ಬಂದರು. ಒಮ್ಮೆ ನಾನು ಪತ್ರೀಜಿಯವರೊಂದಿಗೆ ನೀವು ಅವರಲ್ಲಿ ಬದಲಾವಣೆ ಬರಬೇಕೆಂದು ಎಷ್ಟು ತಾಳ್ಮೆ ವಹಿಸಿದಿರಿ ಎಂದೆನು. ಪತ್ರೀಜಿ ಎಂತಹ ದೊಡ್ಡ ಸಮಸ್ಯೆಯಾದರೂ ಅದನ್ನು ತಾಳ್ಮೆಯಿಂದ ನಿಭಾಯಿಸುತ್ತಿದ್ದರು.

ಈ ತಾಳ್ಮೆ ಎನ್ನುವುದು ಸ್ತ್ರೀ ಜನ್ಮದಲ್ಲಿ ತುಂಬಾ ಅಧಿಕವಾಗಿರುತ್ತದೆ. ಅವರು ತುಂಬಾ ಕಲಿಯುತ್ತಾರೆ. ಅದಕ್ಕೆ ಆ ವಿಧವಾಗಿ ಕಲಿತುಕೊಂಡು ಕೊನೆಯ ಜನ್ಮಕ್ಕೆ ಬರುವ ಹೊತ್ತಿಗೆ, ಅವರ ಪ್ರವರ್ತನೆ ಪತ್ರೀಜಿಯವರಂತೆ ಇರುತ್ತದೆ.

ಒಂದು ಸಂದರ್ಭದಲ್ಲಿ ನಮ್ಮ ಮಾಸ್ಟರ್ ರೊಂದಿಗೆ ನಾನು ಸ್ವಲ್ಪ ಕಠಿಣವಾಗಿ ವ್ಯವಹರಿಸಿದೆನು. ಅದು ಪತ್ರೀಜಿಯವರ ಗಮನಕ್ಕೆ ಹೋಯಿತು. ಈ ವಿಷಯ ತಿಳಿದ ಅವರು ನನ್ನೊಂದಿಗೆ, "ಏನಯ್ಯಾ! ನೀನು ಬ್ರಹ್ಮರ್ಷಿ ನಿನಗೆ ಸ್ವಲ್ಪ ತಾಳ್ಮೆ ಇರಬೇಕು. ನಾನು ಎಲ್ಲವನ್ನೂ ಸಹಿಸಿಕೊಂಡು ಇದ್ದೇನೆ ಅಲ್ಲವೇ?" ಎಂದರು.

ಇದರ ಅರ್ಥ ನಿನಗೆ ತಾಳ್ಮೆ ಇರಬೇಕು ಎಂದು ಅವರು ನನ್ನನ್ನು ಎಚ್ಚರಿಸಿದರು. ಈ ತಾಳ್ಮೆ ಎನ್ನುವುದು ಯಾರಾದರೂ ಸ್ತ್ರೀ ಜನ್ಮದಲ್ಲಿ ಚೆನ್ನಾಗಿ ಕಲಿಯುತ್ತಾರೆ. ಯಾವುದಾದರೂ, ಒಂದು ಜನ್ಮದಲ್ಲಿಯೇ ಬರುವುದಿಲ್ಲ. ಹಾಗೆ ಕೆಲವು ಜನ್ಮಗಳಲ್ಲಿ ಆ ಲಕ್ಷಣ ಸಹಜವಾಗುತ್ತದೆ.

## 3) ಸಹನೆ

ಸಹನೆ ಅವಶ್ಯಕತೆ ಎಲ್ಲರಿಗೂ ಇದೆ. ಈ ಸಹನೆ ಎನ್ನುವುದು ಸ್ತ್ರೀ ಜನ್ಮದಲ್ಲಿ ಕಲಿಯುವಂತಹ ಒಂದು ಉನ್ನತವಾದ ಲಕ್ಷಣ. ಸ್ತ್ರೀ ಜನ್ಮವನ್ನು ಯಾವಾಗಲೂ ಒಂದೇ ಕುಲದಲ್ಲಿ, ಒಂದೇ ಮತದಲ್ಲಿ, ಒಂದೇ ಪ್ರಾಂತ್ಯದಲ್ಲಿ, ಒಂದೇ ವಿಧವಾಗಿ ತೆಗೆದುಕೊಳ್ಳುವುದಿಲ್ಲ. ಪ್ರಪಂಚದಲ್ಲಿ ಎಷ್ಟು ವಿಧದ ಕುಲಗಳು, ಮತಗಳು, ಕುಟುಂಬಗಳು ಇರುವುದೋ ಎಲ್ಲದರಲ್ಲೂ ಸ್ತ್ರೀಯರು ಜನ್ಮಗಳನ್ನು ತೆಗೆದುಕೊಳ್ಳುತ್ತಾರೆ. ತೆಗೆದುಕೊಳ್ಳಬೇಕು ಕೂಡಾ...

ನೀವು ಗಮನಿಸಿದರೆ ಎಷ್ಟೋ ಸಂಸಾರದಲ್ಲಿ ಗಂಡಂದಿರು ತುಂಬಾ ಕಠಿಣವಾಗಿ ವ್ಯವಹರಿಸುತ್ತಾರೆ. ಸ್ತ್ರೀಯರ ಮೇಲೆ ಎಷ್ಟೋ ನಿರ್ಬಂಧಗಳನ್ನು ವಿಧಿಸುತ್ತಾರೆ. ಗಂಡ ಯಾವಾಗಲೂ ಹೆಂಡತಿಯನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಬೇಕೆಂದು ನೋಡುತ್ತಾನೆ. ಅವನು ಹೆಂಡತಿಗೆ ಹೇಳದೆ ಎಲ್ಲಿಗಾದರೂ ಹೋಗುತ್ತಾನೆ ಆದರೆ ಹೆಂಡತಿ ಮಾತ್ರ ಗಂಡನಿಗೆ ಹೇಳದಂತೆ ಅವನ ಪರ್ಮಿಷನ್ ಇಲ್ಲದೆ ಎಲ್ಲಿಗೂ ಹೋಗಬಾರದು. ಒಂದು ವೇಳೆ ಹೆಂಡತಿ ಕೇಳದಿದ್ದರೆ ಎದುರು ತಿರುಗಿ ಮಾತನಾಡಿದರೆ ಹೊಡೆಯುವುದಕ್ಕೂ ಉಪಕ್ರಮಿಸುತ್ತಾನೆ.

ಗಂಡ ಆ ವಿಧವಾಗಿ ಹೆಂಡತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ನೋಡುತ್ತಾನೆ. ಗಂಡ ಎಷ್ಟು ಕಿರುಕುಳ ಕೊಟ್ಟರೂ, ಎಷ್ಟು ಕಠಿಣವಾಗಿ ವ್ಯವಹರಿಸಿದರೂ, ಹೆಂಡತಿ ಸಹನೆಯಿಂದ ಸಹಿಸುತ್ತಾಳೆ. ಅಷ್ಟೇ ಹೊರತು ಗಂಡನನ್ನು ಬಿಡಲು ಇಷ್ಟಪಡುವುದಿಲ್ಲ. ಅದು ಸ್ತ್ರೀ ಲಕ್ಷಣ. ನಾವು ಗಮನಿಸಿದರೆ ಕೆಲವು ಕುಲಗಳಲ್ಲಿ, ಮತಗಳಲ್ಲಿ ಸ್ತ್ರೀಯರ ಮೇಲೆ ಎಷ್ಟೋ ವಿಧವಾದ ನಿರ್ಬಂಧಗಳನ್ನು ವಿಧಿಸುತ್ತಾರೆ. ಸ್ತ್ರೀಯನ್ನು ಒಬ್ಬ ಮನುಷ್ಯಳಂತೆ ಅಲ್ಲದೆ ಗುಲಾಮಳಂತೆ ಭಾವಿಸುತ್ತಾರೆ. ಅವರಿಗಾಗಿಯೇ ಸ್ತ್ರೀ ಇರುವಂತೆ ವರ್ತಿಸುತ್ತಾರೆ.

ಆದರೂ ಎಲ್ಲವನ್ನೂ ಸಹಿಸಿ ಸ್ತ್ರೀ ಸಂಸಾರವನ್ನು ಮುಂದುವರಿಸಿಕೊಂಡು ಹೋಗುತ್ತಾಳೆ. ಆದ್ದರಿಂದ ಈ ಸಹನೆ ಎನ್ನುವುದು ಸ್ತ್ರೀ ಸಹಜ ಲಕ್ಷಣವಾಗಿದೆ. ಆ ಲಕ್ಷಣ ಇರುವುದರಿಂದಲೇ ಸಂಸಾರಗಳು ಹೀಗೆ ನಡೆಯುತ್ತಿದೆ. ಆದರೆ ಎಲ್ಲೋ ಕಡಿಮೆ ಸಂದರ್ಭಗಳಲ್ಲಿ ಹಾಗೆ ಎದುರು ತಿರುಗಿದ ಸ್ತ್ರೀ, ಸಹನೆ ಇಲ್ಲದೆ ಜಗಳಗಳು ನಡೆಯುತ್ತದೆ. ಹಾಗೇ ಮುಂದುವರೆದು ವಿಚ್ಛೇದನಗಳವರೆಗೂ ಹೋಗುತ್ತದೆ.

ಪುರುಷ ಅಹಂಕಾರದೊಂದಿಗೆ, ಸಮಾಜವು ಸ್ತ್ರೀಯರನ್ನು ಬಹಳ ಹಿಂದಿನಿಂದಲೂ, ಯುಗ ಯುಗಗಳಿಂದಲೂ, ಅವಳನ್ನು ನಿಗ್ರಹಿಸಿದೆ. ಸ್ತ್ರೀಯರಿಗೆ ಪುರುಷರೊಂದಿಗೆ ಸಮಾನ ಹಕ್ಕು ಇಲ್ಲದಂತೆ ಮಾಡಿದೆ. ಹಿಂದೆ ಹಿರಿಯರು ಪಂಡಿತರು ಹೆಚ್ಚಾಗಿ ಪುರುಷರೇ ಇರುತ್ತಿದ್ದರು. ಹಿರಿಯರು ತಮ್ಮ ಬುದ್ಧಿವಂತಿಕೆಯನ್ನು ಬಳಸಿ ಏನು ಮಾಡಿದರು? ಎಚಿದರೆ, ಸ್ತ್ರೀಗೆ ಪತಿವ್ರತೆ ಎನ್ನುವ ಬಿರುದನ್ನು ಕೊಟ್ಟರು. ಆ ಪತಿವ್ರತೆ ಎನ್ನುವ ಹೆಸರಿನೊಂದಿಗೆ ಎಷ್ಟೋ ನಿಬರ್ಂಧಗಳನ್ನು ವಿಧಿಸಿದರು. ಅವರು ಹೇಳಿದ್ದೆ ಸರಿ ಎಂದು ತಿಳಿಸಲು ಪುರಾಣಗಳಲ್ಲಿ ಪತಿವ್ರತೆಯರ ಕಥೆಗಳನ್ನೂ ಅವರು ಬರೆದರು.

ಅವರು ಗಂಡನಿಗಾಗಿ ಎಷ್ಟು ಕಷ್ಟಗಳು ನಷ್ಟಗಳನ್ನು ನೋವುಗಳನ್ನು ಸಹಿಸಿಕೊಳ್ಳುತ್ತಾ ಎಷ್ಟೋ ಪವಿತ್ರವಾಗಿ ಜೀವಿಸುತ್ತಿದ್ದರು. ಗಂಡನ ಹೊರತು ಮತ್ತೊಬ್ಬರನ್ನು ಕಣ್ಣೆತ್ತಿ ನೋಡಲು ಆಸ್ಪದವಿರಲಿಲ್ಲ. ಮತ್ತೊಬ್ಬರ ಮೇಲೆ ದೃಷ್ಟಿ ಬಿದ್ದರೆ ಅವರ ಪಾತಿವ್ರತ್ಯ ಹೋದಂತೆಯೇ.. ಅಂತಹ ಕಥೆಗಳನ್ನು ಬರೆಯುತ್ತಿದ್ದರು. ಅವೆಲ್ಲವೂ ಈ ಸಮಾಜದಲ್ಲಿ ನಾಟಿ ಹೋಗಿ, ಸ್ತ್ರೀಯರಾದ ನಾವು ಹಾಗೆ ಇರಬೇಕು ಎಂದು ಭಾವಿಸುತ್ತಿದ್ದರು. ಸತಿಗೆ 'ಪತಿಯೇ ಪ್ರತ್ಯಕ್ಷ ದೈವ' ಅಂದರೆ ಹೆಂಡತಿಗೆ ದೇವರು ಎಲ್ಲಿಯೂ ಇಲ್ಲ ಎದುರಿಗೆ ಇರುವ ಗಂಡನೇ ದೇವರು ಎಂದು ಆ ಪುರಾಣ ಕಾಲದಲ್ಲಿನ ಹಿರಿಯರು ಬರೆದಿದ್ದರು. ಆದರೆ ಹಾಗೆ ಬರೆದವರು ಕೂಡ ಪುರುಷ ಪಂಡಿತರೇ..

ಸತಿಗೆ 'ಪತಿಯೇ ಪ್ರತ್ಯಕ್ಷ ದೈವ' ಎಂದು ಬರೆದರು. ಆದರೆ ಪತಿಗೆ 'ಸತಿಯೇ ಪ್ರತ್ಯಕ್ಷ ದೈವ' ಎಂದು ಎಲ್ಲೂ ಬರೆದಿಲ್ಲ... ಈ ಕಥೆಗಳೆಲ್ಲ ಓದಿ ಅದೇ ಸರಿ ಏನೋ ಎಚಿದು ಸ್ತ್ರೀಯರು ಭಾವಿಸುತ್ತಿದ್ದರು. ಸ್ತ್ರೀ ಎಂದ ಮೇಲೆ ಹಾಗೆ ಜೀವಿಸಬೇಕೇನೋ!? ಎನ್ನುವಂತಹ ಭಾವನೆ ಸಮಾಜದಲ್ಲಿ ಏರ್ಪಟ್ಟಿತು. ಯಾವುದು ಏನಾದರೂ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುವುದು ಏನೆಂದರೆ, ಇಂತಹವರೆಲ್ಲ ಸಮಾಜದಲ್ಲಿ ಇರುವುದರಿಂದ ಆ ಸ್ತ್ರೀ ಜನ್ಮದಲ್ಲಿ ಸಹನೆ ಎನ್ನುವುದನ್ನು ಆತ್ಮ ಕಲಿತುಕೊಳ್ಳುತ್ತದೆ. ಇವೆಲ್ಲ ಪ್ರಕೃತಿ ನಿರ್ಣಯದ ಪ್ರಕಾರವೇ ನಡೆಯುತ್ತವೆ ಎನ್ನುವುದು ಗಮನಾರ್ಹ ವಿಷಯ.

ಆದ್ದರಿಂದ ಗಮನಿಸಿದರೆ ಯುಗಗಳಿಂದಲೂ ಗಂಡನೊಂದಿಗೆ ಸಮಾನವಾದ ಹಕ್ಕುಗಳು ಇಲ್ಲದಂತೆ ಈ ಸಮಾಜದಲ್ಲಿ ಮಾಡಲಾಗಿದೆ. ಸ್ತ್ರೀ ಮನೆಗೆ, ಅಡುಗೆ ಮನೆಗೆ ಪರಿಮಿತವಾಗಿದ್ದಾಳೆ. ನೀವು ಮಹಮದೀಯ ಮತದಲ್ಲಿ ನೋಡಿದರೆ ಸ್ತ್ರೀಗೆ ಯಾವ ವಿಧವಾದ ಹಕ್ಕುಗಳು ಇರುವುದಿಲ್ಲ. ಅವರು ಹೊರಗೆ ಬರಲೇಬಾರದು. ಬಂದರೂ ಬುರುಖಾ ಹಾಕಿಕೊಳ್ಳಬೇಕು.

ಆದರೆ ಪುರುಷನಿಗೆ ಯಾವ ನಿಯಮಗಳು ಇಲ್ಲ. ಆ ಮತದಲ್ಲಿ ಪುರುಷನು ಎಷ್ಟು ಜನ ಸ್ತ್ರೀಯರನ್ನಾದರೂ ಮದುವೆ ಮಾಡಿಕೊಳ್ಳಬಹುದು. ಆ ಹಕ್ಕು ಹೆಂಡತಿಗೆ ಇಲ್ಲ

ಒಂದು ವೇಳೆ ಹೆಂಡತಿ ಅವರಿಗೆ ಇಷ್ಟವಿಲ್ಲದಿದ್ದರೆ ಮೂರು ಸಾರಿ ತಲಾಖ್ ಕೇಳಿ ನಿನಗೆ ನನಗೆ ಸಂಬಂಧವಿಲ್ಲ ಎಂದು ವಿಚ್ಛೇದನ ನೀಡಬಹುದು. ಅಷ್ಟೇ ಅಲ್ಲ ಸ್ತ್ರೀಯರು ಮಸೀದಿಗೆ ಹೋಗಬಾರದು, ಪುಣ್ಯಕ್ಷೇತ್ರಗಳಿಗೆ ಹೋಗಬಾರದು, ಮಕ್ಕಾ ಆಗಲಿ, ಯಾವ ಪುಣ್ಯಕ್ಷೇತ್ರವಾಗಲಿ ಹೋಗುವ ಹಕ್ಕು ಅವರಿಗೆ ಇಲ್ಲ. ಒಂದು ವಿಧವಾಗಿ ಅವರ ಜೀವನ ಪುರುಷರಿಗೆ ಸೀಮಿತ ಎನ್ನುವಂತೆ ಜೀವಿಸುತ್ತಾರೆ.

ಮುಸ್ಲಿಂ ಮತದಲ್ಲಿ ಸ್ತ್ರೀಯರು ಹೇಗೆ ಇರುತ್ತಾರೆ ಎಂದರೆ ಮಕ್ಕಳನ್ನು ಹೆತ್ತು ಬೆಳೆಸುವ ಯಂತ್ರದಂತೆ ಇರುತ್ತಾರೆ. ಇದೆಲ್ಲಾ ಸಹನೆ ಕಲಿತುಕೊಳ್ಳಲು ಆ ಮತದಲ್ಲಿ ಇರುವ ಏರ್ಪಾಟು ಎಂದುಕೊಳ್ಳಬೇಕು. ಒಂದು ವಿಧವಾಗಿ ಹೇಳಬೇಕೆಂದರೆ ಮಹಮದೀಯ ಮತದಲ್ಲಿ ಸ್ತ್ರೀ ತುಂಬಾ ಸಹನೆಯನ್ನು ಕಲಿತುಕೊಳ್ಳುತ್ತಾಳೆ. ಮಹಮ್ಮದೀಯ ಮತದಲ್ಲಿ ಪುರುಷರಾಗಿರುವವರು ಕೂಡ ಸಹನೆ ಕಲಿತುಕೊಳ್ಳಲು ಮರು ಜನ್ಮದಲ್ಲಿ ಮತ್ತೆ ಸ್ತ್ರೀಯರಾಗಿ ಜನಿಸಬಹುದು. ಆದರೆ ಅದು ಅವರಿಗೆ ತಿಳಿದಿಲ್ಲ ಅವರು ಇನ್ನೂ ತಮಗೆ ಜನ್ಮವಿರುವುದಿಲ್ಲ ಎಂದುಕೊಳ್ಳುತ್ತಾರೆ.

ಹಾಗೆ ಒಂದು ಪೂರ್ಣಾತ್ಮವಾಗಬೇಕು ಅಂದರೆ ಯಾವುದೋ ಒಂದು ಮತದಲ್ಲಿ ಜನ್ಮ ತೆಗೆದುಕೊಂಡರೆ ಪೂರ್ಣಾತ್ಮ ಆಗೋದಿಲ್ಲ ಎಲ್ಲಾ ವಿಧದ ಮತಗಳಲ್ಲೂ ಜನ್ಮ ತೆಗೆದುಕೊಳ್ಳಬೇಕು. ಅದಕ್ಕೆ ಭೂಮಿಯ ಮೇಲೆ ಇಷ್ಟು ವಿಧವಾದ ಮತಗಳಿವೆ, ಯಾರಾದರೂ ಸರಿ ನಾನು ಇಂತಹ ಮತ ಎಂದು ಭಾವಿಸಿದ್ದಾನೆ ಎಂದರೆ ಅವನು ಇನ್ನು ಅಜ್ಞಾನದಲ್ಲಿ ಇದ್ದಂತೆ. ಎಲ್ಲಾ ಒಂದೇ ಎನ್ನುವ ಭಾವದಲ್ಲಿದ್ದರೆ ಅವನಿಗೆ ಜ್ಞಾನವಿದ್ದಂತೆ.

ಹಿಂದೂ ಮತದಲ್ಲಿ ಇದ್ದು ಮುಸ್ಲಿಂಮರನ್ನು ದ್ವೇಷಿಸುತ್ತಾನೆ. ನಂತರ ಅವನೇ ಮುಸ್ಲಿಂ ಮತದಲ್ಲಿ ಹುಟ್ಟುತ್ತಾನೆ ಹಿಂದೂಗಳನ್ನು ದ್ವೇಷಿಸುತ್ತಾನೆ. ಇಲ್ಲಿ ಹಿಂದೂ ಮತದಲ್ಲಿ ಹಿಂದೂವಾಗಿ ಹೊಡೆದಾಡುತ್ತಾನೆ, ಮುಸ್ಲಿಮರನ್ನು ಕೊಲ್ಲುತ್ತಾನೆ. ಮುಸ್ಲಿಂ ಮತದಲ್ಲಿ ಹುಟ್ಟಿ ನಂತರ ಹಿಂದೂಗಳ ಮೇಲೆ ಹೊಡೆದಾಡುತ್ತಾನೆ, ಹಿಂದುಗಳನ್ನು ಕೊಲ್ಲುತ್ತಾನೆ. ಈ ಸೃಷ್ಟಿಯಲ್ಲಿ ಇರುವ ಏರ್ಪಾಡು ತುಂಬಾ ವಿಚಿತ್ರವಾಗಿರುತ್ತದೆ.

ಮೇಲೆ ಯಾವುದು ಕಾಣಿಸುವುದೋ, ನಡೆಯುತ್ತದೋ, ಇದೆಲ್ಲಾ ವಾಸ್ತವವಲ್ಲ. ಇದೆಲ್ಲಾ ಒಂದು ಮಾಯೆ. "ಮಾಯೆ" ಎಂದರೆ ಇದ್ದಂತೆ ಕಾಣಿಸುತ್ತದೆ ಆದರೆ ಕೊನೆಗೆ ಇರುವುದಿಲ್ಲ. ಈಗ ಎಲ್ಲವೂ ನಡೆಯುತ್ತಿರುವಂತೆ ಎಲ್ಲಾ ಇರುವಂತೆ ಕಾಣಿಸುತ್ತದೆ ಆದರೆ ಯಾವುದು ಶಾಶ್ವತವಾಗಿ ಇರುವುದಿಲ್ಲ.

ಒಂದು ಸಿನಿಮಾದಲ್ಲಿ ಒಬ್ಬ ಮಹಾರಾಜನ ವೇಷ ಹಾಕಿದರೆ, ನಿಜವಾಗಿ ಅವನು ರಾಜನಾದಂತೆಯೇ! ಒಬ್ಬ ಮಿನಿಸ್ಟರ್ ವೇಷ ಹಾಕಿದನು ಅವನು ಮಿನಿಸ್ಟರ್ ಆಗಿರುವಂತೆಯೇ! ಅದು ಆ ಸಿನಿಮಾಗೆ ಮಾತ್ರ ಸೀಮಿತ. ಈ ಜೀವನವು ಒಂದು

ಸಿನಿಮಾ... ಆ ಸಿನಿಮಾವನ್ನು ಒಬ್ಬ ಡೈರೆಕ್ಟರ್ ನಡೆಸಿದರೆ, ಈ ಜಗತ್ತು ಎನ್ನುವ ನಾಟಕವನ್ನು ಆ ಜಗನ್ನಾಟಕ ಸೂತ್ರಧಾರಿ ಸೃಷ್ಟಿಕರ್ತ ಆಡಿಸುತ್ತಿದ್ದಾನೆ ಅಷ್ಟೇ.., ನನ್ನದು ನಾಟಕದಲ್ಲಿ ಒಂದು ಪಾತ್ರ ಎನ್ನುವ ಜ್ಞಾನ ಇದ್ದರೆ ಯಾರ ಮೇಲೆಯೂ ನಿನಗೆ ಕೋಪ ಬರುವುದಿಲ್ಲ, ಅಸೂಯೆಯಾಗುವುದಿಲ್ಲ. ಯಾರನ್ನು ದೂಷಿಸುವುದಿಲ್ಲ, ವಿಮರ್ಶಿಸುವುದಿಲ್ಲ, ಯಾರನ್ನು ಕುರಿತು ನಿರ್ಣಯಗಳನ್ನು ಹೇಳುವುದಿಲ್ಲ. ಆದರೆ ಇದು ತಿಳಿಯದೆ ಅಜ್ಞಾನದಿಂದ ಈ ಕೆಲಸಗಳೆಲ್ಲವನ್ನು ಮಾಡುತ್ತಿದ್ದಾರೆ.

ಈಗ ಭಾರತ ದೇಶದಲ್ಲಿ ಎಷ್ಟೋ ಜನರು ತುಂಬಾ ಕಷ್ಟ ಪಡುತ್ತಿದ್ದಾರೆ. ಹಿಂದೂ ಮತ ಬಿಟ್ಟು, ಬೇರೆ ಮತಗಳಿಗೆ ಹೋಗುತ್ತಿದ್ದಾರೆ. ವಿಚಿತ್ರವೆಂದರೆ ಯಾವಾಗಲೂ ಸೃಷ್ಟಿಯಲ್ಲಿ ಯಾವುದು ಪೂರ್ತಿಯಾಗಿ ಇಲ್ಲದಂತೆ ಹೋಗುವುದಿಲ್ಲ... ಎಲ್ಲಾ ಇರಬೇಕು ಎಲ್ಲವೂ ಇರುತ್ತವೆ ಕೂಡಾ..

ಕೆಲವು ದೇಶಗಳಲ್ಲಿ ಅಂದರೆ ರಷ್ಯಾ ಹಾಗೂ ಮುಸ್ಲಿಂ ದೇಶಗಳಲ್ಲಿ ಹಿಂದೂ ಮತ ವ್ಯಾಪ್ತವಾಗುತ್ತಿದೆ. ಎಲ್ಲಿ? ಏನು ಇರಬೇಕು ಎಲ್ಲಿ ಯಾವುದು ಇರಬಾರದು ಎನ್ನುವುದು ಸೃಷ್ಟಿಕರ್ತನ ನಿರ್ಣಯದ ಪ್ರಕಾರ ನಡೆಯುತ್ತದೆ. ಸೃಷ್ಟಿ ಹೀಗೆ ಮುಂದುವರೆಯಬೇಕೆಂದರೆ, ಎಲ್ಲವೂ ಇರಲೇಬೇಕು. ಆದ್ದರಿಂದ ನಾವು ಯಾರು? ಏನು ಮಾಡಬೇಕು? ನಾವು ಏನು ಸಾಧಿಸಬೇಕು? ಎನ್ನುವುದರ ಮೇಲೆ ದೃಷ್ಟಿ ಇಡಬೇಕು.

ಅವೆಲ್ಲವೂ ನಮಗೆ ಅಗತ್ಯವಿಲ್ಲ. ಆತನೇ ನೋಡಿಕೊಳ್ಳುತ್ತಾನೆ. ನಮ್ಮ ಆತುರತೆಯೆಲ್ಲಾ ಯಾವಾಗಲೂ ಯಾವ ವಿಧವಾಗಿ ಪೂರ್ಣಾತ್ಮವಾಗಬೇಕೆನ್ನುವುದರ ಮೇಲೆ ಇರಬೇಕು. ಆದ್ದರಿಂದ ಮಾನವನು ಈ ಲಕ್ಷಣಗಳನ್ನು ಸ್ತ್ರೀ ಜನ್ಮಗಳಲ್ಲಿ ಕೆಲವು, ಪುರುಷ ಜನ್ಮಗಳಲ್ಲಿ ಕೆಲವನ್ನು ಸಂಗ್ರಹಿಸಿಕೊಂಡು ಪರಿಪೂರ್ಣನಾಗುತ್ತಾನೆ. ಅದೇ ರೀತಿ ಮುಂದುವರೆದು ಕೊನೆಗೆ ಪೂರ್ಣಾತ್ಮನಾಗಬಲ್ಲ.

## 4) ತ್ಯಾಗ

ಸ್ತ್ರೀ ಜನ್ಮದಲ್ಲಿ ಕಲಿಯಬೇಕಾಗಿರುವ ಮತ್ತೊಂದು ಮುಖ್ಯ ಲಕ್ಷಣ ತ್ಯಾಗ. ತ್ಯಾಗ ಎಂದರೆ ಸರಾಸರಿ ಎಲ್ಲಾ ಆಸೆ ಆಕಾಂಕ್ಷೆಗಳನ್ನು ತ್ಯಜಿಸುವುದು. ಗಂಡನಿಗಾಗಿ, ಕುಟುಂಬಕ್ಕಾಗಿ, ಮಕ್ಕಳಿಗಾಗಿ ಸ್ತ್ರೀ ತನಗೆ ಇರುವಂತಹ ಕೋರಿಕೆಗಳು, ಸಂತೋಷಗಳನ್ನು ತ್ಯಜಿಸುತ್ತಾಳೆ. ಅಂದರೆ ತ್ಯಾಗ ಮಾಡುತ್ತಾಳೆ.

ಗಮನಿಸಿದರೆ ಯಾವ ಹೆಂಡತಿಯಾದರೂ ಗಂಡ ಮಕ್ಕಳು ತಿಂದ ನಂತರವೇ ತಿನ್ನುತ್ತಾಳೆ, ಅಡಿಗೆ ಮಾಡುವುದು ತಾನೇ. ಆದರೂ ಎಲ್ಲರೂ ತಿಂದ ನಂತರವೇ ತಾನು ತಿನ್ನುತ್ತಾಳೆ. ಏನಾದರೂ ಉಳಿದರೆ ಅದು ತಿಂದು ಸಂತೃಪ್ತಿ ಹೊಂದುತ್ತಾಳೆ. ತನಗೆ

ಇಷ್ಟವಾಗಿರುವುದು ಮಾಡಿದ್ದೇನೆ ಅದು ಉಳಿದಿಲ್ಲ ಎಂದುಕೊಳ್ಳುವುದಿಲ್ಲ. ಹಾಗೆ ಗಂಡ ಮಕ್ಕಳು ತಿಂದರೆ ತನ್ನ ಹೊಟ್ಟೆ ತುಂಬಿದಂತೆ ಭಾವಿಸುತ್ತಾಳೆ.

ಆ ಮಾಡಿದ ಅಡುಗೆ ರುಚಿಯಾಗಿದ್ದರೆ ಅವರೇ ಹೆಚ್ಚಾಗಿ ತಿನ್ನುತ್ತಾರೆ. ಹಾಗಿರುವಾಗ ಒಮ್ಮೊಮ್ಮೆ ಸಾಲುವುದಿಲ್ಲ. ಆದರೂ ಆಕೆ ಅಸಂತೃಪ್ತಿ ಹೊಂದುವುದಿಲ್ಲ. ದೊಡ್ಡ ತ್ಯಾಗ ಮಾಡುತ್ತಾಳೆ. ಆಕೆಗೆ ತಾನು ತಿನ್ನುವುದಕ್ಕಿಂತ, ಗಂಡ ಮಕ್ಕಳು ತಿಂದರೇನೇ ತೃಪ್ತಿಯಾಗಿ ಭಾವಿಸುತ್ತಾಳೆ. ಹಾಗೆ ಜೀವನದಲ್ಲಿ ಎಷ್ಟೋ ವಿಷಯಗಳಲ್ಲಿ ಗಂಡನಿಗಾಗಿ, ಮಕ್ಕಳಿಗಾಗಿ ತ್ಯಾಗ ಮಾಡುತ್ತಾಳೆ.

ಅವಳಿಗೂ ಕೂಡ ಪುರುಷನಂತೆ ಎಷ್ಟೋ ಕೋರಿಕೆಗಳು, ಆಸೆಗಳು, ಸಂತೋಷಗಳು ಇರುತ್ತವೆ. ಆದರೆ ತನ್ನ ಕುಟುಂಬಕ್ಕಾಗಿ ಅವುಗಳೆಲ್ಲವನ್ನು ತ್ಯಾಗ ಮಾಡುತ್ತಾಳೆ. ಅಷ್ಟೇ ಅಲ್ಲ ಆ ಮಕ್ಕಳನ್ನು ಹೆತ್ತು ಬೆಳೆಸುವ ಸಮಯದಲ್ಲಿ ಆ ಚಿಕ್ಕ ಮಕ್ಕಳಿಗಾಗಿ ತನ್ನ ನಿದ್ರೆಯನ್ನು ತ್ಯಾಗ ಮಾಡುತ್ತಾಳೆ. ತನ್ನ ಸುಖಗಳನ್ನು ತ್ಯಾಗ ಮಾಡುತ್ತಾಳೆ. ಹಾಗೆ ಎಷ್ಟೋ ಜನ್ಮಗಳಲ್ಲಿ ತ್ಯಾಗ ಮಾಡುತ್ತಾ ಮಾಡುತ್ತಾ, ತ್ಯಾಗ ಎನ್ನುವುದು ಸ್ತ್ರೀಗೆ ಸಹಜ ಗುಣವಾಗುತ್ತದೆ.

ನಾವು ಆತ್ಮ ಎಂದು ತಿಳಿದುಕೊಂಡಿದ್ದೇವೆ, ಆತ್ಮರಾದ ನಾವು ಪೂರ್ಣಾತ್ಮರಾಗಬೇಕು ಎನ್ನುವುದೇ ನಮ್ಮ ಲಕ್ಷ್ಯ ಎಂದು ಅರ್ಥ ಮಾಡಿಕೊಂಡಿದ್ದೇವೆ. 350 ಜನ್ಮಗಳು ದಾಟಿದ್ದೇವೆ ಆದ್ದರಿಂದ ನಮ್ಮ ಲಕ್ಷ್ಯ ಸಾಧನೆಗಾಗಿ ನಮ್ಮ ಆತ್ಮಾಭಿವೃದ್ಧಿಗಾಗಿ ಈಗ ಎಷ್ಟೋ ತ್ಯಾಗ ಮಾಡುತ್ತಿದ್ದೇವೆ, ರುಚಿಗಳನ್ನು ಬಿಡುತ್ತಿದ್ದೇವೆ. ನಮ್ಮ ಕೋರಿಕೆಗಳು, ಸಂತೋಷಗಳು, ಇಷ್ಟಗಳು, ಸಿನಿಮಾಗಳು, ಸೀರಿಯಲ್ಸ್ ಹೀಗೆ ಎಷ್ಟೋ ತ್ಯಾಗ ಮಾಡುತ್ತಿದ್ದೇವೆ. ಇದೆಲ್ಲ ಗತ ಜನ್ಮದಲ್ಲಿ ತ್ಯಾಗ ಎನ್ನುವ ಲಕ್ಷಣ ಕಲಿತಿರುವುದರಿಂದಲೇ ಸಾಧ್ಯವಾಗಿದೆ ಆರಂಭದ ಜನ್ಮದಲ್ಲಿರುವವರು ತ್ಯಾಗ ಮಾಡಲಾರರು.

ರಮಣ ಮಹರ್ಷಿ ಜೀವನದಲ್ಲಿ ಎಷ್ಟೋ ತ್ಯಾಗ ಮಾಡಿದರು. ಏನಿದ್ದರೆ ಅದನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಪಂಚಭಕ್ಷ್ಯ ಪರಮಾನ್ನಗಳು ಯಾವುದು ಬಯಸಲಿಲ್ಲ. ಆತನಿಗೆ ಶರೀರ ಸಾಧನೆ ಮಾಡಿದರೆ ಸಾಕು. ಶರೀರ ತನ್ನ ಲಕ್ಷಕ್ಕೆ ಅಗತ್ಯವಾದ ಕೆಲಸಗಳನ್ನು ಮಾಡಿದರೆ ಸಾಕು ಎಂದುಕೊಂಡರು. ಬೇರೆ ಯಾವುದನ್ನು ಅವರು ಗಮನಿಸಲಿಲ್ಲ.

ನಾವೆಲ್ಲರೂ ಆ ಸ್ಥಿತಿಯಲ್ಲಿದ್ದೇವೆ. ಆ ತ್ಯಾಗ ಗುಣ ನಮ್ಮೆಲ್ಲರಲ್ಲೂ ಇದೆ. ಎಷ್ಟು ತ್ಯಜಿಸಿದ್ದೇವೆಂದರೆ, ಇರುವುದರಲ್ಲಿಯೇ ಹೊಂದಿಕೊಳ್ಳುತ್ತಿದ್ದೇವೆ. ಎಲ್ಲರಂತೆ ಇರಬೇಕೆಂದು, ಜೀವಿಸಬೇಕೆಂದುಕೊಂಡಿಲ್ಲ. ಇರುವುದರಲ್ಲಿಯೇ ಸಂತೃಪ್ತಿಯಾಗಿ ಜೀವಿಸುತ್ತಿದ್ದೇವೆ. ಬೇರೆ ಎಲ್ಲವನ್ನು ತ್ಯಾಗ ಮಾಡುತ್ತಿದ್ದೇವೆ.

ನಾವು ಎಷ್ಟೋ ಜನ್ಮಗಳಲ್ಲಿ ಆ ತ್ಯಾಗ ಎನ್ನುವುದನ್ನು ಕಲಿತುಕೊಂಡಿದ್ದರಿಂದ ಈಗ ಆ ಲಕ್ಷಣ ನಮ್ಮ ಲಕ್ಷ್ಯ ಸಾಧನೆಗೆ ಎಷ್ಟೋ ಉಪಯೋಗವಾಗುತ್ತಿದೆ. ಇವೆಲ್ಲವನ್ನು ಯಾರು ಬಿಡುತ್ತಾರೀ? ಮಾಂಸ ಬಿಡಬೇಕೆಂದರೆ ಬಿಡುತ್ತಾರಾ? ಯಾರೂ ಬಿಡುವುದಿಲ್ಲ. " ನೀನು ಬಿಟ್ಟರೆ ಬಿಡು ನಾವು ಜೀವಿಸುವುದು ಏತಕ್ಕಾಗಿ? ತಿನ್ನದಿದ್ದರೆ ಈ ಜೀವನ ಏತಕ್ಕಾಗಿ? ಎನ್ನುವಂತೆ ಮಾತನಾಡುತ್ತಾರೆ. ತಿನ್ನದಿದ್ದರೆ ಅದು ಒಂದು ಜೀವನವೇ? ಎನ್ನುತ್ತಾರೆ.

ನಾವು ತಿನ್ನುವುದು ಹುಳಿಸಾರು ಎಂದು ಆಕ್ಷೇಪಿಸುತ್ತಾರೆ. ಎಷ್ಟೋ ತ್ಯಾಗ ಗುಣವಿದ್ದರೆ ಹೊರತು ಯಾವ ಮಾನವನಾದರೂ ತನ್ನ ಲಕ್ಷವನ್ನು ಸಾಧಿಸಲಾರ. ಆತ್ಮವನ್ನು ತಿಳಿದುಕೊಳ್ಳಲು, ಆತ್ಮವನ್ನು ಅನುಭವಕ್ಕೆ ತಂದುಕೊಳ್ಳಲು ಇವೆಲ್ಲ ತ್ಯಾಗ ಮಾಡುತ್ತಾ ಈ ವಿಷಯಗಳ ಬಗ್ಗೆ ವಿರಕ್ತಿ ಹೊಂದುತ್ತಿದ್ದೇವೆ. ಭೋಗಗಳ ಮೇಲೆ ಸುಖಗಳ ಮೇಲೆ ವಿರಕ್ತಿ ಹೊಂದುವುದೇ ತ್ಯಾಗ. ಅದಕ್ಕೆ "ಆತ್ಮಾಸಕ್ತಿ ವಿಷಯ ವಿರಕ್ತಿ" ಇರಬೇಕು ಎನ್ನುತ್ತಾರೆ.

ಪತ್ರೀಜಿಯವರ ಪರಿಚಯವಾಗುವ ಮೊದಲು ನನ್ನ ಜೀವನ ಒಂದು ರೀತಿಯಾಗಿ ಇತ್ತು. ಅವರ ಪರಿಚಯವಾದ ನಂತರ ಜೀವನ ಸಂಪೂರ್ಣವಾಗಿ ಬದಲಾಯಿತು. ಅದಕ್ಕೆ ಮೊದಲು ಸಂಪಾದನೆ, ಸಂತೋಷಗಳು, ಭೋಗಗಳು ಇವುಗಳೇ ಹೆಚ್ಚು ಎಂದುಕೊಳ್ಳುತ್ತಿದ್ದೆನು. ಈಗ ಇವೆಲ್ಲವನ್ನೂ ತ್ಯಜಿಸಿದೆನು. ಹಾಗಾದರೆ ನಾನು ಹೇಗೆ ತ್ಯಾಗ ಮಾಡಲಾಯಿತು ಎಂದರೆ, ಹಿಂದಿನ ಜನ್ಮಗಳಲ್ಲಿ ಆ ಲಕ್ಷಣ ಸಂಪಾದಿಸಿಕೊಂಡಿದ್ದೆನು... ಆ ಲಕ್ಷಣ ಹೆಚ್ಚು ನಿಮ್ಮಲ್ಲಿದ್ದರೆ ನೀವು ಕೂಡಾ ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದುತ್ತೀರಿ. ಎಷ್ಟು ಅಭಿವೃದ್ಧಿ ಹೊಂದಿದರೆ ದುಃಖಕ್ಕೆ ಅಷ್ಟು ದೂರವಾಗುತ್ತೀರಿ.

ಎಷ್ಟೋ ಸ್ತ್ರೀ ಜನ್ಮಗಳನ್ನು ಎತ್ತಿ ನಾವು ಈ ತ್ಯಾಗ ಎನ್ನುವ ಲಕ್ಷಣವನ್ನು ಸಂಪಾದಿಸಿಕೊಂಡಿದ್ದೇವೆ. ಕೊನೆಗೆ ಧ್ಯಾನಕ್ಕೆ ಬಂದರೂ, ಹೆಂಡತಿ ತನ್ನ ಗಂಡ ಧ್ಯಾನ ಮಾಡಿದರೆ ಸಾಕು ಎಂದುಕೊಳ್ಳುತ್ತಾಳೆ. ನಾನು ಹೇಳುತ್ತಾ ಇರುತ್ತೇನೆ ನಿನ್ನ ಗಂಡನ ಆತ್ಮ ಸ್ಥಿತಿ ಬೇರೆ, ನಿನ್ನ ಆತ್ಮ ಸ್ಥಿತಿ ಬೇರೆ ಎಂದು. ನೀನು ಸಾಧನೆ ಮಾಡು ಆತನ ಗೊಡವೆ ನಿನಗೇಕೆ ಎಂದರೆ, ಆಕೆಗೆ ತೃಪ್ತಿ ಇರುವುದಿಲ್ಲ. ಆತ ಕೂಡಾ ಧ್ಯಾನ ಮಾಡಿದರೆ ಸಾಕು.. ಆತ ಇದಕ್ಕೆ ಬಂದರೆ ಚೆನ್ನಾಗಿರುತ್ತದೆ ಎಂದುಕೊಳ್ಳುತ್ತಾಳೆ. ಹಾಗೆ ದೃಷ್ಟಿ ಎಲ್ಲವೂ ಗಂಡನ ಮೇಲೆ ಇರಿಸಿ ತಾನು ಮಾಡುವ ಸಾಧನೆಯನ್ನೂ ತ್ಯಾಗ ಮಾಡುತ್ತಾಳೆ.

ಹಾಗೆ ಕೆಲವರು ಸ್ತ್ರೀಯರು ಮಕ್ಕಳು ಕೂಡಾ ಧ್ಯಾನ ಮಾಡಬೇಕು ಎಂದುಕೊಳ್ಳುತ್ತಾರೆ. ಇವರೇನೋ ಮುದುಕರಾದ ನಂತರ ಧ್ಯಾನಕ್ಕೆ ಬಂದಿದ್ದಾರೆ. ಅವರನ್ನು ಚಿಕ್ಕಂದಿನಿಂದಲೇ ಧ್ಯಾನ ಮಾಡಬೇಕು ಎನ್ನುತ್ತಾರೆ. ಅವರ ಕೈಯಲ್ಲಿ ಮಾಡಿಸಲು ಇವರು ಎಷ್ಟೋ ಪ್ರಯತ್ನಿಸುತ್ತಾರೆ! ಅದಕ್ಕೆ ಪತ್ರೀಜಿಯವರು ಅವರ ಟೈಮ್

ಬಂದರೆ ಅವರೇ ಮಾಡುತ್ತಾರೆ ಅವರ ಗೊಡವೇ ನಿನಗೇಕೆ? ನೀನು ಮಾಡು ಎಂದು ಹೇಳುತ್ತಾರೆ.

ನಾವು ಆತ್ಮಸ್ವರೂಪರು ಅವರವರ ಯೋಜನೆ ಪ್ರಕಾರ ಬಂದಿದ್ದೇವೆ ಆ ಪ್ರಣಾಳಿಕೆಯ ಪ್ರಕಾರ ಜೀವಿಸಿದವನು ಚೆನ್ನಾಗಿ ಜೀವಿಸಿದವನಾಗುತ್ತಾನೆ. ಆ ಯೋಜನೆಗೆ ವಿರುದ್ಧವಾಗಿ ಜೀವಿಸುವವನು ಜೀವನವನ್ನು ನಷ್ಟ ಮಾಡಿಕೊಂಡವನು. ಆದ್ದರಿಂದ ಆ ಸಂಸಾರಕ್ಕಾಗಿ, ಮಕ್ಕಳಿಗಾಗಿ, ಗಂಡನಿಗಾಗಿ ತ್ಯಾಗ ಮಾಡಬಾರದು. ಇದು ಒಳ್ಳೆಯ ಮಾರ್ಗ ಎಂದು ಹೇಳು ಅಷ್ಟೇ. ಆ ಕೆಲಸಗಳನ್ನು ಮಾಡಬಾರದು ಅದು ಅಧರ್ಮ, ಮಾಂಸ ತಿನ್ನಬಾರದು ಎಂದು ಹೇಳು. ಕೇಳದಿದ್ದರೆ ನೀನೇಕೆ ಬಾಧೆ ಪಡುವುದು?

ಸ್ತ್ರೀ ತ್ಯಾಗ ಲಕ್ಷಣದೊಂದಿಗೆ ತನ್ನ ಬೆಳವಣಿಗೆಯನ್ನು ಕುಂಠಿತಗೊಳಿಸಿಕೊಳ್ಳುತ್ತಾಳೆ. ತನಗೆ ಏನು ಮಾಡಬೇಕು? ಏಕೆ ಜೀವಿಸಬೇಕು? ಎಂದು ಗೊತ್ತಿದ್ದರೂ ಬಿಟ್ಟುಕೊಡುತ್ತಾಳೆ. ಅದು ಬುದ್ಧಿಹೀನತೆ ಯಲ್ಲದೆ ಇನ್ನೇನು. ಕುಟುಂಬದಲ್ಲಿ ಮಕ್ಕಳು, ತಂದೆ ತಾಯಿ, ಗಂಡ ಎಲ್ಲರೂ ವಿಧವಿಧವಾದ ಆತ್ಮ ಸ್ಥಿತಿಗಳಲ್ಲಿ ಇರುತ್ತಾರೆ.

ಎಲ್ಲರೂ ಆತ್ಮರೆ ಎನ್ನುವ ಸಂಗತಿ ಅರ್ಥವಾದರೆ ಇವೆಲ್ಲವೂ ಅರ್ಥವಾಗುತ್ತದೆ. ಅವರ ಅನುಭವಗಳಿಗಾಗಿ ಅವರು ಬಂದಿದ್ದಾರೆ. ಅದಕ್ಕೆ ಅನುಗುಣವಾಗಿ ಅವರ ಜೀವನ ಇರುತ್ತದೆ. ಯಾರು ಏನು ಹೇಳಿದರೂ, ಅವರಿಗೆ ತಲೆಗೆ ಹತ್ತುವುದಿಲ್ಲ.. ತಮಗೆ ಅನಿಸಿದ್ದನ್ನೇ ಮಾಡುತ್ತಾರೆ. ನೀವೇನು ಮಾಡಬಲ್ಲಿರಿ? ನೀವು ಅಂದುಕೊಂಡಂತೆ ಅವರು ಇರಬೇಕೆಂದರೆ, ಹೇಗೆ ಇರುತ್ತಾರೆ? ನೀವು ಅಂದುಕೊಂಡಂತೆ ನೀವು ಇರಿ. ಆಗ ನಿಮ್ಮ ಜನ್ಮ ಪ್ರಣಾಳಿಕೆಯ ಪ್ರಕಾರ ನೀವು ಜೀವಿಸಿದಂತಾಗುತ್ತದೆ.

ನಿಮಗೆ ಒಂದು ನೆನಪಿರಲಿ ಪ್ರತಿಯೊಬ್ಬರ ಶರೀರದಲ್ಲೂ ಆತ್ಮವಿರುತ್ತದೆ. ಆತ್ಮ ಮೇಲಿನ ಲೋಕದಲ್ಲಿ ನಿರ್ಣಯಿಸಿಕೊಂಡ ಯೋಜನೆಯ ಪ್ರಕಾರ ಭೂಮಿ ಮೇಲೆ ಬಂದು ಮರೆತು ಹೋಗುತ್ತದೆ.

ಆದರೆ ಅಲ್ಲಿ ನಿರ್ಣಯಿಸಿಕೊಂಡದ್ದಕ್ಕೆ ವಿರುದ್ಧವಾದ ಕೆಲಸಗಳು ಇಲ್ಲಿ ಮಾಡುತಿದ್ದರೆ ಆತ್ಮ ದುಃಖಿಸುತ್ತದೆ. ಆದರೆ ಮೇಲೆ ನಿರ್ಣಯಿಸಿಕೊಂಡು ಬಂದುದರ ಪ್ರಕಾರ ನೀವು ಜೀವಿಸಿದರೆ, ಆತ್ಮ ಎಷ್ಟೋ ಸಂತೃಪ್ತಿ ಹೊಂದುತ್ತದೆ, ಆನಂದಿಸುತ್ತದೆ.

ಸಹಜವಾಗಿ ಸ್ತ್ರೀಯರು ಮನೆಯ ಕೆಲಸಗಳನ್ನು ಮಾಡುತ್ತಾರೆ. ಗಂಡ ಮಕ್ಕಳಿಗೆ ಅಡುಗೆ ಮಾಡಿ ಬಡಿಸುಸುತ್ತಾರೆ ತಾವು ತಿನ್ನುತ್ತಾರೆ. ಇದೇ ಮಾಡಲು ಈ ಜನ್ಮ ಎಂದು ಅವರೊಳಗೆ ಅನಿಸುತ್ತದೆ. ಹಾಗಾದರೆ ಹೀಗೆ ಅನಿಸುವಂತೆ ಯಾರು ಮಾಡುತ್ತಿದ್ದಾರೆ? ಒಳಗಿರುವ ಆತ್ಮ ನೆನಪಿಸುತ್ತಿರುತ್ತದೆ. ನೀನು ಆ ಕೆಲಸಗಳನ್ನು ಮಾಡಲು ಜನ್ಮ ತೆಗೆದುಕೊಂಡಿಲ್ಲಾ.. ಮಾಡಬೇಕಾಗಿರುವುದು ಬೇರೆ ಇದೆ ನೀವು ಅದನ್ನು ಮಾಡುತ್ತಿಲ್ಲ

ಎಂದು ಹೇಳುತ್ತದೆ. ಅಂತಹವರು ಈ ಧ್ಯಾನ ಮಾಡುತ್ತಿದ್ದರೂ, ಪುಸ್ತಕಗಳು ಓದುತ್ತಿದ್ದರೂ, ಧ್ಯಾನ ಕ್ಲಾಸುಗಳಿಗೆ ಹೋಗುತ್ತಿದ್ದರೂ ಅವರೊಳಗೆ ತುಂಬಾ ಆನಂದವಿರುತ್ತದೆ.

ನೋಡಿ ನೀವು ಯಾವಾಗಲಾದರೂ ಕೆಲವು ಕಾರಣಗಳಿಂದ ಭೀಮವರಂ ಹೋಗದಿದ್ದರೆ, ಜೂಮ್ ಕ್ಲಾಸ್ ತಪ್ಪಿಸಿದರೆ, ನಿಮ್ಮೊಳಗಿನ ಆತ್ಮ ದುಃಖಿಸುತ್ತದೆ. ಆಗ ಮತ್ತೆ ನೀವು ಜಾಯಿನ್ ಆದರೆ ನಿಮ್ಮೊಳಗೆ ದುಃಖ ಇರುವುದಿಲ್ಲ.

ಹಾಗೆ ಪುರುಷನು ಬೆಳಗಿನಿಂದ ಕಷ್ಟಪಟ್ಟು ಸಂಪಾದಿಸಿ, ಕುಟುಂಬವನ್ನು ಪೋಷಿಸುತ್ತಾನೆ ದಿನವೂ ಅದೇ ಕೆಲಸ ಮಾಡುತ್ತಿದ್ದರೆ ಅವನಿಗೂ ಯಾವಾಗಲಾದರೂ ಒಮ್ಮೆ ಅನಿಸುತ್ತದೆ. ಏನಿದು ಲೈಫ್ ಎಂದರೆ ಇಷ್ಟೇನೆ ಎಂದು ಅವನೊಳಗಿನ ಆತ್ಮ ದುಃಖಿಸುತ್ತದೆ. ಅಂತಹವರು ಯಾವಾಗಲಾದರೂ ಸರಿ ಈ ಧ್ಯಾನಕ್ಕೆ ಬಂದರೆ ಅವರೊಳಗೆ ಎಷ್ಟೋ ತೃಪ್ತಿಯಿರುತ್ತದೆ. ಹೇಳಿಕೊಳ್ಳಲಾರದ ಆನಂದಾನುಭೂತಿ ಹೊಂದುತ್ತಾರೆ.

ನಾನು ಧ್ಯಾನಕ್ಕೆ ಬರುವ ಮೊದಲು ಕೆಲವು ದಾನಗಳು ಮಾಡುತ್ತಿದ್ದೆನು. ಕೆಲವು ಸೇವಾ ಕಾರ್ಯಕ್ರಮಗಳನ್ನು ಮಾಡುತ್ತಿದ್ದೆನು. ಹಾಗೆ ಉಚಿತ ಹೋಮಿಯೋಪತಿ ಹಾಸ್ಪಿಟಲ್ ನಡೆಸುತ್ತಿದ್ದೆನು. ವಾಟರ್ ಕೂಲರ್ಸ್ ಇಟ್ಟಿದ್ದೆನು. ನನ್ನ ಮೇಡಂ ಸಹಕಾರದಿಂದ ಹೆಂಗಸರಿಗೆ ಉಚಿತವಾಗಿ ಹೊಲಿಗೆ ಸೆಂಟರ್ ನಡೆಸುತ್ತಿದ್ದೆವು. ಆದರೂ ನನ್ನೊಳಗೆ ತೃಪ್ತಿಯಿರುತ್ತಿರಲಿಲ್ಲ ಇನ್ನೂ ಏನೋ ಮಾಡಬೇಕು ಎನಿಸುತ್ತಿತ್ತು.

ಆದರೆ ಪತ್ರೀಜಿಯವರು ಪರಿಚಯವಾದ ನಂತರ ಈ ಮಾರ್ಗಕ್ಕೆ ಬಂದು ಧ್ಯಾನ ಮಾಡಿ ಜ್ಞಾನವನ್ನು ಎಲ್ಲರಿಗೂ ನೀಡುತ್ತಾ ಇದ್ದರೆ ಆಗ ತೃಪ್ತಿಯಾಯಿತು. ಅದಕ್ಕೆ ಮೊದಲು ಎಷ್ಟು ಸೇವೆಗಳು ಮಾಡಿದರು ನನಗೆ ತೃಪ್ತಿ ಇರುತ್ತಿರಲಿಲ್ಲ. ಈ ಕೆಲಸ ಮಾಡಲು ನಾನು ಬಂದಿದ್ದೇನೆ ಎನ್ನುವುದು ಅರ್ಥವಾಯಿತು. ಧ್ಯಾನ ಪ್ರಚಾರ ಮಾಡುತ್ತಾ ಇದ್ದರೂ, ಯಾವಾಗಲಾದರೂ ನಾಲ್ಕು ದಿನಗಳು ಮನೆಯಲ್ಲಿದ್ದರೆ ಮನಸ್ಸು ಸ್ಥಿಮಿತವಾಗಿರುತ್ತಿರಲಿಲ್ಲ. ಒಳಗೆ ಏನೋ ಕೊರತೆ ಎನಿಸುತ್ತಿತ್ತು.

ತುಂಬಾ ಜನರು ಏಕೆ ಅಷ್ಟು ಕಷ್ಟಪಡುವಿರಿ? ಹಾಯಾಗಿ ರೆಸ್ಟ್ ತೆಗೆದುಕೊಳ್ಳಬಹುದಲ್ಲವೇ ಎನ್ನುತ್ತಿದ್ದರು. ನಾನು ಆರಾಮವಾಗಿದ್ದರೆ ನನ್ನೊಳಗಿನ ಆತ್ಮ ನನ್ನನ್ನು ಹಾಗೆ ಇರಲು ಬಿಡುವುದಿಲ್ಲವಲ್ಲ! ಆ ಆತ್ಮ ಘೋಷ ನಿಮಗೆ ಅರ್ಥವಾದರೆ ನೀವು ಕೂಡ ಸುಮ್ಮನೆ ಕುಳಿತುಕೊಳ್ಳಲಾರಿರೀ.. ನೀವು ಕೂಡ ಕೊನೆಯ ಜನ್ಮಗಳಲ್ಲಿ ಇದ್ದೀರಿ.. ನಿಮ್ಮ ಸಮಯವನ್ನು ವ್ಯರ್ಥ ಮಾಡಿದರೆ, ನಿಮ್ಮ ಜೀವನವನ್ನು ನಷ್ಟ ಹೊಂದಿದಂತೆ. ಆದ್ದರಿಂದ ಅವಕಾಶ ದೊರೆತಾಗ ಸಂಪೂರ್ಣವಾಗಿ ವಿನಯೋಗಿಸಿಕೊಳ್ಳಬೇಕು.

ಮನಸ್ಸಿಗೆ ಆತ್ಮಕ್ಕೆ ಮಧ್ಯೆ ನಡೆಯುವ ಸಂಘರ್ಷಣೆಯಲ್ಲಿ ನಮ್ಮ ಮನಸ್ಸೇನೋ, ಸುಖ ಪಡಲು ಹೇಳುತ್ತದೆ. ಆತ್ಮ ಕಷ್ಟಪಡು ಎನ್ನುತ್ತದೆ, ಸಾಧಿಸು ಎಂದು ಹೇಳುತ್ತದೆ. ಸಮಯ ವ್ಯರ್ಥ ಮಾಡಬೇಡ, ಜೀವನವನ್ನು ವ್ಯರ್ಥ ಮಾಡಬೇಡ ಎನ್ನುತ್ತದೆ.

ಹಾಗೆ ಅನುಸರಿಸಬೇಕು ಎಂದರೆ ಜೀವನದಲ್ಲಿ ಕೆಲವು ತ್ಯಾಗ ಮಾಡಬೇಕು. ತ್ಯಾಗ ಮಾಡಿದರೆ ನಮ್ಮ ಲಕ್ಷ್ಯವನ್ನು ಸುಲಭವಾಗಿ ಸಾಧಿಸುತ್ತೇವೆ.

## 5) ಪವಿತ್ರತೆ

ಸ್ತ್ರೀ ಜನ್ಮದಲ್ಲಿಯೇ ಪವಿತ್ರತೆ ಎನ್ನುವ ಲಕ್ಷಣಗಳು ಕಲಿತುಕೊಳ್ಳುತ್ತೇವೆ. ಸ್ತ್ರೀ ಸಹಜವಾಗಿ ಪವಿತ್ರವಾಗಿಯೇ ಜೀವಿಸುತ್ತಾಳೆ, ಪವಿತ್ರವಾಗಿ ಜೀವಿಸಲು ಇಷ್ಟಪಡುತ್ತಾಳೆ, ಪ್ರಯತ್ನಿಸುತ್ತಾಳೆ. ಗಂಡನೊಂದಿಗೆ ಸಂಸಾರವನ್ನೂ ಪವಿತ್ರವಾಗಿ ಮಾಡುತ್ತಾಳೆ. ಹಾಗೆ ಪವಿತ್ರವಾಗಿ ಜೀವಿಸಿದ ಸ್ತ್ರೀಯನ್ನು ಪತಿವ್ರತೆ ಎನ್ನುತ್ತಾರೆ ಇದು ಸ್ತ್ರೀ ಲಕ್ಷಣ.

ಸಹಜವಾಗಿ ಸ್ತ್ರೀಯರಿಗೆ ದೇವರ ಮೇಲೆ ಭಕ್ತಿ ಹೆಚ್ಚಾಗಿರುತ್ತದೆ, ದೇವರಿಗೆ ಮಾಡುವ ಪೂಜೆಗಳು ಆರಾಧನೆಗಳಂತಹ ವಿಷಯದಲ್ಲಿ ಎಷ್ಟೋ ಪವಿತ್ರವಾಗಿ ಇರುತ್ತಾರೆ. ಗುಡಿಗೆ ಹೋದಾಗ ಸ್ನಾನ ಮಾಡಿ ಒಳ್ಳೆಯ ಬಟ್ಟೆಗಳನ್ನು ಉಟ್ಟು ಹೋಗುತ್ತಾರೆ. ಪಾದರಕ್ಷೆಗಳನ್ನು ಹೊರಗೆ ಬಿಡುತ್ತಾರೆ. ಯಾವಾಗ ಯಾವ ಕೆಲಸವಾದರೂ ಪವಿತ್ರವಾಗಿ ಮಾಡುವವರು ಒಳ್ಳೆಯ ಫಲಿತಗಳನ್ನು ಹೊಂದುತ್ತಾರೆ. ಭಕ್ತಿಯ ವಿಷಯದಲ್ಲಿ ಸ್ತ್ರೀಯರು ಪವಿತ್ರತೆಗೆ ಹೆಚ್ಚಾಗಿ ಆಸಕ್ತಿ ತೋರಿಸುತ್ತಾರೆ.

ಕೊನೆಗೆ ಧ್ಯಾನ ಮಾರ್ಗಕ್ಕೆ ಬಂದವರು ಸ್ತ್ರೀಯರೇ ಆಗಿದ್ದಾರೆ. ಧ್ಯಾನ ಎಂದರೆ ಸುಮ್ಮನೆ ಕಣ್ಣು ಮುಚ್ಚಿ ಕುಳಿತುಕೊಳ್ಳುವುದಲ್ಲ. ಧ್ಯಾನ ಎಂದರೆ ಸತ್ಯವಾದ ಭಗವಂತನನ್ನು, ಪರಮಾತ್ಮನನ್ನು, ಪರಬ್ರಹ್ಮನನ್ನು ಆಶ್ರಯಿಸುವುದು. ಅಂದರೆ ಆರಾಧಿಸುವುದು. ಆ ಮಾರ್ಗವೇ ಪತ್ರೀಜಿಯವರು ನಮಗೆ ನೀಡಿದ 'ಶ್ವಾಸದ ಮೇಲೆ ಗಮನ' ಧ್ಯಾನ ಈ 'ಶ್ವಾಸದ ಮೇಲೆ ಗಮನ' ಧ್ಯಾನದ ಮೂಲಕ, ಮಾತ್ರವೇ ಭಗವಂತನನ್ನು ಆಶ್ರಯಿಸಬಲ್ಲರು.

ಆದರೆ ಈಗ ತುಂಬಾ ಜನರು ಮಾರ್ಗದರ್ಶನ ಧ್ಯಾನ ಮಾಡುತ್ತಿದ್ದಾರೆ. ಮ್ಯೂಸಿಕ್ ಇಟ್ಟುಕೊಂಡು ಮನಸ್ಸಿನ ಸ್ಥಿತಿಯಲ್ಲಿ ಉಳಿದು ಹೋಗುತ್ತಿದ್ದಾರೆ. ಮನಸ್ಸನ್ನು ದಾಟಿ ಆತ್ಮನ ಹತ್ತಿರಕ್ಕೆ ಹೋಗಲಾರದೆ ಇದ್ದಾರೆ. ಹಾಗೆ ಮನಸ್ಸಿನ ಬಳಿಯೇ ಉಳಿದರೆ ಅದನ್ನು ಜಪ ಎನ್ನುತ್ತಾರೆ. ಮನಸ್ಸನ್ನು ದಾಟಿ ಹೋದರೆ ಅದನ್ನು ಧ್ಯಾನ ಎನ್ನುತ್ತಾರೆ.

ಈ ಧ್ಯಾನ ಮಾಡುವಾಗ, ಪವಿತ್ರವಾಗಿ ಮಾಡಬೇಕು. ಅದಕ್ಕೆ ಜೂಮ್‌ನಲ್ಲಿ ಪ್ರತಿಯೊಬ್ಬರೂ ಬೆಳಗ್ಗೆ ಸ್ನಾನ ಮಾಡಿ ಕುಳಿತುಕೊಳ್ಳುತ್ತೇವೆ. ಭಗವಂತನನ್ನು

ಆಶ್ರಯಿಸುತ್ತಿದ್ದೇವೆಂದರೆ, ಪವಿತ್ರತೆಯನ್ನು ಅನುಸರಿಸಬೇಕು. ದೇವಾಲಯಕ್ಕೆ ಹೋದಾಗ ವಿಗ್ರಹವನ್ನು ಅಂದರೆ ಆ ಬೊಂಬೆಯನ್ನು ಆಶ್ರಯಿದಾಗಲೇ ಪವಿತ್ರವಾಗಿ ಹೋಗುತ್ತಿದ್ದೇವೆಂದರೆ! ಸಾಕ್ಷಾತ್ ಪರಮಾತ್ಮನನ್ನು ಆಶ್ರಯಿಸಿದಾಗ, ಪವಿತ್ರವಾಗಿ ಇರಬೇಕಲ್ಲವೇ.. ಅದಕ್ಕೆ ಸ್ನಾನ ಮಾಡಿ ಕುಳಿತುಕೊಳ್ಳುತ್ತೇವೆ.

ಅಷ್ಟೇ ಅಲ್ಲ ಹಿರಿಯರು ನೀನು ಪೂಜೆ ಮಾಡಿದಾಗ, ಆ ಬಾಹ್ಯ ಅಲಂಕಾರಗಳೇ ಅಲ್ಲದೇ ಮನಸನ್ನು ದೇವರ ಮೇಲೆ ಕೇಂದ್ರೀಕರಿಸಬೇಕು ಎನ್ನುತ್ತಾರೆ. ಆದರೆ ನೀನು ಕಣ್ಣು ಮುಚ್ಚಿಕೊಂಡು ದೇವರ ಮೇಲೆ ದೃಷ್ಟಿ ಇರಿಸದೆ ನಿನ್ನ ಸಮಸ್ಯೆಗಳ ಮೇಲೆ, ಕೋರಿಕೆಗಳ ಮೇಲೆ ನಿನ್ನ ಸಂಸಾರದ ಮೇಲೆ ದೃಷ್ಟಿ ಇರಿಸುತ್ತಿರುವೆ. ಹಾಗೆ ಕಣ್ಣು ಮುಚ್ಚಿಕೊಂಡು ಎಲ್ಲದರ ಮೇಲೆ ಗಮನಹರಿಸಿದರೆ ದೇವರ ಮೇಲೆ ಹೇಗೆ ದೃಷ್ಟಿ ಹರಿಸುವೆ? ಹೇಗೆ ದೇವರನ್ನು ಆಶ್ರಯಿಸಿದಂತಾಗುತ್ತದೆ?

ಹಾಗೆ ಧ್ಯಾನ ಮಾಡಿದಾಗ ಯಾವುದರ ಮೇಲೆ ದೃಷ್ಟಿ ಇರಬಾರದು. ಆತ್ಮದ ಮೇಲೆ ದೃಷ್ಟಿ ಇರಿಸಬೇಕು. ಅದೇ ನಿಜವಾದ ಭಕ್ತಿ. ಆಗಲೇ ಫಲಿತಗಳು ಬರುತ್ತದೆ. ಅಷ್ಟೇ ಹೊರತು, ಸುಮ್ಮನೆ ಫಲಗಳು ಬರಬೇಕೆಂದರೆ ಹೇಗೆ ಬರುತ್ತದೆ? ಮನಸ್ಸು ಬೇರೆ ವಿಷಯಗಳ ಮೇಲೆ ಹೋಗದಂತೆ ಆತ್ಮದ ಮೇಲೆ ಇರಿಸಬೇಕೆಂದರೆ, ಕೆಲವು ದಿನಗಳು ಕಷ್ಟಪಡಬೇಕು, ಆಗಲೇ ಸಾಧಿಸುವಿರಿ. ಹಾಗೆ ಪವಿತ್ರವಾಗಿ ಮಾಡುವ ಧ್ಯಾನದಲ್ಲಿ ಒಳ್ಳೆಯ ಫಲಗಳನ್ನು ನೀವು ಹೊಂದುವಿರಿ. ಆಗ ಧ್ಯಾನದಲ್ಲಿ ಪಾವಿತ್ರ್ಯತೆ ಹೆಚ್ಚುತ್ತದೆ.

ಈ ಮಾರ್ಗ ದೊರೆಯುವುದು ಸಾಧನೆ ಮಾಡುವುದು ಎಷ್ಟು ಅದೃಷ್ಟ. ಏಕೆಂದರೆ, ಧ್ಯಾನದಲ್ಲಿ ಆ ಪರಮಾತ್ಮನೊಂದಿಗೆ ಗಂಟೆಗಳ ಕಾಲ ಇದ್ದು ಹೋಗುತ್ತೇವೆ. ಅದಕ್ಕೆ ಧ್ಯಾನ ಮಾಡಿದವರು ಎಷ್ಟೋ ಸಾಧಿಸಿದ್ದಾರೆ. ಎಷ್ಟೋ ಉನ್ನತ ಸ್ಥಿತಿಗೆ ಹೋಗಿದ್ದಾರೆ.

ಈ ಪ್ರಪಂಚಿಕವಾದ ಅಡ್ಡಿ ಆತಂಕಗಳು ಇರಬಾರದು ಎಂದು ಎಷ್ಟೋ ಜನ ಹಿಮಾಲಯಕ್ಕೆ, ಆಶ್ರಮಗಳಿಗೆ, ಅರಣ್ಯಗಳಿಗೆ ಹೋಗುತ್ತಾರೆ. ಬೆಟ್ಟಗಳ ಗುಹೆಗಳಲ್ಲಿ ಒಬ್ಬರೇ ಸಾಧನೆ ಮಾಡಿದವರು, ದೊಡ್ಡ ಯೋಗಿಗಳಾಗಿದ್ದಾರೆ, ಎಲ್ಲವನ್ನು ಸಾಧಿಸಿದ್ದಾರೆ.

ನಾವು ಆ ವಿಧವಾಗಿ ಅಲ್ಲದಿದ್ದರೂ ನಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಾ, ಸಂಸಾರ ನೋಡಿಕೊಳ್ಳುತ್ತಾ, ಭುಕ್ತಿಗೆ ಕೊರತೆ ಬಾರದಂತೆ ಸಂಪಾದಿಸಿಕೊಳ್ಳುತ್ತಾ, ಸಮಯದ ದೊರೆತಾಗಲೆಲ್ಲ ಈ ಕೆಲಸ ಮಾಡಿದಾಗ, ನಾವು ಮಾಡುವ ಕೆಲಸಗಳು ನಮಗೆ ಅನುಕೂಲವನ್ನು ತರುತ್ತವೆ.

ಎಷ್ಟು ಹೊತ್ತೂ ಆ ಭಗವಂತನನ್ನು ಸೇರಿಕೊಳ್ಳಬೇಕು, ಭಗವಂತನೊಂದಿಗೆ ಇರಬೇಕೆಂದು ಆತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎನ್ನುವ ಉದ್ದೇಶವೇ ಹೊರತು ಮತ್ತೆ ಯಾವ ಉದ್ದೇಶವೂ ಇರುವುದಿಲ್ಲ. ಹಾಗಿರುವಾಗ ನಮಗೆ ಕೊರತೆ ಏನಿರುತ್ತದೆ ಅಲ್ಲವೇ!

ಯಾವ ತೊಂದರೆಗಳು ಬರುತ್ತವೆ? ಬಂದರೆ ಇದಕ್ಕೆ ಮೊದಲು ಮಾಡಿದ ಕರ್ಮಗಳ ಮೂಲಕ ಬರಬಹುದು. ಬಂದರೂ, ಅವೆಲ್ಲವೂ ತಂತಾನೆ ತೊಲಗುತ್ತವೆ. ಅವುಗಳ ಕುರಿತು ಆಲೋಚಿಸುವ ಕೆಲಸವಿಲ್ಲ.

ತುಂಬಾ ಉನ್ನತ ಮಾರ್ಗಕ್ಕೆ ಬಂದಿದ್ದೇವೆ. ಹೀಗೆ ಮಾಡುವುದರಿಂದ ನಮ್ಮ ಬುದ್ಧಿ ವಿಕಾಸವಾಗಿ ಎಷ್ಟೋ ಜನ್ಮಗಳಲ್ಲಿ ಕಲಿತುಕೊಳ್ಳುವುದು ಈ ಜನ್ಮದಲ್ಲಿ ಕಲಿಯುತ್ತೇವೆ.

ಇದನ್ನು ನಾನು ದೃಢವಾಗಿ ಹೇಳಬಲ್ಲೆನು, ಹೀಗೆ ನಾವು ತೀವ್ರಾತಿ ತೀವ್ರವಾಗಿ ಧ್ಯಾನ ಮಾಡುತ್ತಾ ಭಗವಂತನ ಮೇಲೆ ದೃಷ್ಟಿ ಇರಿಸುತ್ತಾ ಭೀಮವರಂ ಕ್ಲಾಸ್‌ಗಳನ್ನು, ಇನ್ನೂ ಎಲ್ಲಿ ಕ್ಲಾಸು ನಡೆದರೆ ಅಲ್ಲಿ ಪಾಲ್ಗೊಳ್ಳುತ್ತಾ ಇದ್ದರೆ... ಬೆಳಗ್ಗೆ ಜೂಮ್ ಕ್ಲಾಸ್‌ಗಳಲ್ಲಿ ಪಾಲ್ಗೊಳ್ಳುತ್ತಾ ಸಮಯವನ್ನು ವ್ಯರ್ಥ ಮಾಡದೇ ಅಶ್ರದ್ಧೆ ತೋರದೆ ಇದ್ದರೆ, ಎಷ್ಟೋ ಜನ್ಮಗಳಲ್ಲಿ ಕಲಿಯುವುದನ್ನು ಖಂಡಿತವಾಗಿ ಈ ಜನ್ಮದಲ್ಲಿ ವಿಜಯವಂತವಾಗಿ ಕಲಿಯಬಲ್ಲೆವು. ಎಷ್ಟೋ ಅಭಿವೃದ್ಧಿ ಹೊಂದುತ್ತೇವೆ, ಆತ್ಮೋನ್ನತಿ ಹೊಂದುತ್ತೇವೆ, ಆತ್ಮಕ್ಕೆ ಲಾಭ ಉಂಟಾಗುತ್ತದೆ.

ಆದ್ದರಿಂದ ಈ ಪವಿತ್ರತೆ ಎನ್ನುವುದು ಸ್ತ್ರೀ ಜನ್ಮಗಳಲ್ಲಿ ಚೆನ್ನಾಗಿ ಕಲಿಯುತ್ತಾರೆ. ಈ ಲಕ್ಷಣಗಳು ಎಷ್ಟು ಕಲಿತರೆ, ಅಷ್ಟು ನಾವು ಅಭಿವೃದ್ಧಿಯಾದಂತೆ ಅರ್ಥ.



**"ಆನಂದದಿಂದ ಜೀವಿಸುವುದಕ್ಕಾಗಿ ಬಂದವರು, ಆನಂದವನ್ನು ಬಿಟ್ಟು ಅಳಿಸುತ್ತ, ಅಳುತ್ತಾ ಹೋಗಿ ಬಿಡುವುದು ಆಶ್ಚರ್ಯಕರವಾದ ವಿಷಯ"**

**- ಬ್ರಹ್ಮರ್ಷಿ ಪಿತಾ ಮಹಾ ಪತ್ರೀಜಿ**

# ಪುರುಷ ಜನ್ಮದಲ್ಲಿ ಕಲಿಯುವಂತಹವು

ನಾವು ಸ್ತ್ರೀ ಜನ್ಮಗಳಲ್ಲಿ ಕಲಿಯುವ ಕೆಲವು ಮೂರ್ಖ ಅಂಶಗಳನ್ನು ತಿಳಿದುಕೊಂಡಿದ್ದೇವೆ. ಈಗ ಪುರುಷ ಜನ್ಮದಲ್ಲಿ ಕಲಿಯುವ ಕೆಲವು ಮೂರ್ಖ ಲಕ್ಷಣಗಳನ್ನು ತಿಳಿದುಕೊಳ್ಳೋಣ. ಪುರುಷ ಜನ್ಮಗಳಲ್ಲಿ ಮುಖ್ಯವಾಗಿ ಧೈರ್ಯ, ವೀರತ್ವ, ನಿರ್ಭಯ, ಸಾಹಸ, ಉಪಕ್ರಮ (ಮುಂದಾಳತ್ವ) ಎನ್ನುವ ಲಕ್ಷಣಗಳನ್ನು ಕಲಿಯುತ್ತೇವೆ.

ಈ ಲಕ್ಷಣಗಳೆಲ್ಲ ಏಕೆ ಕಲಿಯಬೇಕು? ಎಂದರೆ ಆತ್ಮಗಳಾದ ನಾವು ನಮ್ಮ ಲಕ್ಷ್ಯವನ್ನು ಸಾಧಿಸಲು. ತುಂಬಾ ಜನರು ಧ್ಯಾನವನ್ನು ರೋಗಗಳು ಕಡಿಮೆಯಾಗಬೇಕೆಂದು, ಅನುಭವಗಳು ಬರುತ್ತವೆಯೆಂದು, ಏನೋ ಲಾಭಗಳು ಬರುತ್ತವೆಯೆಂದು ಮಾಡುತ್ತಾ ಇರುತ್ತಾರೆ.

ಆದರೆ ನಾವೆಲ್ಲರೂ ಆ ಸ್ಥಾಯಿಯನ್ನು ದಾಟಿದವರು. ಕೊನೆಯ ಜನ್ಮಗಳಿಗೆ ಬಂದಿದ್ದೇವೆ. ನಮ್ಮ ಆಶಯ ಬೇರೆ, ನಮ್ಮ ಲಕ್ಷ್ಯ ಬೇರೆ! ನೀವು ಜೀವನದಲ್ಲಿ, ನಿಮ್ಮ ಸುತ್ತಲೂ ಇರುವವರನ್ನು ಗಮನಿಸಿದರೆ, 300 ರಿಂದ 350 ಜನ್ಮಗಳವರೆಗೂ ಯಾರಿಗಾದರೂ ಸರಿಯೇ ಲಕ್ಷ್ಯಗಳು ಬೇರೆ ಬೇರೆಯಾಗಿ ಇರುತ್ತದೆ.

ಚಿಕ್ಕಂದಿನಿಂದ ಹಾಡುಗಳನ್ನು ಹಾಡುವವರು, ಹೆಂಗಸರಾದರೆ ಯಾವಾಗಲಾದರೂ ಪಿ. ಸುಶೀಲ ಅವರಂತೆ ಆಗಬೇಕೆಂದು, ಪುರುಷರಾದರೆ ನಾನು ಘಂಟಸಾಲ ಅಥವಾ ಎಸ್.ಪಿ. ಬಾಲಸುಬ್ರಮಣ್ಯಂ ಸ್ಥಾಯಿಗೆ ಹೊಗಬೇಕೆಂದುಕೊಳ್ಳುತ್ತಾರೆ. ಆ ಸ್ಥಾಯಿಗೆ ಹೋದರೆ, ಅವರ ಹಾಗೆ ಲಕ್ಷ್ಯವನ್ನು ಸಾಧಿಸಿದೆನು ಎಂದುಕೊಳ್ಳುತ್ತಾರೆ.

ಹಾಗೆಯೇ ಒಬ್ಬನು ತಾನು ಒಳ್ಳೆಯ ಕ್ರಿಕೇಟಿಗ ಆಗಬೇಕೆಂದುಕೊಳ್ಳುತ್ತಾನೆ. ಮತ್ತೊಬ್ಬನು ಒಳ್ಳೆಯ ಪುಟ್ಬಾಲ್ ಪ್ಲೇಯರ್ ಆಗಬೇಕೆಂದುಕೊಳ್ಳುತ್ತಾನೆ. ಮತ್ತೊಬ್ಬ ಆಟವಾಡಿ ಹಿಂದಿನ ರಿಕಾರ್ಡ್ ಮುರಿಯಬೇಕು ಎಂದುಕೊಳ್ಳುತ್ತಾನೆ. ಅದೇ ನನ್ನ ಆಶಯ ಎನ್ನುತ್ತಾರೆ.

ಕೆಲವರಯ ನಾನು ಎಲ್ಲರಿಗಿಂತ ಹೆಚ್ಚು ಹಣ ಸಂಪಾದನೆ ಮಾಡಬೇಕೆಂದು, ಜೀವನವೆಲ್ಲಾ ಅದಕ್ಕಾಗಿಯೇ ದುಡಿಯುತ್ತಾರೆ. ಅದೇ ಅವರ ಜಿವನ ಲಕ್ಷ್ಯ ಎನ್ನುತ್ತಾರೆ. ಕೆಲವರು ನಾನು ನೂರಾರು ಜನರನ್ನು ಪೋಷಿಸುವಂತಾಗಬೇಕು, ನೂರಾರು ಜನರಿಗೆ (ಜೀವನ) ಬದುಕು ರೂಪಿಸುವಂತಾಗಬೇಕು, ಅದೇ ನನ್ನ ಆಶಯ. ಅದೇ ನನ್ನ ಲಕ್ಷ್ಯ,

ಅದೇ ನನಗೆ ತೃಪ್ತಿ ಎನ್ನುತ್ತಾರೆ. ಮತ್ತೇ ಕೆಲವರು M.L.A. ಇಲ್ಲವೇ Minister ಆಗಬೇಕೆಂದುಕೊಳ್ಳುತ್ತಾರೆ.

ಹೀಗೆ ನೋಡಿದರೆ ಒಬ್ಬೊಬ್ಬರಿಗೆ ಒಂದೊಂದು ಲಕ್ಷ್ಯ. ಇಂತಹ ಲಕ್ಷ್ಯಗಳು 350 ಜನ್ಮಗಳವರೆಗೂ ಇರುತ್ತವೆ. ನಂತರ, ನಂತರ ಅವರಿಗೆ "ನಾನು ದೇಹವಲ್ಲ, ನಾನು ಆತ್ಮನು" ಎಂಬುದು ತಿಳಿಯುತ್ತದೆ. ಅಲ್ಲಿಯವರೆಗೆ ಅವರು ನಾನು ದೇಹವೆಂಬ ಭಾವದಲ್ಲಿ ಇರುವವರೇ.

ಆ ಭಾವದಲ್ಲಿರುವಾಗ ಅವರ ಲಕ್ಷ್ಯಗಳು ಬೇರೆಯಾಗಿ ಇರುತ್ತವೆ, ಆದರೆ ಆತ್ಮ ಎಂಬ ಭಾವದಲ್ಲಿರುವಾಗ ಅವರ ಲಕ್ಷ್ಯವು ಬದಲಾಗಿ ಬಿಡುತ್ತದೆ. ಆತ್ಮವೊಂದರ ಲಕ್ಷ್ಯವು ಪೂರ್ಣಾತ್ಮವಾಗುವುದೇ, ಆದ್ದರಿಂದ ಅದನ್ನು ಸಾಧಿಸಬೇಕು ಅಂದರೆ ಪೂರ್ಣಜ್ಞಾನಿಯಾಗಬೇಕು. ಆ ಜ್ಞಾನವನ್ನು ಹೊಂದುವುದಕ್ಕಾಗಿಯೇ ಈಗ ನಾವೆಲ್ಲಾ ಧ್ಯಾನವನ್ನು ಮಾಡುತ್ತಿದ್ದೇವೆ.

ಅದಕ್ಕೆ ನಾನು ಪ್ರತಿಯೊಬ್ಬರಿಗೂ ಭೀಮವರಂಗೆ ಬರುವುದನ್ನು ಬಿಡಬೇಡಿ ಎಂದು ಹೇಳುತ್ತಿದ್ದೇನೆ. ಆತ್ಮರಾದ ನಿವು ನಿಮ್ಮ ಲಕ್ಷ್ಯವನ್ನು ಸಾಧಿಸಬೇಕೆಂದರೆ ಕಡ್ಡಾಯವಾಗಿ ಭೀಮವರಂಗೆ ಬರಬೇಕು. ಧ್ಯಾನವನ್ನು ಮಾಡುವುದಕ್ಕೆ ಹಿಮಾಲಯಗಳಿಗೆ ಹೋಗಿ ಎಷ್ಟೋ ಕಷ್ಟ ಪಡುವವರು ಬಹಳ ಜನರಿದ್ದಾರೆ. ಹಿಮಾಲಯದಲ್ಲಿ ಮಾಡುವುದೆಂದರೆ ಮಾತೇ? ಅವರ ಜೀವನವು ಅಲ್ಲಿಗೆ ಅಂಕಿತವಾಗಿ ಬಿಡುತ್ತದೆ. ನಾವು ಅವರಷ್ಟು ಅಲ್ಲದಿದ್ದರೂ, ಸ್ವಲ್ಪವಾದರೂ ಮಾಡಬೇಕಲ್ಲವೇ? ಸಂಸಾರದಲ್ಲಿಯೇ ನಿರ್ವಾಣವೆಂದು ಆಚಾರ್ಯ ನಾಗಾರ್ಜುನ ಹೇಳಿದ್ದನ್ನೇ ಪತ್ರೀಜಿಯವರು ಹೇಳುತ್ತಾ ಇರುತ್ತಾರೆ. ಆ ಕೆಲಸವನ್ನೇ ನಾವು ಈಗ ಮಾಡುತ್ತಿದ್ದೇವೆ, ಸಂಸಾರವನ್ನು ನೋಡಿಕೊಳ್ಳುತ್ತಾ, ನಿರ್ವಾಣವನ್ನು ಹೊಂದುವ ಪ್ರಯತ್ನವನ್ನು ಮಾಡುತ್ತಿದ್ದೇವೆ.

ನಿಮ್ಮ ಜೀವನದಲ್ಲಿ ಸರಿಯಾದ ದಾರಿಯಲ್ಲಿ ಪ್ರಯಾಣಿಸಬೇಕೆಂದರೆ, ಖಂಡಿತವಾಗಿ 'ನಾನು ಆತ್ಮ' ಎಂದು ನೀವು ನಿರ್ಧಾರವನ್ನು ಮಾಡಿಕೊಳ್ಳಬೇಕು. ಇದು ಯಾರು ನಿರ್ಧಾರ ಮಾಡಿಕೊಳ್ಳುತ್ತಾರೋ ಅವರು ಇನ್ನೊಂದರ ಮೇಲೆ ದೃಷ್ಟಿ ಇಡುವುದಿಲ್ಲ, ಸಂಸಾರದಲ್ಲಿಯೇ ಇರುತ್ತಾರೆ. ಆದರೆ ಲಕ್ಷ್ಯವನ್ನು ಮಾತ್ರ ಬಿಡುವುದಿಲ್ಲ.

ಮಹಾನ್ ಸಾಧಕರಾದ ಯೋಗಿಗಳಿಗೆ, ಮಹರ್ಷಿಗಳಿಗೆ ಸಂಸಾರಗಳಿಲ್ಲವೇ? ಆಧ್ಯಾತ್ಮಿಕತೆಗೆ ಸಂಸಾರಗಳೇನು ಅಡ್ಡಿಯಾಗಲಾರವು, ಸುಖಗಳೇನು ಅಡ್ಡಿಯಲ್ಲ. ಇರುವುದರಲ್ಲಿಯೇ ಸಂಭ್ರಮಿಸಿರಿ ಎನ್ನುತ್ತಾರೆ ಪತ್ರೀಜಿಯವರು. ಆದ್ದರಿಂದ ಸಂಸಾರವನ್ನು ಮಾಡುತ್ತಾ, ನಿನ್ನ ಸಮಯವನ್ನು ವ್ಯರ್ಥ ಮಾಡದೆ ಲಕ್ಷ್ಯವನ್ನು ಸಾಧಿಸುವ ಪ್ರಯತ್ನವನ್ನು ಮಾಡಬೇಕು. ನೀವು ಸಾಧನೆಯನ್ನು ಮಾಡುತ್ತಾ, ಆ ಮಾರ್ಗದಲ್ಲಿ ಸೇವೆಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಬೇಕು.

**ಪುರುಷ ಜನ್ಮದಲ್ಲಿ ಕಲಿಯುವ "ಧೈರ್ಯ'**
**ಎನ್ನುವ ಗುಣಲಕ್ಷಣದ ಕುರಿತು ತಿಳಿದುಕೊಳ್ಳೋಣ.**

## 1) ಧೈರ್ಯ

ಸಹಜವಾಗಿ ಪುರುಷನೇ ಧೈರ್ಯವನ್ನು ಪ್ರದರ್ಶಿಸುತ್ತಾನೆ. ಯಾವ ವಿಷಯದಲ್ಲಾದರೂ, ಯಾವ ಕೆಲಸದಲ್ಲಾದರೂ, ಧೈರ್ಯವಾಗಿ ಮುಂದಕ್ಕೆ ಹೋಗುತ್ತಾನೆ. ರಾತ್ರಿ ವೇಳೆಯಲ್ಲಿ ಒಂಟಿಯಾಗಿರುವಾಗ, ಜಗಳ ನಡೆಯುವಾಗ, ಪುರುಷನೇ ಧೈರ್ಯವಾಗಿ ಮುಂದಕ್ಕೆ ಹೋಗುತ್ತಾನೆ.

ನಾವು ಪೂರ್ವಕಾಲದಲ್ಲಿ ಗಮನಿಸಿದರೆ, ಯುದ್ಧದಲ್ಲಿ ಪುರುಷರೇ ಪಾಲ್ಗೊಳ್ಳುತ್ತಿದ್ದರು. ಕಾರಣ ಅದು ಪುರುಷ ಲಕ್ಷಣ. ಪುರುಷನಿಗೆ ಆ ಶಕ್ತಿ, ಬಲ, ಶರೀರ ಸೌಷ್ಠವ ಕೊಡಲ್ಪಟ್ಟಿದೆ. ಸ್ತ್ರೀಗೆ ಸೂಕ್ಷ್ಮ ಮನಸ್ಸು, ಮೃದುತ್ವ ನೀಡಲಾಗಿದೆ.

ಗಮನಿಸಿದರೆ ಒಂದೇ ವಯಸ್ಸಿರುವ ಗಂಡು ಹೆಣ್ಣು ಯೌವನಕ್ಕೆ ಬರುವವರೆಗೂ, ಇಬ್ಬರು ಸಹ ಸಮಾನವಾಗಿಯೇ ಕಾಣುತ್ತಾರೆ. ಆದರೆ ದೊಡ್ಡವರಾದ ಮೇಲೆ ಸ್ತ್ರೀ ಮೃದುವಾಗಿ ತಯಾರಾಗಿ ತನ್ನ ಶರೀರ ಅವಯವಗಳಲ್ಲಿ ಎಷ್ಟೋ ಬದಲಾವಣೆಗಳು ಕಾಣುತ್ತವೆ. ಹಾಗೆಯೇ ಪುರುಷರಲ್ಲಿ ಪುರುಷ ಲಕ್ಷಣಗಳು ಹೆಚ್ಚುತ್ತವೆ, ಇದು ಸೃಷ್ಟಿಯಲ್ಲಿರುವ ಏರ್ಪಾಡು.

ನೀವು ಗಮನಿಸಿದರೆ ಕುಟುಂಬದಲ್ಲಿ ತಾಯಿ ಒಬ್ಬಳು ಸ್ತ್ರೀ ಆದರೂ ಕೂಡ ಗಂಡು ಮಗನನನ್ನೇ ಪ್ರೋತ್ಸಾಹಿಸುತ್ತಾಳೆ. ಮಗಳನ್ನು ನಿನಗೇಕೆ ಹೆಣ್ಣು ಮಗು? ಎಲ್ಲದಕ್ಕೂ ಬರುತ್ತೀಯಾ!? ಹೆಣ್ಣು ನೀನು ಹೆಣ್ಣಿನಂತೆ ಇರು ಆ ಜಗಳಗಳೆಲ್ಲ ನಿನಗೆ ಏಕೆ? ಮಾತನಾಡಿದರೆ ಹೊರಗೆ ಹೋಗುವೆ ಎಂದು ತಾಯಿಯೇ ಮಗಳಿಗೆ ಹೇಡಿತನ ಕಲಿಸುತ್ತಾಳೆ.

ಗಂಡು ಮಗುವಿಗೆ ಈ ಶರತ್ತುಗಳು ಇರುವುದಿಲ್ಲ. ಚಿಕ್ಕಂದಿನಿಂದ ಹಾಗೆ ಧೈರ್ಯ, ಪ್ರೋತ್ಸಾಹ ಇರುವುದರಿಂದ ಪುರುಷ ಧೈರ್ಯವನ್ನು ಪ್ರದರ್ಶಿಸುತ್ತಾನೆ. ಯುದ್ಧಕ್ಕೆ ಹೋಗುವಾಗ, ಪುರುಷನಿಗೆ ಸ್ತ್ರೀ ವೀರ ತಿಲಕವನ್ನು ಹಚ್ಚಿ ಪ್ರೋತ್ಸಾಹಿಸಿ ಕಳುಹಿಸುತ್ತಾಳೆ. ಅಂತಹ ಯುದ್ಧಗಳು ಈ ಕಾಲದಲ್ಲಿ ನಡೆಯದಿದ್ದರೂ, ಜಗಳಗಳು ನಡೆಯುತ್ತವೆ. ಆಗ ಮನೆಯಲ್ಲಿರುವ ಸ್ತ್ರೀ ಏನು ಹೇಳುತ್ತಾಳೆ ಎಂದರೆ, ನಮ್ಮವರ ಮೇಲೆ ಯಾರೋ ದಾಳಿ ಮಾಡುತ್ತಿದ್ದಾರೆ. ನೀವು ಹೋಗಿ ಎಂದು ಪ್ರೋತ್ಸಾಹಿಸುತ್ತಾಳೆ. ಅಷ್ಟೇ ಅಲ್ಲ ಗಮನಿಸಿದರೆ ರಾತ್ರಿಯಲ್ಲಿ ಕಳ್ಳರು ಬಂದಾಗ ಅಥವಾ ಪಾತ್ರೆಗಳು ಕೆಳಗೆ ಬಿದ್ದ ಸದ್ದು ಕೇಳಿದಾಗ, ಬಾಗಿಲು ಬಡಿಯುವ ಶಬ್ದ ಕೇಳಿದಾಗ, ಯಾವುದೇ ಆದರೂ ಮೊದಲು ಪುರುಷನು ಧೈರ್ಯವಾಗಿ ಹೋಗುತ್ತಾನೆ. ಹಾಗೆ ಎಷ್ಟೋ ವಿಷಯಗಳಲ್ಲಿ ಪುರುಷನು ಧೈರ್ಯವನ್ನು ಪ್ರದರ್ಶಿಸುತ್ತಾನೆ.

ಯಾರಾದರೂ ಆ ಜಗಳಗಳು ನಮಗೇಕೆ ಎಂದನು ಅಂದರೆ, ಅವನಲ್ಲಿ ಸ್ವಲ್ಪ ಭಯ ಇರುವಂತೆ ಅರ್ಥ. ಕಳ್ಳರು ಬಂದಾಗ ಕೆಲವರು ಮುಸುಕು ಹಾಕಿಕೊಳ್ಳುತ್ತಾರೆ. ಆಗ ಸ್ತ್ರೀ ನೀನು ಗಂಡಸಲ್ಲವೇ ಪೌರುಷವಿಲ್ಲವೇ? ಹೋಗು ಎಂದು ಧೈರ್ಯ ಹೇಳುತ್ತಾಳೆ. ಕೆಲವರು ಪುರುಷರು ಭಯದಿಂದ ಇರಲು ಕಾರಣ ಅವರು ಪ್ರಾರಂಭ ಜನ್ಮದಲ್ಲಿ ಇರುವುದು. ಏನು ಸ್ವಲ್ಪ ಕಲಿತುಕೊಂಡಿದ್ದಾರೆ ಹೊರತು ಈ ಧೈರ್ಯ ಎನ್ನುವ ಲಕ್ಷಣ ಇನ್ನೂ ಕಲಿತುಕೊಂಡಿಲ್ಲ. ಅವರು ಹಾಗೆ ಕೆಲವು ಜನ್ಮಗಳು ಕಳೆಯುವಾಗ ಧೈರ್ಯ ಎನ್ನುವುದು ಸಹಜ ಲಕ್ಷಣವಾಗುತ್ತದೆ. ಆದ್ದರಿಂದ ಪ್ರಾರಂಭ ಜನ್ಮದಲ್ಲಿ ಸ್ತ್ರೀ, ಪುರುಷನಿಗೆ ಧೈರ್ಯ ಹೇಳಬೇಕಾಗಿ ಬರುತ್ತದೆ. ಹಾಗೆ ಸ್ತ್ರೀ ಧೈರ್ಯ ಹೇಳುತ್ತಿದ್ದಾಳೆ ಎಂದರೆ, ಆ ಸ್ತ್ರೀ ಅದಕ್ಕೆ ಮೊದಲ ಜನ್ಮದಲ್ಲಿ ಪುರುಷನಾಗಿ ಧೈರ್ಯವನ್ನು ಕಲಿತುಕೊಂಡು ಈಗ ಸ್ತ್ರೀಯಾಗಿ ಬಂದಿದ್ದಾಳೆ.... ಅದಕ್ಕೆ ಅವಳು ಧೈರ್ಯ ಹೇಳಬಲ್ಲಳು. ಇಬ್ಬರಿಗೂ ಧೈರ್ಯ ಇಲ್ಲ ಎಂದುಕೊಂಡರೆ ಇಬ್ಬರು ಬಾಗಿಲು ಹಾಕಿಕೊಂಡು ನಡುಗುತ್ತಾ ಇರುತ್ತಾರೆ.

ಆದ್ದರಿಂದ ಧೈರ್ಯವನ್ನು ಪ್ರದರ್ಶಿಸಬಲ್ಲ ಶಕ್ತಿ, ಬಲ ಸಹಜವಾಗಿ ಪುರುಷನಿಗೆ ನೀಡಲಾಗಿದೆ. ಆರಂಭಿಕ ಜನ್ಮದಲ್ಲಿ ಪುರುಷನು ಧೈರ್ಯ ಪ್ರದರ್ಶಿಸದಿದ್ದರೂ, ನಿಧಾನವಾಗಿ ಬೇರೆಯವರನ್ನು ನೋಡಿ ಕಲಿತುಕೊಳ್ಳುತ್ತಾನೆ. ಧೈರ್ಯವನ್ನು ಪ್ರದರ್ಶಿಸುತ್ತಾನೆ. ಕೊನೆಗೆ ಎಷ್ಟು ಧೈರ್ಯ ಪ್ರದರ್ಶಿಸುತ್ತಾನೆ ಎಂದರೆ ಸಾಯಲು ಹಿಂದೆ ಮುಂದೆ ನೋಡುವುದಿಲ್ಲ.

ಅಷ್ಟೇ ಅಲ್ಲ ಧೈರ್ಯವನ್ನು ಪ್ರದರ್ಶಿಸುವವನು ನಾಯಕ. ರಾಜನಾಗುತ್ತಾನೆ ಕೂಡಾ. ಅವನು ಧೈರ್ಯ ಪ್ರದರ್ಶಿಸುವುದೇ ಅಲ್ಲದೆ ಎಲ್ಲರನ್ನು ತನ್ನ ಮಾತುಗಳಿಂದ ಉತ್ತೇಜನಗೊಳಿಸಿ, ಧೈರ್ಯ ಪ್ರದರ್ಶಿಸುವಂತೆ ಮಾಡುತ್ತಾನೆ. ತನ್ನ ನಾಯಕತ್ವದಲ್ಲಿ ಎಲ್ಲರನ್ನೂ ಮುನ್ನಡೆಸುತ್ತಾನೆ. ಗಮನಿಸಿದರೆ ಯಾವ ವಿಷಯದಲ್ಲಾದರೂ, ಅವರು ಎಷ್ಟು ಚೆನ್ನಾಗಿದ್ದಾರೆ ಎನ್ನುವುದಲ್ಲ, ಎಷ್ಟು ಧೈರ್ಯ ಪ್ರದರ್ಶಿಸಬಲ್ಲರು ಎನ್ನುವುದರ ಮೇಲೆ ವಿಜಯ ಆಧಾರವಾಗಿರುತ್ತದೆ.

ನೋಡಿ ಪ್ರಾಣಿಗಳಲ್ಲಿ ಅತ್ಯಂತ ಧೈರ್ಯವಿರುವ ಪ್ರಾಣಿ ಎಂದರೆ ಸಿಂಹ. ಸಿಂಹ ಎಷ್ಟು ದೊಡ್ಡ ಪ್ರಾಣಿಯನ್ನಾದರೂ ಧೈರ್ಯವಾಗಿ ಎದುರಿಸುತ್ತದೆ. ಅದು ಆನೆಯಾದರೂ, ಒಂಟೆಯಾದರೂ, ಜಿರಾಫೆಯಾದರೂ, ಖಡ್ಗಮೃಗವಾದರೂ ಸರಿ, ಮೊಸಳೆಯಾದರೂ ಸರಿ ಎಂತಹ ದೊಡ್ಡ ಪ್ರಾಣಿಯನ್ನಾದರೂ ಭೇಟೆಯಾಡಲು ಹಿಂದೆ ಹೋಗುವುದಿಲ್ಲ, ಸಂಶಯಿಸುವುದಿಲ್ಲ. ಅದರ ಮೇಲೆ ಬಿದ್ದು ಕೊಲ್ಲುವ ಪ್ರಯತ್ನ ಮಾಡುತ್ತದೆ.

ಅದಕ್ಕೆ ನಾವು ಸಿನಿಮಾದಲ್ಲಿ ಯೂಟ್ಯೂಬ್ನಲ್ಲಿ ನೋಡುತ್ತಾ ಇರುತ್ತೇವೆ ಸಿಂಹ ಕಂಡರೆ ಸಾಕು ಹಸುಗಳು, ಮೇಕೆಗಳು, ಎಮ್ಮೆಗಳು, ಜಿಂಕೆಗಳು, ಕಡವೆಗಳು ಏನಾದರೂ

ಸರಿ ನೂರಾರು ಸಂಖ್ಯೆಯಲ್ಲಿದ್ದರೂ... ಅವು ಮೇಯುತಿದ್ದರೂ, ಒಂದೇ ಬಾರಿಗೆ ಎಲ್ಲವೂ ಓಡಿ ಹೋಗುತ್ತವೆ. ಬಯಲು ಪ್ರದೇಶದಲ್ಲಿ ಅಡವಿಗಳಲ್ಲಿ ಅವು ತಿನ್ನುತ್ತಾ ಇರುತ್ತವೆ, ಆದರೆ ಅವು ಒಂದು ಕಡೆ ಭಯದೊಂದಿಗೆ ಶಬ್ದಗಳನ್ನು ಗಮನಿಸುತ್ತಾ ಇರುತ್ತದೆ. ಯಾವ ಶಬ್ದವಾದರೂ, ಚಿಕ್ಕ ಶಬ್ದವಾದರೂ ಸರಿ, ಓಡಿ ಹೋಗಲು ಸಿದ್ಧವಾಗಿರುತ್ತದೆ. ಭಯ ಅವುಗಳ ಲಕ್ಷಣ ಆ ಪ್ರಾಣಿಗಳಿಗೆ ಧೈರ್ಯ ಪರಿಣಾಮ ಕ್ರಮವಾಗಿ ಬರುತ್ತದೆ. ನಂತರ ಜನ್ಮಗಳಲ್ಲಿ ಅಲ್ಲಿ ಕಲಿಯಬೇಕಾಗಿರುವುದು ಅಲ್ಲೇ ಕಲಿಯುತ್ತವೆ. ಅಂತಹ ಧೈರ್ಯವುಳ್ಳ ಒಂದು ಸಿಂಹ ಮಾತ್ರ  ನೂರಾರು ಪ್ರಾಣಿಗಳನ್ನು ಓಡಿಹೋಗುವಂತೆ ಮಾಡುತ್ತದೆ.

ಅದರ ಘರ್ಜನೆ  ಕಾಡನ್ನು ನಡುಗಿಸುತ್ತದೆ. ಅದರ ಘರ್ಜನೆಗೆ ಪ್ರಾಣಿಗಳೆಲ್ಲ ಚದುರಿ ಹೋಗುತ್ತದೆ. ಘರ್ಜನೆಗೆ ಅವುಗಳ ಪರಿಸ್ಥಿತಿ ಹಾಗಿದ್ದರೆ, ಸಿಂಹವೇ ಎದುರಿಗೆ ಕಂಡರೆ ಹೇಗಿರುತ್ತದೆ ಆಲೋಚಿಸಿ.

ಮೂನ್ನೂರು ಜನ್ಮಗಳು ತೆಗೆದುಕೊಂಡ  ಸ್ತ್ರೀಯನ್ನು ಗಮನಿಸಿದರೆ, ಪುರುಷ ಲಕ್ಷಣಗಳು ಕಾಣುತ್ತವೆ. ಮಾತುಗಳು, ಕೃತಿಗಳಲ್ಲಿ ಪುರುಷನಂತೆ ಪ್ರವರ್ತಿಸುತ್ತಾಳೆ. ಅದಕ್ಕೆ ಕಾರಣ ಅವಳ ಮೊದಲಿನ ಜನ್ಮಗಳು ಪುರುಷ ಜನ್ಮಗಳಾಗಿರುತ್ತದೆ. ಹಾಗಾಗಿ ಆ ಲಕ್ಷಣಗಳೇ ಸಂಗ್ರಹವಾಗಿರುತ್ತದೆ. ಆದರೆ ಗಂಡ ಅಷ್ಟು ಜನ್ಮಗಳು ತೆಗೆದುಕೊಂಡಿಲ್ಲ ಎಂದಾದರೆ, ಹೆಣ್ಣಿನಂತೆ ಪ್ರವರ್ತಿಸುತ್ತಾನೆ. ಈಕೆ ಎಷ್ಟು ಧೈರ್ಯ ಹೇಳಿದರೂ, ಅವನಿಗೆ ಧೈರ್ಯ ಬರುವುದಿಲ್ಲ

ನೋಡಿ ನಾವು ಪತ್ರೀಜಿಯವರನ್ನು ತೆಗೆದುಕೊಂಡರೆ ಅವರಿಗಿರುವ ಧೈರ್ಯ, ನಮ್ಮ ಊಹೆಗೂ ಸಿಗುವುದಿಲ್ಲ. ಆತ ಕೋಟೀಶ್ವರನಲ್ಲ, ಆತನ ಬಳಿ ಕೋಟಿಗಳು ಇಲ್ಲ. ಆದರೂ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಆರಂಭಿಸಿದರು.

ಶುರವಿನಲ್ಲಿ ಅಂದರೆ 2004 – 2005 ನೇ ವರ್ಷಗಳಲ್ಲಿ ಅವರ ಮನೆಗೆ ಹೋಗಿದ್ದಾಗ, ಅಲ್ಲಿ ಪಾಲ್ ವಿಜಯ್ ಕುಮಾರ್ ವೈಜಾಗ್‌ನಿಂದ ಬಂದಿದ್ದರು. ಏಕೆ ಎಂದರೆ ಬೆಂಗಳೂರಿನಲ್ಲಿ ಒಂದು ಪ್ರಾಜೆಕ್ಟ್‌ಗಾಗಿ ಎಂದು ಜಾಗವನ್ನು ಸೆಲೆಕ್ಟ್ ಮಾಡಿ ಪತ್ರೀಜಿಯವರಿಗೆ ಹೇಳಿದರು. ಆದರೆ ಅದರ ರಿಜಿಸ್ಟ್ರೇಷನ್‌ಗೆ 15 ಲಕ್ಷಗಳವರೆಗೂ ಬೇಕು ಎಂದು ಹೇಳಿದರು.

ಅದಕ್ಕೋಸ್ಕರ ವೈಜಾಗ್ ಹೋಗಿ ಎಲ್ಲರನ್ನೂ ಕೇಳಿದರೆ, ಒಬ್ಬೊಬ್ಬರು 25000 ಕೊಡುತ್ತಾರೆಂದು ಪತ್ರೀಜಿ ಅವರಿಗೆ ಹೇಳುತ್ತಿದ್ದರು. ಆಗ ಅವರ ಜೇಬಿನಲ್ಲಿ ಒಂದು ಪೈಸೆಯೂ ಇರಲಿಲ್ಲ. ಇನ್ನು ರಿಜಿಸ್ಟ್ರೇಷನ್ ಹೇಗೆ ಮಾಡಿಸುತ್ತಾರೆ? ಆ ಪ್ರಾಜೆಕ್ಟ್ ಹೇಗೆ ಕಟ್ಟುತ್ತಾರೆ? ಇವರ ಧೈರ್ಯವೇನು? ಎಂದುಕೊಂಡೆನು. ಆದರೆ ಅವರು ಅದರ ಕುರಿತು ಏನು ಯೋಚಿಸಲಿಲ್ಲ. ಆಗ ನಾನು "ಏನು ಸ್ವಾಮಿ ಇದು ಈಗ ನಮಗೆ ಅವಶ್ಯಕತೆ ಇದೆಯೇ"? ಎಂದು ಸುಮ್ಮನೆ ಕೇಳಿದೆ.

ಆಗ ಅವರು "ವಯಸ್ಸು ಬಂದರೆ ಮದುವೆ ಮಾಡಿಕೊಳ್ಳುತ್ತಾರಾ? ಇಲ್ಲವಾ?" ಎಂದರು. ಮಾಡಿಕೊಳ್ಳುತ್ತಾರೆ ಎಂದು ಹೇಳಿದೆ. ಈಗ ನಮ್ಮ ಸೊಸೈಟಿಯಲ್ಲಿ ಅದರ ಅಗತ್ಯ ಬಂದಿದೆ ಅದಕ್ಕಾಗಿಯೇ, ಆ ಪ್ರಯತ್ನ ನಾವು ಮಾಡುತ್ತಿದ್ದೇವೆ ಎಂದರು. ನಂತರ ಅದನ್ನು ಆರಂಭಿಸಿ ಅದಕ್ಕೆ ಒಂದು ರೂಪ ತಂದರು.

ಅದು ಸಂಪೂರ್ಣವಾದ ಮೇಲೆ 'ಕಡ್ತಾಲ್' ನಲ್ಲಿ ಆರಂಭಿಸಿದರು. ಅದಕ್ಕೂ ಒಂದು ರೂಪ ತಂದರು. ಆನಂತರ 'ಪೇರವರಂ'ನಲ್ಲಿ.... ಇವುಗಳೆಲ್ಲಕ್ಕೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪಿಎಂಸಿ ಚಾನೆಲ್ ಆರಂಭಿಸಿದರು. ಏಕೆಂದರೆ ಅದಕ್ಕೆ ಮೊದಲು ಯಾವುದಾದರೂ ಟಿವಿ ಚಾನಲ್‌ನವರು ತಿಂಗಳಿಗೋ, ಎರಡು ತಿಂಗಳಿಗೋ ಎಲ್ಲಿಯಾದರೂ ಪತ್ರೀಜಿಯವರನ್ನು ಇಂಟರ್ವ್ಯೂ ಮಾಡಿದರೆ, ಎಲ್ಲರೂ ನೋಡಿ ಎಂದು ಮೆಸೇಜ್ ಮಾಡಿ ನೋಡುತ್ತಿದ್ದೆವು. ಅಂತಹುದು ನಾವೇ ಟಿವಿ ಚಾನೆಲ್ ಆರಂಭಿಸುವುದು ಎಂದರೆ ಮಾಮೂಲು ವಿಷಯವಲ್ಲ.

ಇದು ನಮ್ಮಿಂದ ಹೇಗೆ ಸಾಧ್ಯ? ಕೋಟಿಗಳ ಪ್ರಾಜೆಕ್ಟ್!! ಎಷ್ಟೋ ಜನ ಚಾನಲ್ ನಡೆಸಲಾರದೆ ಪ್ರಾರಂಭಿಸಿ ಮಾರಾಟ ಮಾಡಿದವರು ಇದ್ದಾರೆ, ಎಂದು ಸಂದೇಹಿಸಿದರು. ಆದರೆ ಪತ್ರೀಜಿಯವರು ಮಾತ್ರ ಎಲ್ಲಿಯೂ ಹಿಂತೆಗೆಯುತ್ತಿರಲಿಲ್ಲ. ನಿಮಗೆ ಯಾವ ಭಯ ಇಲ್ಲ. ಸರಾಗವಾಗಿ ಆಗುತ್ತದೆ ಎಂದು ಧೈರ್ಯ ಹೇಳುತ್ತಿದ್ದರು. ಒಂದಕ್ಕೆ ಭಯಪಡುತ್ತಾ ಇದ್ದರೆ, ಅವರು ಕೆಲವು ದಿನಗಳಿಗೆ ಹಿಂದಿ, ಕನ್ನಡ, ತಮಿಳ್, ಮರಾಠಿ ಚಾನೆಲ್ ಸ್ಟಾರ್ಟ್ ಮಾಡಿಸಿದರು.

ಏನು ಪರವಾಗಿಲ್ಲ ಹಣ ತಾನೆ ಬರುತ್ತದೆ ಎಂದು ಧೈರ್ಯ ಹೇಳುತ್ತಿದ್ದರು. ನಾವು ಅಷ್ಟೇ ಧೈರ್ಯವಾಗಿ ಸತ್ಯ ಮಾರ್ಗದಲ್ಲೇ ಮುಂದಕ್ಕೆ ಸಾಗಿದಾಗ ಭಯಪಡಬೇಕಾದ ಅಗತ್ಯವಿಲ್ಲ. ಪಿಎಂಸಿ ಆಶಯ, ಸತ್ಯವನ್ನು ವ್ಯಾಪಿಸುವುದು. ಅದಕ್ಕೆ "ಪ್ರತಿ ಕ್ಷಣ ಸತ್ಯದರ್ಶನ " ಎಂದು ನಮ್ಮ PMC ಲಾಂಛನದ ಕೆಳಗೆ ಬರೆಯಲಾಗಿದೆ.

ಪತ್ರೀಜಿಯವರು "ನೀರು ಹಳ್ಳವನ್ನು ಅರಿತು ಸಾಗಿದರೆ, ಸತ್ಯ ವ್ಯಾಪ್ತಿಯನ್ನು ಅರಿತು ಸಾಗುತ್ತದೆ " ಎಂದು ಹೇಳಿದ್ದಾರೆ. ಅಂದರೆ ನೀರು ಹೇಗೆ ಹಳ್ಳದ ಕಡೆಗೆ ಓಡುತ್ತದೆಯೋ, ಸತ್ಯ ಹಾಗೆ ವ್ಯಾಪ್ತಿಗೊಳ್ಳುತ್ತಾ ಇರುತ್ತದೆ ಎಂದು ಅದರ ಅರ್ಥ.. ಅಸತ್ಯ ವ್ಯಾಪಿಸುವುದಿಲ್ಲ, ಬೆಳೆಯುವುದಿಲ್ಲ, ಅಭಿವೃದ್ಧಿಯಾಗುವುದಿಲ್ಲ. ಅದೇ ಸತ್ಯವಾದರೆ ನಿಧಾನವಾದರೂ ಅಂತ್ಯವಾಗದೆ ವೃದ್ಧಿಯಾಗುತ್ತದೆ.

ಅದಕ್ಕೆ ಸತ್ಯವನ್ನು ಹಿಡಿದುಕೊಳ್ಳಬೇಕು ಆಶ್ರಯಿಸಬೇಕು ಸತ್ಯದಲ್ಲಿಯೇ ಜೀವಿಸಬೇಕು ಎನ್ನುತ್ತಾರೆ. ಆಗ ಅವನಿಗೆ ಸರಿಸಾಟಿ ಇರುವುದಿಲ್ಲ. ಆದ್ದರಿಂದ ನಾವು ಸತ್ಯವನ್ನು ಪ್ರೋತ್ಸಾಹಿಸಿದಾಗ, ಪಿಎಂಸಿ ಆದರೂ ಸರಿಯೇ, ಯಾವುದಾದರೂ ಸರಿಯೇ

ಯಾವುದೇ ಅಡ್ಡಿ ಆತಂಕವಿಲ್ಲದೆ ಅದು ಬೆಳವಣಿಗೆಯಾಗುತ್ತದೆ. ಪ್ರಕೃತಿಗೆ ಅದೇ ಬೇಕು! ಸತ್ಯವೇ ಬೇಕು.

ಸತ್ಯದ ಕುರಿತು ಹೋರಾಟ ಮಾಡುವವರಿಗೆ ಪ್ರಕೃತಿಯ ಸಹಕಾರ ಲಭಿಸುತ್ತದೆ, ಪತ್ರೀಜಿಯವರು ಹೇಳಿದಂತೆ ಯಾವ ಸಮಯಕ್ಕೆ ಏನು ಬರಬೇಕೋ ಅದೇ ಬರುತ್ತದೆ. 'ಶ್ವಾಸದ ಮೇಲೆ ಗಮನ' ಇಲ್ಲದೇ ಬೇರೆ ಯಾವುದನ್ನು ಆಶ್ರಯಿಸಿದರು ಅಂದರೆ ಮಾತನ್ನು, ಹಾಡನ್ನು, ಮ್ಯೂಸಿಕ್ಕನ್ನು, ನಾಮವನ್ನು, ರೂಪವನ್ನು, ಮಂತ್ರವನ್ನು ಯಾವುದನ್ನು ಆಶ್ರಯಿಸಿದರು ಅಸತ್ಯವನ್ನು ಆಶ್ರಯಿಸಿದಂತೆ.

ಏಕೆಂದರೆ ಸೃಷ್ಟಿಯಲ್ಲಿ ಆತ್ಮ ಒಂದೇ ಸತ್ಯ. ಆತ್ಮವಾಗದಿರುವುದು ಯಾವುದಾದರೂ ಇದ್ದರೆ ಅದು ಅಸತ್ಯ. ಆತ್ಮದಿಂದ ಉದ್ಭವಿಸಿರುವುದು ಆತ್ಮವೇ.. ಸೃಷ್ಟಿಸಲ್ಪಟ್ಟಿರುವುದು ಯಾವುದಾದರೂ ಅಸತ್ಯವೇ. ಅಸತ್ಯವನ್ನು ಆಶ್ರಯಿಸಿದವನಿಗೆ ಅಪಜಯವೇ, ತಾತ್ಕಾಲಿಕವಾಗಿ ವಿಜಯ ಕಾಣಬಹುದೇ ಹೊರತು ಅದು ಅಪಜಯವೇ. ಅದಕ್ಕೆ ನಾನು ಹೇಳುವುದು ಸತ್ಯವಾದ ಈ 'ಶ್ವಾಸದ ಮೇಲೆ ಗಮನ' ಧ್ಯಾನವನ್ನು ಬಿಡಬೇಡಿ. ಧ್ಯಾನ ಮಾಡಿದರೆ ನಮಗೆ ಸೋಲು ಇರುವುದಿಲ್ಲ. ತುಂಬಾ ಒಳ್ಳೆಯ ರೀತಿ ತಯಾರಾಗುತ್ತೇವೆ ಉನ್ನತ ವ್ಯಕ್ತಿಗಳಾಗುತ್ತೇವೆ.

ನಾವು ನಮ್ಮ ಊರಿನಲ್ಲಿ ಒಂದು ಚಿಕ್ಕ ಪ್ರಾಜೆಕ್ಟ್ ಶುರು ಮಾಡಬೇಕು ಎಂದರೆ ನಮ್ಮಿಂದ ಎಲ್ಲಿ ಆಗುತ್ತದೆ? ಸಾಧ್ಯವೇ!? ಎಂದುಕೊಳ್ಳುತ್ತೇವೆ. ಆದರೆ "ಯದ್ಭಾವಂ ತದ್ಭವತಿ" ಎನ್ನುವಂತೆ ನಿನ್ನ ಭಾವನೆ ಹೇಗಿರುತ್ತದೆ ಹಾಗೆ ಅದು ಆಗುವುದಿಲ್ಲ.

ಗಮನಿಸಿದರೆ ಬೇರೆಯವರೆಲ್ಲರೂ ನಾವು ಏನು ಮಾಡಬಲ್ಲೆವು? ಎಂದುಕೊಳ್ಳುತ್ತಾರೆ. ನಮಗೆ ಸಾಧ್ಯವೇ ಎಂದು ಹಿಂದೆ ಹೋಗುತ್ತಾರೆ. ಆದರೆ ಪತ್ರೀಜಿಯವರು ಹಾಕಿದ ಹೆಜ್ಜೆ ಹಿಂತೆಗೆಯಲಿಲ್ಲ. ಧೈರ್ಯವಾಗಿ ಮುಂದಕ್ಕೆ ಹೋಗುತ್ತಾ ಇರುತ್ತಾರೆ. ಕೊನೆಗೆ ಅದನ್ನು ಸಾಧಿಸುತ್ತಾರೆ ಕೂಡಾ. ಇಷ್ಟು ಧೈರ್ಯವಾಗಿ ಯಾರಿಗೆ ಇರಲು ಸಾಧ್ಯ!?

ಯಾರು ಕೊನೆಯ ಜನ್ಮಗಳಲ್ಲಿ ಇರುತ್ತಾರೋ, ಅವರು ಅವರ ಸ್ಥಾಯಿ ಯಲ್ಲಿ ಧೈರ್ಯವನ್ನು ಪ್ರದರ್ಶಿಸುತ್ತಾರೆ. ನಾವೆಲ್ಲರೂ ಆ ಧೈರ್ಯವನ್ನು ಪ್ರದರ್ಶಿಸಬೇಕು. ನೀವು ಕೆಳ ಸ್ಥಾಯಿ ಜನ್ಮಗಳಲ್ಲಿ ಇರುವವರಲ್ಲ ಆದರೆ ವಿಡಿಯೋ ಆನ್ ಮಾಡಲು ಭಯ, ವಿಡಿಯೋ ಆನ್ ಮಾಡಿ ಧ್ಯಾನ ಮಾಡಲು ಭಯ, ಝೂಮ್ನಲ್ಲಿ ಮಾತನಾಡಲು ಭಯ, ಏನಾಗುತ್ತದೆ? ಒಂದು ಎರಡು ಫೇಲ್ಯೂರ್ ಆಗುತ್ತದೆ, ಆದರೆ ನಷ್ಟವೇನು?

ಫೇಲ್ಯೂರ್ ಇಲ್ಲದೇ ಸಕ್ಸಸ್ ಹೇಗೆ ಆಗುತ್ತದೆ. ಡಾಕ್ಟರ್ ಆದರೂ ಸರಿ ಕೆಲವರನ್ನು ಕೊಂದರೆ ಹೊರತು ಎಕ್ಸಪರ್ಟ್ ಆಗುವುದಿಲ್ಲ. ಅವನು ಭಯಪಡುತ್ತಾ ನಾನು ಈ

ಆಪರೇಷನ್ ಮಾಡಿದರೆ ಅವನು ಸಾಯುತ್ತಾನೆ ಎಂದುಕೊಂಡರೆ ಎಂದಿಗೂ ಎಕ್ಸಪರ್ಟ್ ಆಗಲಾರ. ಅದಕ್ಕೆ ಯಾವುದನ್ನಾದರೂ ಧೈರ್ಯವಾಗಿ ಪ್ರಾರಂಭಿಸಬೇಕು.

ಪ್ರಾರಂಭದಲ್ಲಿ ಕೆಲವರನ್ನು ಸೀನಿಯರ್ ಮಾಸ್ಟರ್ ಎನ್ನುತ್ತಿದ್ದರು. ನನಗೆ ಅದು ಇಷ್ಟವಾಗುತ್ತಿರಲಿಲ್ಲ. ಏನು ನಾವು ಸೀನಿಯರ್ ಅಲ್ಲವೇ ಅವರು ಹೇಳುವುದೇನು!? ನಾವು ಹೇಳಬಲ್ಲೆವು. ಅವನು ಏನು ಹೇಳಿದ್ದಾನೆ? ಅವನು ಹೇಳಿದ್ದರಲ್ಲಿ ಏನಿದೆ? ಎನ್ನುವ ಭಾವದಲ್ಲಿಯೇ ಇರುತ್ತಿದ್ದೆನು.

"ಯಾದ್ಭಾವಂ ತದ್ಭವತಿ" ಎಂದು ಕೃಷ್ಣ ಹೇಳಿದಂತೆ ನನ್ನ ವಿಷಯದಲ್ಲಿ ಅದು ಕರೆಕ್ಟ್ ಎನಿಸಿತು. ನಾನೇಕೆ ಸೀನಿಯರ್ ಆಗಬಾರದು ಎನ್ನುವ ಭಾವನೆಯಲ್ಲಿ ಇರುತ್ತಿದ್ದೆನು. ಆ ಭಾವನೆ ನನ್ನನ್ನು ಈ ಸ್ಥಾಯಿಗೆ ತಂದಿತು.

ಆದ್ದರಿಂದ ನಾವು ಸ್ತ್ರೀಯಾದರೂ, ಪುರುಷರಾದರೂ ಧೈರ್ಯವನ್ನು ಸಂಗ್ರಹಿಸಿಕೊಂಡು ಇದ್ದೇವೆ. ನಾನು ಸ್ತ್ರೀ ಆದ್ದರಿಂದ ಭಯಪಡಬೇಕು ಎಂದುಕೊಳ್ಳದಿರಿ. ಪ್ರತಿಯೊಬ್ಬರು ಆತ್ಮರೆ, ಅದರಿಂದ ಸ್ತ್ರೀಯಾದರೂ ಸರಿಯೇ ಖಂಡಿತ ಧೈರ್ಯವನ್ನು ಪ್ರದರ್ಶಿಸಬೇಕು.

ಯುದ್ಧದಲ್ಲಿ ಪಾಲ್ಗೊಂಡರೆ ಮಾತ್ರ ಧೈರ್ಯವಲ್ಲ. ಧ್ಯಾನದ ಕುರಿತು ಹೇಳುವುದು, ಜ್ಞಾನ ಸಂಪಾದಿಸಿಕೊಂಡು ಎಲ್ಲಾ ಕಡೆ ಹೋಗಿ ಜ್ಞಾನವನ್ನು ಬೋಧಿಸುವುದು ಇವೆಲ್ಲವೂ ಎಷ್ಟೋ ಧೈರ್ಯವಂತವಾದ ಕೆಲಸಗಳು. ಈ ಪುರುಷ ಜನ್ಮದಲ್ಲಿ ಕಲಿತುಕೊಳ್ಳುವ ಲಕ್ಷಣ "ಧೈರ್ಯ" ಇದು ಪ್ರತಿಯೊಬ್ಬರೂ ಹೊಂದಿರಬೇಕು.

## 2) ಸಾಹಸ

ಸ್ತ್ರೀಯಾದರೂ, ಪುರುಷನಾದರೂ ಆತ್ಮವೇ, ಇದನ್ನು ಪ್ರತಿಯೊಬ್ಬರೂ ಮರೆಯಬಾರದು. ಆದರೆ 'ನಾನು ಸ್ತ್ರೀ' ಎಂದು ಸ್ತ್ರೀ ಅಂದ ಕೊಳ್ಳುತ್ತಾಳೆ. 'ಪುರುಷ' ನಾನು ಪುರುಷ ಎಂದುಕೊಳ್ಳುತ್ತಾನೆ. ನಾನು ಸ್ತ್ರೀ ಅಲ್ಲ ಪುರುಷನೂ ಅಲ್ಲ, ನಾನು ಆತ್ಮ ಎನ್ನುವ ಭಾವದಲ್ಲಿ ಪ್ರತಿಯೊಬ್ಬ ಮಾನವರೂ ಇರಬೇಕು. ಇದು ಪ್ರತಿ ಕ್ಷಣವು ನೆನಪಿರಬೇಕು.

ನಾನು ಈ ದೇಹ, ನಾನು ಸ್ತ್ರೀ, ನನ್ನದು ಈ ಕುಲ, ನಾನು ಹೆಂಡತಿ, ನಾನು ಗಂಡ, ಎಂದು ನೀವು ಅಂದುಕೊಂಡರೆ ಜೀವಿಸುವ ವಿಧಾನವೇ ಒಂದು ರೀತಿ ಇರುತ್ತದೆ. ನಾನು ಆತ್ಮ ಕೆಲವು ಪಾಠಗಳನ್ನು ಕಲಿಯುಲು ಇಲ್ಲಿ ಜನ್ಮ ತೆಗೆದುಕೊಂಡಿದ್ದೇನೆ, ಎಂದುಕೊಂಡರೆ ಜೀವಿಸುವ ವಿಧಾನ ಬೇರೆಯಾಗಿರುತ್ತದೆ.

ನೋಡಿ ಸಿನಿಮಾದಲ್ಲಿ ಒಬ್ಬಳು ನಟಿ ಹೆಂಡತಿಯಾಗಿ ನಟಿಸುತ್ತಾಳೆ. ಒಬ್ಬ ನಟ ಗಂಡನಾಗಿ ನಟಿಸುತ್ತಾನೆ. ನಾವು ನಟಿಸುತ್ತಿದ್ದೇವೆ ಎನ್ನುವ ಭಾವ ಅವರೊಳಗೆ

ಖಂಡಿತವಾಗಿ ಇರುತ್ತದೆ. ಆ ಸಿನಿಮಾದಲ್ಲಿ ಪಾತ್ರ ಮಾಡುವವರೆಗೆ ಆಕೆ ನನ್ನ ಹೆಂಡತಿ, ಸಿನಿಮಾದಲ್ಲಿ ಪಾತ್ರ ಮಾಡುವವರೆಗೆ ಆತ ನನ್ನ ಗಂಡ ಎನ್ನುವ ಭಾವದಲ್ಲಿ ಇರುತ್ತಾರೆ.

ಹಾಗೆಯೇ ಆತ್ಮರಾದ ನಾವೂ, ಕೆಲವು ಪಾಠ ಕಲಿತುಕೊಳ್ಳಲು ಕೆಲವು ಪಾತ್ರಗಳನ್ನು ಪೋಷಿಸುತ್ತಿದ್ದೇವೆ ಒಂದು ಪಾಠವನ್ನು 30 ಜನ್ಮದಲ್ಲಿ ಕಲಿಯಬಹುದು. 50 ಜನ್ಮದಲ್ಲಿ ಕಲಿಯಬಹುದು. ಅಥವಾ ಎರಡು ಮೂರು ಜನ್ಮಗಳಲ್ಲಿಯೇ ಕಲಿಯಬಹುದು. ಎಷ್ಟು ಕಡಿಮೆ ಜನ್ಮದಲ್ಲಿ ಕಲಿತರೆ, ಅಷ್ಟು ಜನ್ಮಗಳು ಕಡಿಮೆಯಾಗುತ್ತದೆ.

ಸಾಹಸ ಎನ್ನುವ ಲಕ್ಷಣ ಪುರುಷ ಜನ್ಮದಲ್ಲಿ ಕಲಿಯುತ್ತಾರೆ. ಸಹಜವಾಗಿ ತುಂಬಾ ಜನರು ಸಾಹಸಗಳನ್ನು ಮಾಡುತ್ತಾ ಇರುತ್ತಾರೆ. ನಾವು ಯೂಟ್ಯೂಬ್‌ನಲ್ಲಿ ಅನೇಕ ರೀತಿಯ ಸಾಹಸಗಳನ್ನು ಪ್ರತ್ಯಕ್ಷವಾಗಿ ನೋಡುತ್ತೇವೆ.

ಕೆಲವರು ಬೆಟ್ಟಗಳನ್ನು ಹತ್ತುವುದು, ಪರ್ವತಗಳನ್ನು ಹತ್ತುವುದು, ಸಮುದ್ರದಲ್ಲಿ ಈಜುವುದು, ಬೆಟ್ಟದ ಮೇಲಿಂದ ಧುಮುಕುವುದು, ಕ್ರೂರ ಮೃಗಗಳು ಇರುವಂತಹ ಅರಣ್ಯಗಳಿಗೆ ಹೋಗುವುದು, ಏನೂ ಸಿಗದಂತಹ ಮರಳುಗಾಡಿಗೆ ಹೋಗುವುದು, ಹಾಗೆ ಕಾರು – ಬೈಕು ಪಂದ್ಯಗಳಲ್ಲಿ ಪಾಲ್ಗೊಳ್ಳುವುದು ಮಾಡುತ್ತಾರೆ. ಇನ್ನೂ ಕೆಲವರು ಮನೆ ಹತ್ತಿ ಉರಿಯುವಾಗ ಆ ಜ್ವಾಲೆಯಲ್ಲಿ ಧುಮುಕಿ ಒಳಗೆ ಇರುವವರನ್ನು ರಕ್ಷಿಸುವುದು, ವಿಮಾನಗಳಿಂದ ಧುಮುಕುವುದು, ಇಂತಹವುಗಳು ಸಾಹಸ ಎನಿಸಿಕೊಳ್ಳುತ್ತದೆ.

ಇಂತಹ ಸಾಹಸಗಳನ್ನು ಯಾರಾದರೂ ಸರಿಯೇ ಕೆಲವು ಜನ್ಮಗಳಲ್ಲಿ ಮಾಡುತ್ತಾರೆ. ಮುಖ್ಯವಾಗಿ ರಜೋಗುಣದಲ್ಲಿರುವವರು ಇಂತಹವುಗಳನ್ನು ಮಾಡಿ ರೆಕಾರ್ಡ್ ಬ್ರೇಕ್ ಮಾಡಬೇಕೆಂದು ನೋಡುತ್ತಾರೆ. ಪತ್ರೀಜಿಯವರು ಏನು ಹೇಳುತ್ತಾರೆಂದರೆ ಪಾತಾಳ ಭೈರವಿ ಸಿನಿಮಾದಲ್ಲಿ ಆ ಮಾಂತ್ರಿಕ 'ಸಾಹಸ ಮಾಡೋ ಡಿಂಭಕ ಕೋರಿದ್ದು ಲಭಿಸುತ್ತದೆ' ಎನ್ನುವುದು ಇದಕ್ಕಾಗಿಯೇ ಎಂದು ಹೇಳುತ್ತಾರೆ. ಅಂದರೆ ಸಾಹಸ ಎಷ್ಟು ದೊಡ್ಡದು ಎನ್ನುವುದನ್ನು ನಾವು ತಿಳಿದುಕೊಳ್ಳಬಹುದು.

ಅಷ್ಟೇ ಅಲ್ಲ ಈ ಸಿನಿಮಾಗಳನ್ನು ನೋಡಿದಾಗ ನೀವು ಗಮನಿಸಿದರೆ ಯಾವ ಸಿನಿಮಾದಲ್ಲಾದರೂ ಎಷ್ಟೋ ಅಷ್ಟು ಸಾಹಸ ನಮಗೆ ಕಾಣಿಸುತ್ತದೆ. ಏಕೆ ಇರುತ್ತದೆ? ಎಂದರೆ ಆ ಸಾಹಸಗಳು ಇದ್ದರೆ ಯಾರಾದರೂ ಸರಿ ಆಸಕ್ತಿಯಿಂದ ಸಿನಿಮಾಗಳನ್ನು ನೋಡುತ್ತಾರೆ. ಸಾಹಸಗಳಿರುವಾಗಲೇ ಆ ಸಿನಿಮಾಗೆ ಒಂದು ಆಕರ್ಷಣೆ ಇರುತ್ತದೆ.

ಕೇವಲ ತಿಂಡಿ, ನಿದ್ರೆ, ಸಂಸಾರ ಹಾಗೂ ಮನೆಗೆ ಸೀಮಿತವಾಗದೆ ಯಾರಾದರೂ ಸರಿಯೇ ಕೆಲವು ಮಹತ್ತರವಾದ ಕಾರ್ಯಗಳನ್ನು ಕೈಗೊಳ್ಳಬೇಕು. ಕಾರಣವೇನೆಂದರೆ ತಿಂಡಿ, ನಿದ್ರೆ, ಸಂಸಾರ, ಇವುಗಳಿಗಾಗಿಯೇ ನಾವು ಭೂಮಿ ಮೇಲೆ ಬಂದಿಲ್ಲ. ಭೂಮಿಗೆ ಬಂದಿರುವುದು ಕೆಲವು ಮಹತ್ತರವಾದ ಕಾರ್ಯಕ್ರಮಗಳನ್ನು ಮಾಡಲು.

ಶರೀರ ಸ್ಥಿರವಾಗಿರಬೇಕು ಎಂದರೆ ತಿಂಡಿ, ನಿದ್ರೆ, ಸಂಸಾರ, ಮನೆ ಇಂತಹ ಅಗತ್ಯಗಳನ್ನು ನೆರವೇರಿಸಿಕೊಳ್ಳುತ್ತಾ ಯಾರಿಗೆ ಸಾಧ್ಯವಾದರೆ ಅವರು ಅವರ ಸ್ಥಾಯಿಯಲ್ಲಿ ಅವರು ಕೆಲವು ದೊಡ್ಡ ಕಾರ್ಯಕ್ರಮಗಳನ್ನು ಮಾಡುತ್ತಾ ಇರಬೇಕು. ಅಷ್ಟೇ ಹೊರತು ಹಾಯಾಗಿ ತಿನ್ನುತ್ತಾ, ಎಂಜಾಯ್ ಮಾಡುತ್ತಾ, ಹಾಯಾಗಿ ಮಲಗಿಕೊಂಡು ಜೀವನವನ್ನು ಕಳೆಯಬಾರದು. ಏಕೆಂದರೆ ನೀನು ಕಲಿಯಬೇಕಾಗಿರುವುದನ್ನು ಕಲಿಯದಿದ್ದರೂ, ಹೊಂದಬೇಕಾದ ಅನುಭವಗಳನ್ನು ಹೊಂದದಿದ್ದರೂ, ಮತ್ತೆ ಭೂಮಿ ಮೇಲೆ ಬರಬೇಕು.

ತುಂಬಾ ಜನರು ಜೀವನದಲ್ಲಿ ಯಾವ ಸಮಸ್ಯೆಗಳು, ಬಾಧೆಗಳು, ಕಷ್ಟಗಳು ಇಲ್ಲದೆ ಇದ್ದರೆ ಚೆನ್ನಾಗಿರುತ್ತೆ ಎಂದುಕೊಳ್ಳುತ್ತಾರೆ. ಜೀವನ ಸರಾಗವಾಗಿದ್ದರೆ ಕಲಿತುಕೊಳ್ಳುವುದು ಇನ್ನೇನಿರುತ್ತದೆ? ಆದ್ದರಿಂದ ಖಾಲಿಯಾಗಿ ಕೂರಬಾರದು. ಕಷ್ಟ ಪಡಬೇಕು. ಯಾವುದೋ ಒಂದು ಕಲಿಯಬೇಕು ಏನೋ ಒಂದು ಕೆಲಸ ಮಾಡಬೇಕು ಹತ್ತು ಜನರಿಗೆ ಉಪಯೋಗವಾಗುವ ಕೆಲಸಗಳನ್ನು ಮಾಡುತ್ತಾ ಇರಬೇಕು.

ಹಾಗೆ ಜೀವಿಸಿದರೆನೇ, ಅದು ಸಾಹಸೋಪೇತವಾದ ಜೀವನವಾಗುತ್ತದೆ. ಅಂತಹವುಗಳಿಗೋಸ್ಕರ ಜೀವನವನ್ನು ಅಂಕಿತಗೊಳಿಸಬೇಕು. ಅಷ್ಟೇ ಅಲ್ಲ ತನಗಿರುವುದರಲ್ಲಿ ಸಾಧ್ಯವಾದಷ್ಟು ಇತರರಿಗೆ ಕೊಡುವುದು ಕೂಡಾ ಸಾಹಸ ಕಾರ್ಯವೇ... ಲೋಕ ಕಲ್ಯಾಣ ಕರವಾದ ಕಾರ್ಯಗಳಿಗೆ, ಇತರರಿಗೆ ಸೇವೆ ಮಾಡಿ ಅವುಗಳಿಗೆ, ತಮ್ಮ ಬಳಿ ಇರುವುದರಲ್ಲಿ ಸ್ವಲ್ಪ ಕೊಡುವುದು ಕೂಡಾ ಸಾಹಸವೇ.

ಇನ್ನೂ ಕೆಲವರು ಸಾಹಸದ ಪರಾಕಾಷ್ಠೆಗೆ ಸೇರಿದವರು ಏನು ಮಾಡುತ್ತಾರೆಂದರೆ, ತಮ್ಮ ಕುರಿತು ಯೋಚಿಸುವುದಿಲ್ಲ. ತಮ್ಮ ಸುಖವನ್ನು ನೋಡಿಕೊಳ್ಳುವುದಿಲ್ಲ. ತಮಗೆ ಇದೆಯೇ ಇಲ್ಲವೇ ಎಂದು ನೋಡುವುದಿಲ್ಲ. ಇತರರಿಗಾಗಿ ತಮ್ಮ ಜೀವನವನ್ನು ಅಂಕಿತಗೊಳಿಸುತ್ತಾರೆ. ಹೀಗೆ ಜೀವಿಸುವುದು ಕೂಡಾ ಒಂದು ಸಾಹಸಭರಿತವಾದ ಜೀವನವೇ. ಸಾಹಸಗಳು ಸಾಧಾರಣವಾಗಿ ರಜೋಗುಣದಲ್ಲಿ ಮಾಡುತ್ತಾರೆ.

ಹಾಗೆ ಕೆಲವು ಜನ್ಮಗಳಾದ ಮೇಲೆ ಮತ್ತೆ ಸಾತ್ವಿಕ ಗುಣಕ್ಕೆ ಬಂದ ನಂತರ ಮಾಡುವ ಸಾಹಸಗಳು ಬದಲಾಗುತ್ತವೆ. ಸಾಹಸಗಳು ಅಂದರೆ ಯಾವಾಗಲೂ ಬೆಟ್ಟಗಳು ಹತ್ತಿ ಧುಮುಕುವುದಲ್ಲ. ಇರುವುದರಲ್ಲಿ ಇತರರಿಗೆ ಕೊಡುವುದು, ತನಗಿರುವುದನ್ನು ತ್ಯಾಗ ಮಾಡುವುದು ಕೂಡ ಒಂದು ದೊಡ್ಡ ಸಾಹಸವೇ.

ಗಾಂಧೀಜಿಯವರನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಅವರಿಗೋಸ್ಕರ ಅವರು ಜೀವಿಸಲಿಲ್ಲ. ದೇಶಕ್ಕಾಗಿ ಜೀವಿಸಿದರು. ಮದರ್ ಥೇರೆಸಾರನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಆಕೆಯೂ ಅಷ್ಟೇ ಇತರರಿಗಾಗಿ ಜೀವಿಸಿದರು.

ಇಂತಹ ಮಹಾಕಾರ್ಯಗಳು ಯಾರು ಮಾಡುವರೋ ಅವರು ಜನಾಲೋಕ ದಾಟಿ, ಊರ್ಧ್ವ ಲೋಕವಾದ ಮಹಾ ಲೋಕವನ್ನು ಸೇರುತ್ತಾರೆ.

ಸಹಜವಾಗಿ ಲೋಕದಲ್ಲಿ ಇರುವ ಪರಿಸ್ಥಿತಿ ಏನೆಂದರೆ, ಮಕ್ಕಳು ಇಂತಹವುಗಳನ್ನು ಏನಾದರೂ ನೋಡಿ ಅವುಗಳಿಗೆ ಪ್ರಭಾವಿತರಾಗಿ ತಾವು ಕೂಡಾ ಹಾಗೆ ಮಾಡಬೇಕು ಎಂದಾಗ, ತಂದೆ – ತಾಯಂದಿರು, ಹಿರಿಯರು ಅವರನ್ನು ನಿರುತ್ಸಾಹಗೊಳಿಸುತ್ತಾರೆ. ಅದು ನಿನ್ನಿಂದ ಆಗುವುದಿಲ್ಲ. ಏಕೆ ಇಲ್ಲದ ತೊಂದರೆ ತಂದುಕೊಳ್ಳುವೆ, ನಿನ್ನ ಕೆಲಸ ನೀನು ಮಾಡಿಕೊಂಡು ಹಾಯಾಗಿ ಇರಬಹುದಲ್ಲವೇ!? ಎನ್ನುತ್ತಾರೆ. ಅಂತ ಕೆಲಸಗಳು ಮಾಡಿದಾಗ ನಿನಗೆ ಏನಾದರೂ ಆದರೆ ನಿನ್ನ ಸಂಸಾರ ಏನಾಗುತ್ತದೆ? ನಿನ್ನ ಮಕ್ಕಳೇನಾಗುತ್ತಾರೆ? ನಿನಗೇಕೇ ಇವೆಲ್ಲಾ ಎಂದು ನಿರುತ್ಸಾಹ ಗೊಳಿಸುತ್ತಾರೆ.

ಆದರೆ ಪತ್ರೀಜಿಯವರು ಮಕ್ಕಳನ್ನು ನಿರುತ್ಸಾಹಗೊಳಿಸಬಾರದು ಎಂದು ಹೇಳುತ್ತಾರೆ. ಅವರಿಗೆ ಕಲಿಸಬೇಕು, ಕತ್ತಲಲ್ಲಿ ಹೋಗು ಎಂದು ಹೇಳಬೇಕು. ಸ್ಮಶಾನಕ್ಕೆ ಕರೆದುಕೊಂಡು ಹೋಗಬೇಕು. ಯಾವ ಕೆಲಸವಾದರೂ ಸರಿಯೇ ಭಯಪಡುವಂತೆ ಮಾಡಬಾರದು. ಮಕ್ಕಳಿಗೆ ಭಯವನ್ನು ಕಲಿಸಬಾರದು. ಆಗಲೇ ಅವರು ಉನ್ನತ ಕಾರ್ಯಗಳನ್ನು ಮಾಡುತ್ತಾರೆ.

ಪ್ರತಿ ಮಾನವನು, ಯಾವುದೋ ಒಂದು ಉದಾತ್ತವಾದ ಉನ್ನತವಾದ ಕಾರ್ಯಕ್ರಮವನ್ನು ಕೈಗೊಂಡು ಅದನ್ನು ಸಾಧಿಸುವುದಕ್ಕಾಗಿ ಹುಟ್ಟುತ್ತಾನೆ. ಭಯಪಡುತ್ತಾ ಜೀವಿಸುವುದಕ್ಕಾಗಿ ಅಲ್ಲ. ಆತ್ಮದ ಒಂದು ಕೋರಿಕೆ ಸಾಹಸ ಮಾಡುವುದೇ ಆಗಿರುತ್ತದೆ.

ಶರೀರದ ಕೋರಿಕೆ  ಹಸಿವು ತೀರಿಸಿಕೊಳ್ಳುವುದು. ಆತ್ಮದ ಕೋರಿಕೆ ಸಾಹಸಗಳನ್ನು ಮಾಡುವುದು. ಆದ್ದರಿಂದ ನಾನು ಶರೀರ ಎಂದುಕೊಂಡವನು ಹಸಿವು ತೀರಿಸಿಕೊಳ್ಳುವುದಕ್ಕಾಗಿ ಜೀವಿಸುತ್ತಾನೆ. ಯಾವಾಗ ನಾನು ಆತ್ಮ ಎಂದು ತಿಳಿಯುವನೋ, ಸಾಹಸಗಳು ಮಾಡಲಿಕ್ಕಾಗಿ ಪ್ರಯತ್ನಿಸಿ ಸಾಹಸಿಯಾಗುತ್ತಾನೆ.

ನಾನು ಆತ್ಮ ಎಂದು ಜೀವಿಸುವವರಿಗೆ ಸಾಹಸ ಎನ್ನುವುದು ಸಹಜ ಸಿದ್ಧವಾಗುತ್ತದೆ. ಯಾರಾದರೆ ಆತ್ಮಜ್ಞಾನದಲ್ಲಿ ಪ್ರವೇಶಿಸುತ್ತಾರೋ ಅವರಿಗೆ ಸಾಹಸ ಎನ್ನುವುದು ಒಂದು ದಿನಚರಿಯಾಗುತ್ತದೆ, ಸಹಜವಾಗುತ್ತದೆ. ಆದ್ದರಿಂದ ಪತ್ರೀಜಿಯವರು ಚಿಕ್ಕ ಮಕ್ಕಳಿಗೆ ಅವರ ಚಿಕ್ಕಂದಿನಿಂದಲೇ ಈ ಸಾಹಸವನ್ನು ಕಲಿಸಬೇಕು ಎನ್ನುತ್ತಾರೆ.

ಅವರಿಗೆ ದೆವ್ವಗಳಿಗೆ, ಭೂತಗಳಿವೆ, ಗೊಗ್ಗಯ್ಯ ಇದ್ದಾನೆ, ಕಳ್ಳನಿದ್ದಾನೆ ಎಂದು ಭಯ ಹಿಡಿಸಬಾರದು. ಇಂತಹವುದೆಲ್ಲವೂ ಹೇಳಿ ಅವನನ್ನು ಅಂಜುಬುರುಕನಂತೆ ಯಾವುದಕ್ಕೂ ಕೆಲಸಕ್ಕೆ ಬಾರದವನಂತೆ ತಯಾರು ಮಾಡಬಾರದು ಎನ್ನುತ್ತಾರೆ. ಮಕ್ಕಳು ಗಲಾಟೆ ಮಾಡಿದರೆ ಅವರಿಗೆ ಭಯ ಹಿಡಿಸಿ ಅವರನ್ನು ಸುಮ್ಮನಿರಿಸುವುದು ಬುದ್ಧಿಹೀನ ಕೆಲಸ ಎನ್ನುತ್ತಾರೆ.

ಸ್ಮಶಾನದ ಕಡೆಗೆ ಕರೆದುಕೊಂಡು ಹೋಗಬೇಕು. ಅಲ್ಲಿಯೂ ಅವರು ಸ್ವೇಚ್ಛೆಯಿಂದ ಓಡಾಡಬೇಕು. ಆ ರೀತಿಯಲ್ಲಿ ಭಯವನ್ನು ಹೋಗಲಾಡಿಸಬೇಕು. ನದಿಯಲ್ಲಿ ಈಜು ಎಂದು ಪ್ರೋತ್ಸಾಹಿಸಬೇಕು. ತಕ್ಕ ಜಾಗ್ರತೆಗಳನ್ನು ತೆಗೆದುಕೊಳ್ಳುತ್ತಲೇ, ಸಾಹಸಗಳನ್ನು ಕಲಿಸಬೇಕು. ಎಲ್ಲರೂ 'ಛೀ' ಎಂದರೂ ಆತ್ಮಕ್ಕೆ ತೋಚಿದ್ದು, ನಮ್ಮ ಹೃದಯ ಹೇಳಿದ್ದನ್ನು ನಿರ್ಭಯವಾಗಿ ಮಾಡುತ್ತಾ ಹೋಗುವುದೇ ಸಾಹಸ.

ಆತ್ಮ ಯಾವಾಗಲೂ ಧರ್ಮವನ್ನೇ ಹೇಳುತ್ತದೆ. ಆದ್ದರಿಂದ ಇತರರು ಏನು ಹೇಳುತ್ತಾರೋ, ಎಂದು ಲೆಕ್ಕಿಸದೆ ನಮ್ಮ ಹೃದಯದಲ್ಲಿ ತೋಚಿದ್ದನ್ನು ನಿರ್ಭಯವಾಗಿ ಮಾಡಿಕೊಳ್ಳುತ್ತಾ ಹೋಗುವುದೇ ಸಾಹಸ. ಯಾವಾಗ ತಾನು ತನಗೆ ತೋಚಿದ್ದು ಮಾಡುತ್ತಾ ಹೋಗುತ್ತಾನೋ, ಅದನ್ನು ನೋಡಿ ಮತ್ತೊಬ್ಬನು ಮಾಡುತ್ತಾನೆ. ಪತ್ರೀಜಿಯವರು ನಿರ್ಭಯವಾಗಿ  ಪೂಜೆಗಳು ಬೇಡ, ಸತ್ಯವನ್ನು  ಆಶ್ರಯಿಸಿ, ಮಂತ್ರ ಬೇಡ, ರೂಪ ಬೇಡ, ಮಾಂಸ ಬೇಡ ಎಂದು ನಿರ್ಭಯವಾಗಿ ಹೇಳಿದ್ದಾರೆ. ಅದನ್ನೇ ನಾವು ನಿರ್ಭಯವಾಗಿ ಮಾಡುತ್ತಿದ್ದೇವೆ, ಹೇಳುತ್ತಿದ್ದೇವೆ ಅದೇ ಸಾಹಸ.

ಒಬ್ಬರು ಮಾಡಿದರೆ, ಮತ್ತೊಬ್ಬರು ಅನುಸರಿಸುತ್ತಾರೆ. ದೊಡ್ಡ ವ್ಯಕ್ತಿಗಳಾಗುತ್ತಾರೆ. ಸಾಹಸಕ್ಕೆ ಮೇಲಿನ ಲೋಕಗಳಲ್ಲಿ ಎಷ್ಟು ಅಂಕಗಳು ಬರುತ್ತವೆ ಎನ್ನುವುದು ನೆನಪಿರಲಿ. ನೀನು ಭೂಮಿಯ ಮೇಲೆ ಯಾವ ಸಾಹಸಗಳು ಮಾಡದಿದ್ದರೆ, ಮೇಲಿನ ಲೋಕಗಳಿಗೆ ಹೋದ ಮೇಲೆ ಏಕೆ ಭೂಮಿಯ ಮೇಲೆ ಇದ್ದಾಗ ಸಾಹಸ ಮಾಡಲಿಲ್ಲ? ಎಂದು ಕೇಳುತ್ತಾರೆ. ಮಕ್ಕಳಿದ್ದಾರೆ, ಉದ್ಯೋಗವಿದೆ, ಜವಾಬ್ದಾರಿ ಇದೆ ಎಂದು ಕಥೆ ಹೇಳಿದರೆ ಹೇಳಬಹುದು ಹೊರತು, ಅದಕ್ಕೆ ಅಂಕಗಳು ಇರುವುದಿಲ್ಲ.

ಭೀಮವರಂನಲ್ಲಿ ನಡೆಯುವ ಕ್ಲಾಸ್‌ಗಳಲ್ಲಿ ಭಾಗವಹಿಸಿ ಎಂದು ಹೇಳಿದರೆ, ಎಷ್ಟೋ ಕಾರಣಗಳನ್ನು ಹೇಳುತ್ತಾರೆ. ಆದರೆ ಆ ಜ್ಞಾನ ಸಂಪಾದಿಸಿಕೊಂಡು ಆತ್ಮಸ್ಥಿತಿಯಲ್ಲಿ ಜೀವಿಸಿದರೆ, ಮೇಲಿನ ಲೋಕಗಳಿಗೆ ಹೋದಾಗ ಎಷ್ಟು ಮಾರ್ಕ್ ಬರುತ್ತವೆಯೋ... ನೀನು ಪರೀಕ್ಷೆ ಬರೆದರೆ ನಿನಗೆ ಮಾರ್ಕುಗಳು ಬರುತ್ತದೆ. ಪ್ರಮೋಷನ್ ಬರುತ್ತದೆ. ಬರೆಯದಿದ್ದರೆ, ಅಂಕಗಳು ಬರುವುದಿಲ್ಲ. ಪ್ರಮೋಷನ್ ಇರುವುದಿಲ್ಲ. ಜ್ಞಾನ ಸಂಪಾದಿಸದಿದ್ದರೆ, ಉನ್ನತ ಲೋಕಗಳಿಗೆ ಹೋಗಲಾರೆ. ಈಗ ಇರುವ ಲೋಕದಲ್ಲಿ ಇರುತ್ತಾ ಮತ್ತಷ್ಟು ಕೆಳಗಿನ ಸ್ಥಾಯಿಗೆ ಹೋಗುವೆ.

ಪತ್ರೀಜಿಯವರು ಏನು ಹೇಳಿದ್ದಾರೆ? ಎಂದರೆ 'ಶ್ವಾಸದ ಮೇಲೆ ಗಮನ' ವಿರಿಸಿ ಧ್ಯಾನ ಮಾಡುವುದು ಎಲ್ಲಕ್ಕಿಂತ ದೊಡ್ಡ ಸಾಹಸ ಎಂದಿದ್ದಾರೆ. ಮನಸ್ಸು ನಿರ್ಮಲ ಮಾಡಿಕೊಳ್ಳುವುದು, ಶುದ್ಧಿ ಮಾಡಿಕೊಳ್ಳುವುದು, ಮೂರನೆಯ ಕಣ್ಣು ಸಂಪಾದಿಸುವುದು, ಗತಜನ್ಮಗಳನ್ನು ನೋಡಿಕೊಳ್ಳುವುದು ಅತ್ಯಂತ ದೊಡ್ಡ ಸಾಹಸ ಎಂದಿದ್ದಾರೆ.

ಎಲ್ಲಕ್ಕಿಂತಲೂ ಅತ್ಯಂತ ದೊಡ್ಡ ಸಾಹಸ ಕಾರ್ಯಕ್ರಮ ಏನೆಂದರೆ, 'ಶ್ವಾಸದ ಮೇಲೆ ಗಮನ' ಇರಿಸಿ ಧ್ಯಾನ ಮಾಡುವುದು ಆ ಧ್ಯಾನದ ಮೂಲಕ ಜ್ಞಾನವನ್ನು ಸಂಪಾದಿಸಿಕೊಳ್ಳುವುದು. ಆದ್ದರಿಂದ ಪ್ರತಿದಿನ ಈ ದೊಡ್ಡ ಸಾಹಸ ಕಾರ್ಯಕ್ರಮ ಮಾಡೋಣ. ಧ್ಯಾನದಲ್ಲಿ ನಿಮಗ್ನರಾಗೋಣ.

ರಜೋಗುಣದಲ್ಲಿರುವವರ ಸಾಹಸಗಳು ಒಂದು ವಿಧವಾಗಿರುತ್ತವೆ, ಸಾತ್ವಿಕ ಗುಣದಲ್ಲಿ ಇರುವವರ ಸಾಹಸಗಳು ಮತ್ತೊಂದು ವಿಧವಾಗಿ ಇರುತ್ತದೆ, ಶುದ್ಧ ಸಾತ್ವಿಕದಲ್ಲಿರುವವರ ಸಾಹಸಗಳು ಇನ್ನೊಂದು ರೀತಿ ಇರುತ್ತದೆ. ಆತ್ಮ ಸ್ಥಿತಿ ಹೊಂದುತ್ತಾ ಇದ್ದರೆ ಮಾಡುವ ಸಾಹಸಗಳು ಮತ್ತೊಂದು ರೀತಿಯಲ್ಲಿ ಇರುತ್ತದೆ. ಅಷ್ಟೇ ಅಲ್ಲ ಈ ಸ್ಥಿತಿಗೆ ಬರುವ ಹೊತ್ತಿಗೆ ಏನು ಮಾಡುತ್ತಾರೆ? ಎಂದರೆ ಸತ್ಯವನ್ನು ಆಶ್ರಯಿಸುತ್ತಾರೆ. ಸತ್ಯವನ್ನು ನಿರ್ವಹಿಸುತ್ತಾರೆ, ಸತ್ಯದಲ್ಲಿ ಜೀವಿಸುತ್ತಾ ಇರುತ್ತಾರೆ. ಇದು ಎಂತಹ ಸಾಹಸ ಎಂದರೆ ಮೊಸಳೆಗಳು ಇರುವ ಸರೋವರದಲ್ಲಿ ಇಳಿಯುವಂತಹದು. ಸತ್ಯವನ್ನು ಆಶ್ರಯಿಸುವುದು, ಬೋಧಿಸುವುದು, ಸತ್ಯದಲ್ಲಿ ಜೀವಿಸುವುದು ದೊಡ್ಡ ಸಾಹಸಕರವಾದ ಚರ್ಯೆಯೇ.

ಇಂತಹ ಕೆಲಸಗಳು ಮಾಡುವವರಿಗೆ ಪ್ರಕೃತಿಯ ಸಹಾಯ ಚೆನ್ನಾಗಿರುತ್ತದೆ. ಈಗ ನಾವೆಲ್ಲರೂ ಆ ಕೆಲಸವನ್ನೇ ಮಾಡುತ್ತಿದ್ದೇವೆ. ಆತ್ಮ ಸ್ಥಿತಿಯಲ್ಲಿರುವವರು ಮಾತ್ರವೇ ಅಷ್ಟು ದೊಡ್ಡ ಸಾಹಸ ಕಾರ್ಯಕ್ರಮಗಳನ್ನು ಮಾಡಬಲ್ಲರು.

ಬೇರೆಯವರು ಏನು ಅಂದುಕೊಂಡರು ಅದನ್ನು ಲೆಕ್ಕಿಸದೆ ತಾವು ಅಂದುಕೊಂಡ ಕೆಲಸದಲ್ಲಿ ನಿಮಗ್ನವಾಗುವುದೇ ಒಂದು ಮಾಸ್ಟರ್ ಲಕ್ಷ್ಯ. ಇನ್ನೊಂದು ವಿಷಯ ತಿಳಿದುಕೊಳ್ಳಬೇಕು, ನಾವು ಸಾಹಸಗಳು ಮಾಡಿದಾಗ ಜಯಾಪ ಜಯಗಳೊಂದಿಗೆ ಸಂಬಂಧವಿರುವುದಿಲ್ಲ. ಅದು ಸಕ್ಸಸ್ ಆಗಿದೆಯೇ? ಫೇಲ್ಯೂರ್ ಆಗಿದೆಯೇ? ಎನ್ನುವುದು ಅನಗತ್ಯ. ನೀನು ಕಾರ್ಯಕ್ರಮವನ್ನು ಕೈಗೊಂಡಿರುವೆ ಅಥವಾ ಯಾವುದೋ ಕ್ಲಾಸ್ ಹೇಳಲು ಹೋಗಿರುವೆ ಅಲ್ಲಿ ಎಷ್ಟು ಜನ ಬಂದಿದ್ದಾರೆ ಎಂದು ಚಿಂತಿಸುವ ಅಗತ್ಯವಿಲ್ಲ. ನೀನು ಎಷ್ಟು ದೊಡ್ಡ ಕೆಲಸ ಮಾಡಿರುವೆಯೋ, ಇಲ್ಲವೋ? ಹೋಗಿ ಹೇಳಿರುವೆಯೋ, ಇಲ್ಲವೋ? ಎನ್ನುವುದು ಬೇಕು.

ಅವಕಾಶ ಯಾವುದು ಬಂದರೂ ಅದನ್ನು ಉಪಯೋಗಿಸಿಕೊಂಡಿರುವೆ, ಅದು ಮುಖ್ಯ. ನಮ್ಮವರೆಲ್ಲರೂ ಈ ಸಾಹಸವನ್ನು ಅಭ್ಯಾಸ ಮಾಡುತ್ತಲೇ ಇರುತ್ತಾರೆ. ಅಂತಹವರು ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದುತ್ತಾರೆ. ಜೀವನದಲ್ಲಿ ಎಷ್ಟೋ ಲಾಭಗಳು ಹೊಂದುತ್ತಾರೆ. ಉನ್ನತ ಲೋಕಗಳನ್ನು ಸೇರಿಕೊಳ್ಳುತ್ತಾರೆ.

## 3) ಉಪಕ್ರಮ (ಮುಂದಾಳತ್ವ)

ಪುರುಷ ಜನ್ಮಗಳಲ್ಲಿ ಕಲಿತುಕೊಳ್ಳುವುದರ ಒಂದು ಮುಖ್ಯವಾದ ಲಕ್ಷಣ ಏನೆಂದರೆ ಉಪಕ್ರಮ. ಸಹಜವಾಗಿ ಗಂಡ ಹೆಂಡತಿಯರಲ್ಲಿ ಎಲ್ಲಾ ವಿಷಯಗಳಲ್ಲಿ ಮೊದಲು ಮುಂದಾಳತ್ವ ವಹಿಸುವುದು ಪುರುಷನೇ.. ಸ್ತ್ರೀ ಯಾವಾಗಲೂ ಪುರುಷನನ್ನೇ ಅನುಸರಿಸುತ್ತಾಳೆ. ಅಗತ್ಯವಾದ ಸಂದರ್ಭದಲ್ಲಿ ಹೊರತು ನಿರ್ಣಯ ತೆಗೆದುಕೊಳ್ಳಲು ಪುರುಷನಿಗೆ ಬಿಡುತ್ತಾಳೆ.

ಪ್ರಯಾಣದಲ್ಲಾಗಲಿ, ಹೊರಗೆ ಹೋದಾಗ, ರಾತ್ರಿ ಸಮಯದಲ್ಲಿ, ಕೊನೆಗೆ ಯಾವುದಾದರೂ ಜಗಳಗಳಲ್ಲೂ, ಮೊದಲು ಪುರುಷನೇ  ಮುಂದೆ ಹೋಗುತ್ತಾನೆ. ಎಲ್ಲಾ ವಿಷಯಗಳಲ್ಲೂ ಸ್ತ್ರೀ ಪುರುಷನ ಹಿಂದೆ ನಿಂತು ಸಹಕರಿಸುತ್ತಾಳೆ.

ಆದ್ದರಿಂದ ಪುರುಷ ಜನ್ಮಗಳಲ್ಲಿ ಮುಂದಾಳತ್ವ ಎನ್ನುವ ಲಕ್ಷಣವನ್ನು ಚೆನ್ನಾಗಿ ಕಲಿಯುತ್ತಾನೆ.  ಯಾವ ಲಕ್ಷಣವಾದರೂ ಸರಿಯೇ, ಒಂದೇ ಜನ್ಮದಲ್ಲಿ ಬರುವುದಿಲ್ಲ. ಕೆಲವು ಜನ್ಮಗಳಾಗುತ್ತದೆ. ನೀವು ಗಮನಿಸಿದರೆ ಪ್ರಕೃತಿಯಲ್ಲಿ ಪುರುಷನಿಗೆ ಬಲವಾದ ಸದೃಢವಾದ ಶರೀರವನ್ನು ನೀಡಲಾಗಿದೆ. ಸ್ತ್ರೀಗೆ ಸುಲಲಿತವಾದ, ಮೃದುವಾದ ಶರೀರವನ್ನು ನೀಡಲಾಗಿದೆ. ಅದಕ್ಕೆ ಸ್ತ್ರೀ ಸೂಕ್ಷ್ಮವಾದ ಶರೀರದೊಂದಿಗೆ ಪುರುಷನ ಅಧೀನದಲ್ಲಿ ಜೀವಿಸುತ್ತಾಳೆ. ಹಾಗೆ ಪುರುಷನು ಮೇಲಿನ ಲಕ್ಷಣಗಳೆಲ್ಲವನ್ನು ಸಂಗ್ರಹಿಸಿಕೊಳ್ಳಬೇಕು. ಹಾಗಾಗಿ ಸಂಸಾರದಲ್ಲಿ ಪುರುಷ ಅಧಿಪತ್ಯವಹಿಸುತ್ತಾನೆ. ಮುಂದಾಳತ್ವ ವಹಿಸುತ್ತಾನೆ. ಸಂಭೋಗ ಸಮಯದಲ್ಲೂ ಪುರುಷನೇ ಮೊದಲೇ ಉಪಕ್ರಮಿಸುತ್ತಾನೆ. ಸ್ತ್ರೀ ಅದನ್ನೇ ಬಯಸುತ್ತಾಳೆ.

ಸ್ತ್ರೀ ತನ್ನ ದೇಹವನ್ನು ಪುರುಷನಿಗೆ ಒಪ್ಪಿಸುತ್ತಾಳೆ. ಪುರುಷನು ಏನು ಮಾಡಿದರೂ ಬೇಡ ಎನ್ನುವುದಿಲ್ಲ. ಒಮ್ಮೊಮ್ಮೆ ತನಗೇನಾದರೂ ಸಹಿಸುತ್ತಾಳೆ ಕೂಡಾ. ಈವಿಧವಾದ ಏರ್ಪಾಟು ಸಹಜವಾಗಿ ಪ್ರಕೃತಿಯಲ್ಲಿದೆ. ಪುರುಷನಿಗೆ ಅಷ್ಟು ದೃಢವಾದ ಶರೀರವಿದೆಯಾದ್ದರಿಂದ ಈ ಸೃಷ್ಟಿ ಕಾರ್ಯ ನಡೆಯುತ್ತದೆ, ಈ ಸೃಷ್ಠಿ ಹೀಗೆ ಮುಂದುವರೆಯುತ್ತಿದೆ. ಪುರುಷನು ಅಲ್ಪನಾಗಿ ಸ್ತ್ರೀ ಸಧೃಢವಾಗಿದ್ದರೆ ಆ ಕಾರ್ಯ ನಡೆಯುವುದಿಲ್ಲ ಅದಕ್ಕೆ ಸೃಷ್ಠಿಯಲ್ಲಿ ಈ ಏರ್ಪಾಟು ಆಗಿದೆ.

ಅದಕ್ಕೆ ನೀವು ನೋಡಿ ಪ್ರಾಣಿಗಳಲ್ಲಾಗಲಿ, ಪಕ್ಷಿಯಲ್ಲಾಗಲಿ, ಕ್ರಿಮಿ – ಕೀಟ ಜಾತಿಗಳಲ್ಲಾಗಲಿ, ಯಾವ ಜಾತಿಯಲ್ಲಿ ನೋಡಿದರೂ ಗಂಡು ಜಾತಿ ಶರೀರಗಳು ಹೆಣ್ಣು ಜಾತಿ ಶರೀರಕ್ಕಿಂತ ಬಲಿಷ್ಠವಾಗಿ ದೃಢವಾಗಿರುತ್ತದೆ. ಹೆಣ್ಣು ಸಿಂಹವನ್ನು ಶಿವಂಗಿ ಎನ್ನುತ್ತಾರೆ. ಅದು ಪುರುಷ ಶರೀರವನ್ನು ನೋಡಿ ಅದಕ್ಕೆ ಶರಣಾಗುತ್ತದೆ.

ಅಷ್ಟೇ ಅಲ್ಲ ಪುರುಷನು ಸ್ತ್ರೀಯನ್ನು ಆಕರ್ಷಿಸಬೇಕು ಆದ್ದರಿಂದ ಪುರುಷ ಶರೀರಕ್ಕೆ ಸಹಜವಾಗಿ ಅಂದವಾದ ಶರೀರವನ್ನು ಕೊಡಲಾಗುತ್ತದೆ. ಹಾಗೆ ಹೆಣ್ಣು ನವಿಲನ್ನು ನೋಡಿ, ಗಂಡು ನವಿಲನ್ನು ನೋಡಿ, ಎಷ್ಟು ವ್ಯತ್ಯಾಸ ಇದೆಯೋ... ಗರಿಗಳು ಗಂಡು ನವಿಲಿಗೆ ಚೆನ್ನಾಗಿರುತ್ತದೆ. ಹೆಣ್ಣು ನವಿಲಿಗೆ ಇರುವುದಿಲ್ಲ. ಗಂಡು ನವಿಲು ಗರಿ ಬಿಚ್ಚಿದ ಕೂಡಲೇ ಹೆಣ್ಣು ನವಿಲು ಆಕರ್ಷಣೆಗೆ ಒಳಗಾಗುತ್ತದೆ.

ಹಾಗೆ ಗಂಡು ಜಿಂಕೆಗೆ ಅಂದವಾದ ಕೊಂಬುಗಳು ಇರುತ್ತವೆ. ಹೆಣ್ಣು ಜಿಂಕೆಗೆ ಇರುವುದಿಲ್ಲ. ಹಾಗೆ ನೀವು ಯಾವ ಜಾತಿಯನ್ನು ತೆಗೆದುಕೊಂಡರೂ, ಹೆಣ್ಣು ಜೀವಿಯ ಶರೀರ ತುಂಬಾ ಅಷ್ಟು ಶಕ್ತಿ ಹೊಂದಿರುವುದಿಲ್ಲ. ಗಂಡು ಜೀವಿಯ ಶರೀರ ತುಂಬಾ ಸಧೃಡವಾಗಿರುತ್ತದೆ, ಬಲಯುತವಾಗಿರುತ್ತದೆ. ಸೃಷ್ಟಿಕಾರ್ಯ ನಡೆಯಲೆಂದೇ, ಈ ಏರ್ಪಾಟು ಇದೆ. ಹೀಗೆ ಈ ಸೃಷ್ಟಿ ಯುಗ ಯುಗಗಳಿಂದ ಮುಂದುವರೆಯುತ್ತಿದೆ.

ಅದಕ್ಕೆ ಯಾವ ವಿಧವಾದ ಜೀವಿಯೂ, ಈ ಸೃಷ್ಟಿಯಲ್ಲಿ ಕಣ್ಮರೆಯಾಗುತ್ತಿಲ್ಲ, ಮುಂದುವರೆಯುತ್ತಿದೆ. ಈ ಸೃಷ್ಟಿ ಹೀಗೆ ಇನ್ನೂ ಕೆಲವು ಕೋಟಿ ಸಂವತ್ಸರಗಳು ಮುಂದುವರೆಯಲು ಸೃಷ್ಟಿ ರಚನೆ ಹೀಗೆ  ಕೆಲವು ಕೋಟಿ ವರ್ಷಗಳು ಸೃಷ್ಟಿ ರಚನೆ ಹೀಗೆ ಸಾಗುತ್ತಿದೆ. ಸೃಷ್ಟಿ ಮುಂದುವರೆಯಬೇಕಾದರೆ, ಎಲ್ಲವೂ ಇರಬೇಕು. ಎಲ್ಲವುಗಳ ಅಗತ್ಯತೆ ಇದೆ. ಯಾವುದು ಇಲ್ಲದಿದ್ದರೂ, ಕೊರತೆಯೇ! ನೋಡಿ ಆ ಸೃಷ್ಟಿಕರ್ತ ತನ್ನ ಅಪಾರವಾದ ಮೇದಸ್ಸಿನೊಂದಿಗೆ ಎಂತಹ ದೊಡ್ಡ ಸೃಷ್ಟಿ ಮಾಡಿದ್ದಾನೆಂದು ಗಮನಿಸಿದರೆ ಆಶ್ಚರ್ಯವಾಗುತ್ತದೆ.

ಆ ಭಗವಂತ, ಆ ಸೃಷ್ಟಿಕರ್ತನ ಮೇದಸ್ಸು ಎಷ್ಟು ಉನ್ನತವಾದದ್ದು ಎಂದು ವಿವರಿಸಲು ಪುರಾಣಗಳಲ್ಲಿ ಒಂದು ಕಥೆ ಹೇಳುತ್ತಾರೆ.

ಒಬ್ಬನು ಬಿಸಿಲಿನಲ್ಲಿ ಪ್ರಯಾಣಿಸುತ್ತಾ ಆಯಾಸಗೊಂಡನು. ಬಿಸಿಲಿನ ತೀವ್ರತೆಗೆ ತುಂಬಾ ದಣಿದನು. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು ಮತ್ತೆ ಪ್ರಯಾಣಿಸಬಹುದು ಎಂದುಕೊಂಡು ಒಂದು ಆಲದ ಮರದ ಕೆಳಗೆ ಮಲಗಿಕೊಂಡನು.

ಹಾಗೆ ಮಲಗಿಕೊಂಡು ಪಕ್ಕದಲ್ಲಿ ನೋಡಿದಾಗ ಆಲದ ಮರದ ಬೀಜಗಳು ಕಂಡವು. ಆಗ ಅವನು  ಭಗವಂತನಿಗೆ ಬುದ್ಧಿಯಿಲ್ಲ. ಆಲದ ಮರಕ್ಕೆ ಮರಕ್ಕೆ ಎಷ್ಟು ಚಿಕ್ಕ ಚಿಕ್ಕ ಕಾಯಿಗಳನ್ನು ನೀಡಿದ್ದಾನೆ. ನೆಲದಲ್ಲಿ ಹರಡಿಕೊಳ್ಳುವ ಕುಂಬಳಕಾಯಿ ಬಳ್ಳಿಗೆ ದೊಡ್ಡ ದೊಡ್ಡ ಕಾಯಿಗಳನ್ನು ನೀಡಿದ್ದಾನೆ ಎನ್ನುತ್ತಾ, ಇವನೇನೋ ತುಂಬಾ ಬುದ್ಧಿವಂತನಂತೆ... ಭಗವಂತನು ಬುದ್ಧಿಹೀನನಂತೆ ಭಾವಿಸಿ, ಹಾಗೆ ಆಲೋಚಿಸುತ್ತಾ ನಿದ್ರಿಸಿದನು.

ನಿದ್ರೆ ಮಾಡಿ, ಮೂರು ಗಂಟೆಗಳ ನಂತರ ಎಚ್ಚರವಾಗಿ, ಎದ್ದು ನೋಡುವ ಹೊತ್ತಿಗೆ ಶರೀರದ ಮೇಲೆ ಕೆಲವು ಆಲದ ಕಾಯಿಗಳು ಬಿದ್ದಿದ್ದವು. ಆಗ ಅವನು ಆಶ್ಚರ್ಯ

ಚಕಿತನಾಗಿ, ನಾನು ಭಗವಂತನ ನಿರ್ಣಯ ತಪ್ಪು ಎಂದುಕೊಂಡೆನು. ಆ ದೊಡ್ಡ ವೃಕ್ಷಕ್ಕೆ ಕುಂಬಳಕಾಯಿಯಂತಹ ದೊಡ್ಡ ಕಾಯಿಗಳು ಇದ್ದಿದ್ದರೆ, ನಾನು ಏನಾಗುತ್ತಿದ್ದೆನೋ..!? ಖಂಡಿತ ಇಷ್ಟು ಹೊತ್ತಿಗೆ ಸಾಯುತ್ತಿದ್ದೆ. ಭಗವಂತ ಏನು ಮಾಡಿದರೂ, ಎಲ್ಲಾ ಆಲೋಚಿಸಿ ಮಾಡುತ್ತಾನೆ. ಆತ ಮಾಡುವ ಕೆಲಸಗಳು ಅರ್ಥಮಾಡಿಕೊಳ್ಳುವ ಶಕ್ತಿ–ಬುದ್ಧಿ ನಮಗೆ ಇಲ್ಲ ಎಂದುಕೊಂಡನು.

ಆದ್ದರಿಂದ ಭಗವಂತ ಮಾಡಿದ ಏರ್ಪಾಡುಗಳಲ್ಲಿ ಯಾವ ತಪ್ಪು ಇಲ್ಲ. ಈ ಸೃಷ್ಟಿ ಮುಂದುವರೆಯಬೇಕೆಂದರೆ, ಯಾವ ಜೀವಿಗೆ ಯಾವ ಲಕ್ಷಣ ಇರಬೇಕೋ, ಆ ಲಕ್ಷಣಗಳೆಲ್ಲವನ್ನು ಏರ್ಪಾಟು ಮಾಡಿದ್ದಾನೆ. ಆದ್ದರಿಂದ ಸ್ತ್ರೀಗೆ ಎಂತಹ ಲಕ್ಷಣಗಳಿರಬೇಕು, ಅಂತಹ ಲಕ್ಷಣಗಳನ್ನು ಕೊಟ್ಟಿದ್ದಾನೆ. ಪುರುಷನಿಗೆ ಎಂತಹ ಆಕಾರವಿರಬೇಕು ಅಂತಹ ಆಕಾರವನ್ನು ಪುರುಷನಿಗೆ ನೀಡಲಾಗಿದೆ.

ನೀವು ಗಮನಿಸಿದರೆ, ಯಾವ ಜೀವಿಯಾದರೂ ಸಂಭೋಗಿಸಬೇಕೆಂದರೆ, ಸ್ತ್ರೀ ಜೀವಿ ಕೆಳಗೆ ಇರುತ್ತದೆ. ಪುರುಷ ಜೀವಿ ಮೇಲೆ ಇರುತ್ತದೆ.ಅಷ್ಟೇ ಹೊರತು  ಬದಲಾದರೆ ಸೃಷ್ಟಿ ಕಾರ್ಯ ನಡೆಯುವುದಿಲ್ಲ. ಸೃಷ್ಟಿ ನಿಂತುಹೋಗುತ್ತದೆ.

ಅಷ್ಟೇ ಅಲ್ಲ ಆ ಗಂಡು ಪ್ರಾಣಿ ಬಲಿಷ್ಠವಾಗಿರುತ್ತದೆ. ಆದ್ದರಿಂದ ಹೆಣ್ಣು ಪ್ರಾಣಿಯನ್ನು ಅಧೀನದಲ್ಲಿಟ್ಟುಕೊಂಡು ಅದರೊಂದಿಗೆ ಸಂಭೋಗಿಸುತ್ತದೆ. ಇಲ್ಲದಿದ್ದರೆ ಆ ರತಿ ಕಾರ್ಯವು ಸಾಧ್ಯವಾಗುವುದಿಲ್ಲ. ಯಾವ ಹೆಣ್ಣು ಪ್ರಾಣಿಯಾದರೂ, ಆ ರತಿ ಕಾರ್ಯಕ್ಕೆ ಸಿದ್ಧವಾಗಿರಬೇಕು.. ಹಾಗೆ ಸಿದ್ಧವಾಗಿರುವ ಪ್ರಾಣಿಯನ್ನು ಬೆದೆಗೆ ಬಂದಿದೆ ಎನ್ನುತ್ತಾರೆ, ಗಂಡು ಪ್ರಾಣಿಯ ಸಂಪರ್ಕಕ್ಕೆ ಸಿದ್ಧವಾಗಿದೆ ಎಂದು ಅರ್ಥ. ಆಗ ಗಂಡು ಪ್ರಾಣಿಯ ಬಳಿಗೆ ಕರೆದುಕೊಂಡು ಹೋಗಿ ಸಂಭೋಗ ಕ್ರಿಯೆ ಮಾಡಿಸುತ್ತಾರೆ. ಆ ನಂತರವೇ ಅದು ಗರ್ಭ ಧರಿಸುತ್ತದೆ.

ಗರ್ಭ ಧರಿಸಿದ ನಂತರ ಆರು ಮಾಸಗಳಿಗೆ ಮತ್ತೆ ಬೆದೆಗೆ ಬರುತ್ತದೆ ಅಂದರೆ, ಸಂಭೋಗಕ್ಕೆ ಸಿದ್ಧವಾಗುತ್ತದೆ. ಒಮ್ಮೆ ಸಂಭೋಗ ಮಾಡಿದ ನಂತರ ಅದು ಮತ್ತೆ ಬಯಸುವುದಿಲ್ಲ, ಕೋರುವುದಿಲ್ಲ. ಹಾಗೆ ಇದ್ದು ಹೋಗುತ್ತದೆ. ಕೆಲವು ಪ್ರಾಣಿಗಳು ವರ್ಷಗಳ ಕಾಲ ಇರುತ್ತವೆ. ಆದರೆ ಮಾನವರಲ್ಲಿ, ತಿಂಗಳಿಗೆ ಒಮ್ಮೆ ಸ್ತ್ರೀಯರಲ್ಲಿ ನಡೆಯುವ ಕ್ರಿಯೆಯನ್ನು ಋತು ಸಮಯ ಎನ್ನುತ್ತಾರೆ.

ನನಗೆ ಒಂದು ಸಂದೇಹವಿತ್ತು ಮಾನವರು ಪ್ರತಿ ದಿನ ಸಂಭೋಗವನ್ನು ಬಯಸುತ್ತಾರೆ, ಆದರೆ ಪ್ರಾಣಿಗಳಿಗೆ ಆರು ಮಾಸಗಳಿಗೆ ಅಥವಾ ಒಂದು ವರ್ಷಕ್ಕೆ ಒಮ್ಮೆ ಮಾತ್ರ ಆ ಸುಖವನ್ನು ಹೊಂದುವ ಏರ್ಪಾಡು ಮಾಡಿದ್ದಾನಲ್ಲ ಭಗವಂತ ಎಂದು ಒಂದು

ಸಂದೇಹವಿತ್ತು. ಆದರೆ ಆಲೋಚಿಸಿದರೆ, ಯಾವುದಕ್ಕೆ ಹೇಗೆ ಇರಬೇಕೋ, ಹಾಗೆ ಅವುಗಳಿಗೆ ಏರ್ಪಾಡು ಮಾಡಿದ್ದಾನೆ ಎಂದು ಅರ್ಥವಾಯಿತು.

ಆದ್ದರಿಂದ ಭಗವಂತನು ಏನು ಮಾಡಿದರೂ, ಅದಕ್ಕೆ ಒಂದು ಕಾರಣ ಇರುತ್ತದೆ. ಕಾರಣವಿಲ್ಲದೆ ಏನು ನಡೆಯುವುದಿಲ್ಲ. ನೋಡಿ ಕೋಳಿಗಳು ಕುರಿಗಳನ್ನು ಗಮನಿಸಿದರೆ, 10 ಕುರಿಗಳಿಗೆ ಒಂದು ಟಗರನ್ನು ಸಾಕುತ್ತಾರೆ. ಹಾಗೆಯೇ 10 ಕೋಳಿಗಳಿಗೆ ಒಂದು ಹುಂಜವನ್ನು ಸಾಕುತ್ತಾರೆ.

ಅಷ್ಟೇ ಅಲ್ಲ 10ಕ್ಕೆ 10 ಇದ್ದರೆ ಹೆಣ್ಣು ಪಕ್ಷಿಗಳಾದರೆ, ಹೆಣ್ಣು ಪ್ರಾಣಿಗಳಾಗಲಿ ಸಾಯುತ್ತವೆ. ಎಲ್ಲವೂ ಅದರ ಮೇಲೆ ಬಿದ್ದರೆ ಅವು ತಡೆದುಕೊಳ್ಳುವುದಿಲ್ಲ. ಇವೆಲ್ಲ ಭಗವಂತನು ಆಲೋಚಿಸಿ ಮಾಡಿರುವುದೇ, ಇವೆಲ್ಲವನ್ನೂ ಗಮನಿಸುವುದರ ಮೂಲಕ ಪ್ರಕೃತಿಯಲ್ಲಿ ನಾವು ಎಷ್ಟೋ ಕಲಿಯುತ್ತೇವೆ.

ಆದ್ದರಿಂದ ಭಗವಂತನ ಸೃಷ್ಟಿಯಲ್ಲಿ ಕಲಿಯುವುದು ಎಷ್ಟೋ ಇದೆ. ನನಗೆ ಚಿಕ್ಕಂದಿನಲ್ಲಿ ಕಂಬಳಿ ಹುಳುಗಳನ್ನು ನೋಡಿದರೆ ತುಂಬಾ ಅಸಹ್ಯ ಎನಿಸುತ್ತಿತ್ತು. ಭಗವಂತ ಏಕೆ ಇವುಗಳನ್ನು ಸೃಷ್ಟಿಸಿದ ಆ ಕಂಬಳಿ ಹುಳುಗಳು ಎಲೆಗಳನ್ನು ಬೆಳಗಿನ ಹೊತ್ತಿಗೆ ತಿಂದು ಹಾಕುತ್ತವೆ ಎಂದುಕೊಳ್ಳುತ್ತಿದ್ದೆನು. ಒಂದು ಹಳ್ಳ ತೆಗೆದು ಅವುಗಳನ್ನು ಅದರಲ್ಲಿ ಹಾಕಿ ಹೂತು ಹಾಕುತ್ತಿದ್ದೆನು. ಆದರೆ ಧ್ಯಾನಕ್ಕೆ ಬಂದ ನಂತರ, ಅವು ಎಷ್ಟು ನಾಶ ಮಾಡಿದರೂ, ಆನಂತರ ಗೂಡು ಕಟ್ಟಿ ಒಂದು ಚಿಟ್ಟೆಯಂತೆ ಹೊರಗೆ ಬರುತ್ತದೆ ಎಂದು ಅರ್ಥವಾಯಿತು.

ಅಷ್ಟು ಅಸಹ್ಯ ಎನಿಸುವ ಆ ಹುಳು ಚಿಟ್ಟೆಯಂತೆ ಎಷ್ಟು ಆಕರ್ಷಿತವಾಗಿ ಬದಲಾಗುತ್ತದೆ, ಆ ಕಂಬಳಿ ಹುಳದಿಂದ ಏನು ಉಪಯೋಗವಿಲ್ಲವೇ? ಎಂದು ಆಲೋಚಿಸಿದರೆ, ಎಂದು ಅರ್ಥವಾಗಿದ್ದು ಆ ಹುಳು ಚಿಟ್ಟೆಯಾಗಿ, ಹೂಗಳ ಮೇಲೆ ಕುಳಿತು ಪರಾಗ ಸ್ಪರ್ಶ ಮಾಡುತ್ತದೆ ಅಂದರೆ ಆ ಗಂಡು ಹೂಗಳ ಮೇಲೆ ಇರುವ ಪರಾಗವನ್ನು ಹೆಣ್ಣು ಹೂಗಳ ಶಲಾಖೆಯ ಮೇಲೆ ಅಂಟಿಸಿ ಫಲಧೀಕರಣಕ್ಕೆ ಸಹಾಯ ಮಾಡುತ್ತದೆ. ಅದರಿಂದ ಹೂಗಳು, ಕಾಯಿಗಳು, ಹಣ್ಣುಗಳು ಬರುತ್ತವೆ ಬೆಳೆಗಳು ಬೆಳೆಯುತ್ತಿವೆ, ಅವುಗಳನ್ನು ತಿನ್ನುವ ಮಾನವರು ಜೀವಿಸುತ್ತಿದ್ದಾರೆ. ಆ ಕಂಬಳಿ ಹುಳುಗಳು ಇಲ್ಲದಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಬೆಳೆಗಳು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಮಾನವನ ಜೀವನಕ್ಕೆ ಸಹಾಯಕವಾಗುತ್ತಿರಲಿಲ್ಲ.

ಆದ್ದರಿಂದ ವೃಕ್ಷಗಳಲ್ಲಿ ಕೂಡ ಸ್ತ್ರೀ ಪುರುಷ ಬೇಧವೂ, ನಮಗೆ ಕಾಣಿಸುತ್ತದೆ. ತೆಂಗಿನ ಮರದಿಂದ ಒಂದೇ ಮರ ಆಗುತ್ತದೆ. ತಾಳೆ ಮರದಲ್ಲಿ ಹೆಣ್ಣು, ಗಂಡು ಎಂದು ಎರಡು ವಿಧವಾಗಿರುತ್ತದೆ. ಹೆಣ್ಣು ತಾಳೆ ಗಿಡಕ್ಕೆ ತಾಳೆ ಹಣ್ಣುಗಳು ಆಗುತ್ತದೆ. ಗಂಡು ಗಿಡಕ್ಕೆ ಹಣ್ಣುಗಳು ಇರುವುದಿಲ್ಲ. ಬರೀ ಹೂಗಳು ಆಗುತ್ತದೆ.

ಹೀಗೆ ವೃಕ್ಷ ಜಾತಿಯನ್ನು, ಪ್ರಾಣಿ ಜಾತಿಯನ್ನು, ಪ್ರತಿಯೊಂದನ್ನು ಗಮನಿಸಿದರೆ, ಸೃಷ್ಟಿ ಎಷ್ಟು ಉನ್ನತವಾದದ್ದು, ಎಷ್ಟು ಆಶ್ಚರ್ಯಕರವಾಗಿ ಇರುತ್ತದೆ ಎನ್ನುವುದು ನಮಗೆ ಅರ್ಥವಾಗುತ್ತದೆ. ಬುದ್ಧಿ ವಿಕಾಸವಾದಂತೆ ಎಷ್ಟೋ ಆಲೋಚನೆ ಮಾಡುತ್ತೇವೆ. ಅವುಗಳಿಂದ ಎಷ್ಟೋ ಕಲಿಯುತ್ತೇವೆ. ಇಲ್ಲದಿದ್ದರೆ ಖಾನ, ಪೀನಾ, ಸೋನಾ ಈ ಮೂರು ಇದ್ದರೆ ಸಾಕು ಅದಕ್ಕಾಗಿಯೇ ಜೀವನ ಎನ್ನುವಂತೆ ಇರುತ್ತೇವೆ.

ಬುದ್ಧಿ ಎಷ್ಟು ಹೆಚ್ಚಾದರೆ ನೀವು ಜೀವನದಲ್ಲಿ ಅಷ್ಟು ಹೆಚ್ಚಾಗಿ ಕಲಿಯುವಿರಿ. ಅನುಭವಗಳನ್ನು ಹೊಂದುವಿರಿ. ಅದಕ್ಕೆ ಬುದ್ಧಿ ಚೆನ್ನಾಗಿ ವಿಕಾಸವಾಗುವಂತೆ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಜೀವನ ಎನ್ನುವುದು ಸಂಸಾರ ಮಾಡಲು, ಮಕ್ಕಳನ್ನು ಹೆತ್ತು, ಅವರನ್ನು ಬೆಳೆಸಲು ಬಂದಿರುವುದಲ್ಲ. ಆ ಸೃಷ್ಟಿಯನ್ನು ನೋಡಿ ಎಷ್ಟೋ ಕಲಿತುಕೊಳ್ಳಲು.

ನಾವು ಕಲಿತು ಕೋ – ಕ್ರೀಯೇಟರ್ ಆದ ನಂತರ ಸೃಷ್ಟಿ ಮಾಡಲು, ಸೃಷ್ಟಿ ಕಾರ್ಯದಲ್ಲಿ ಭಾಗವಹಿಸಲು.

ಆತ್ಮರಾದ ನಾವು ಭೂಮಿಯ ಮೇಲೆ ಬಂದಿದ್ದು, ಎಷ್ಟೋ ಜ್ಞಾನವನ್ನು ಹೆಚ್ಚಿಸಿಕೊಳ್ಳಲು. ದೈವಸ್ಥಿತಿ ಹೊಂದಬೇಕೆಂದರೆ, ಎಲ್ಲಾ ಲಕ್ಷಣಗಳು ಇರಬೇಕಲ್ಲವೇ!? ಪೂರ್ಣತ್ವ ಹೊಂದಬೇಕಲ್ಲವೇ? ಅದಕ್ಕೆ ಎಷ್ಟೋ ಆಲೋಚಿಸಬೇಕು. ಆಗ ಮಾತ್ರ ಕಲಿಯುತ್ತೇವೆ. ಅದಕ್ಕೆ ನಡೆಯುತ್ತಿರುವ ಪ್ರತಿ ವಿಷಯದ ಮೇಲೆ ಸಂದೇಹಗಳು ಬರಬೇಕು. ನಿಮಗೆ ಸಂದೇಹ ಬಂದರೆ ಅದಕ್ಕೆ ಉತ್ತರ ದೊರೆಯುತ್ತದೆ. ಉತ್ತರ ದೊರೆತರೆ, ನೀವು ಕಲಿಯಬಲ್ಲಿರಿ.

ಆ ಸ್ಥಿತಿಯಲ್ಲಿರುವ ಹಿರಿಯರು ನಮಗೆ ಅರ್ಥವಾಗುವ ರೀತಿಯಲ್ಲಿ ಎಷ್ಟೋ ಕಥೆಗಳನ್ನು ಬರೆದಿದ್ದಾರೆ. ನಾವು ಕೂಡ ಮುಂದೆ ನಾವು ಹಿರಿಯರೇ ಆಗುತ್ತೇವೆ ತಾನೇ!? ನಮ್ಮ ನಂತರದ ಪೀಳಿಗೆಯವರು ನಮ್ಮನ್ನು ಉದಾಹರಣೆಯಾಗಿ ಹೇಳಿಕೊಳ್ಳುತ್ತಾರೆ. ಹಾಗೆ ಹೇಳಿಕೊಳ್ಳಬೇಕು ಕೂಡಾ. ಯಾವಾಗಲೋ ಬಂದ ವೇಮನನ ಕುರಿತು, ವೀರ ಬ್ರಹ್ಮೇಂದ್ರ ಸ್ವಾಮಿಯನ್ನು ಕುರಿತು ನಾವು ಹೇಳಿಕೊಳ್ಳುತ್ತಿದ್ದೇವಲ್ಲವೇ...? ಈಗ ಪತ್ರೀಜಿಯವರನ್ನು ಕುರಿತು ಹೇಳಿಕೊಳ್ಳುತ್ತಿದ್ದೇವೆ. ಇದು ಸೃಷ್ಟಿಯಲ್ಲಿ ಸಹಜ. ಯಾವಾಗಲೂ ಅವರೇ ಇರುವುದಿಲ್ಲ ಮತ್ತೆ ಹೊಸಬರು ಬರುತ್ತಾರೆ. ಸೃಷ್ಟಿಯಲ್ಲಿ ಬದಲಾವಣೆ ಸಹಜ. ಹಾಗೆ ಎಲ್ಲಾ ಬದಲಾಗುತ್ತದೆ, ಯಾವುದು ಶಾಶ್ವತವಾಗಿ ಇರುವುದಿಲ್ಲ.

ಹೊಸಬರಾದ ನಾವು ಕೂಡಾ ಆ ವಿಧವಾದ ಸ್ಥಿತಿಗೆ ಹೋಗಬೇಕು. ಅದಕ್ಕಾಗಿ ಈ ಜನ್ಮ... ಆದ್ದರಿಂದ ಕಡ್ಡಾಯವಾಗಿ ಅರ್ಥಮಾಡಿಕೊಳ್ಳಿ. ಉಪಕ್ರಮ ಎನ್ನುವುದು ಪುರುಷ

ಜನ್ಮದಲ್ಲಿ ಕಲಿತುಕೊಳ್ಳುವ ಒಂದು ದೊಡ್ಡ ಲಕ್ಷಣ.. ಅದು ಯಾವ ಜಾತಿಯಲ್ಲಾದರೂ ಇರುತ್ತದೆ. ಜಗಳಗಳಿಗೆ ಹೋದರೂ, ಮುಂದಾಳತ್ವ ಇರಬೇಕು. ಸಂಭೋಗಕ್ಕಾದರೂ ಉಪಕ್ರಮವಿರಬೇಕು. ಕತ್ತಲೆಯಲಿದ್ದರೂ ಧೈರ್ಯವಾಗಿ ಮುನ್ನುಗ್ಗಬೇಕು ಇದು ಪುರುಷ ಲಕ್ಷಣ.

## 4. ವೀರತ್ವ

ಯಾವ ವಿಧವಾದ ಜನ್ಮಗಳಲ್ಲಿ ಕಲಿತರೂ, ಅದು ಆತ್ಮವೇ ಕಲಿಯುತ್ತದೆ. ಆತ್ಮವೇ ಎಲ್ಲ ವಿಧವಾದ ಅನುಭವಗಳನ್ನು ಹೊಂದಬೇಕು. ಆದ್ದರಿಂದ ಸ್ತ್ರೀ ಜನ್ಮದಲ್ಲಿ ಕಲಿಯುವುದು ಎನ್ನುವುದಕ್ಕಿಂತ, ಸ್ತ್ರೀ ಶರೀರದೊಂದಿಗೆ ಆತ್ಮ ಕೆಲವು ಕಲಿತುಕೊಳ್ಳುತ್ತಾ ಇರುತ್ತದೆ. ಪುರುಷ ಶರೀರದೊಂದಿಗೆ ಆತ್ಮ ಕೆಲವು ಅನುಭವಗಳನ್ನು ಪಡೆಯುತ್ತದೆ. ಹಾಗೆ ಕಲಿತುಕೊಳ್ಳಲು ಅನುಕೂಲವಾದ ಶರೀರವನ್ನು ತೆಗೆದುಕೊಳ್ಳುತ್ತದೆ.

ಸ್ತ್ರೀ ಶರೀರ ತುಂಬಾ ಕೋಮಲವಾಗಿ ಇರುತ್ತದೆ. ಒಂದು ವಿಧವಾಗಿ ಹೇಳಬೇಕೆಂದರೆ ಬಲಹೀನವಾಗಿ ಇರುತ್ತದೆ. ಪುರುಷನು ಎತ್ತಿದಷ್ಟು ಭಾರವನ್ನು ಸ್ತ್ರೀ ಎತ್ತಲಾರಳು.

ಪುರುಷನ ಶರೀರ ತುಂಬಾ ಸದೃಢವಾಗಿ ಬಲಿಷ್ಠವಾಗಿ ಇರುತ್ತದೆ. ಆಕಾರವು ಕೂಡ ದೊಡ್ಡದಾಗಿರುತ್ತದೆ ಒಂದೇ ತಂದೆ ತಾಯಿಗೆ ಹುಟ್ಟಿದ ಮಕ್ಕಳಾದರೂ... ಹೆಣ್ಣು ಮಗು ಕೋಮಲೆಯಾಗಿ, ಗಂಡು ಮಗುವು ದೊಡ್ಡವನಾಗುತ್ತಾ ಸದೃಢವಾಗಿ ತಯಾರಾಗುತ್ತಾನೆ. ನೀವು ಇನ್ನೂ ಗಮನಿಸಿದರೆ, ಸ್ತ್ರೀ ಎಷ್ಟು ಎಕ್ಸರ್ಸೈಜ್‌ಗಳು ಮಾಡಿದರೂ, ಎಷ್ಟು ವೆಯಿಟ್ ಲಿಫ್ಟಿಂಗ್ ಮಾಡಿದರೂ, ಎಷ್ಟು ತಿಂದರೂ ಮಾಂಸ ಖಂಡಗಳು ಬರುವುದಿಲ್ಲ. ಪುರುಷನಿಗೆ ಬರುತ್ತದೆ ಅದಕ್ಕೆ ಪುರುಷರು ಅಷ್ಟು ದೃಢವಾಗಿ ಇರುತ್ತಾರೆ.

"ವೀರತ್ವ" ಎನ್ನುವ ಲಕ್ಷಣ ಪುರುಷ ಶರೀರದೊಂದಿಗೆ ಕಲಿಯುತ್ತಾರೆ. ಯಾರನ್ನು ವೀರ ಎನ್ನುತ್ತಾರೆ? ಎಂದರೆ, ಪ್ರಾಣವನ್ನು ಲೆಕ್ಕಿಸದೆ, ಎಲ್ಲದಕ್ಕೂ ಸಿದ್ಧವಾಗಿ ಹೋರಾಡುವವನನ್ನು ವೀರ ಎನ್ನುತ್ತಾರೆ. ವೀರನು 'ತಾನು ಅಂದುಕೊಂಡಿದ್ದು ಸಾಧಿಸಬೇಕು, ವಿಜಯ ಸಾಧಿಸಬೇಕು' ಎನ್ನುವ ಭಾವದೊಂದಿಗೆ ಇರುತ್ತಾನೆ. ಆದ್ದರಿಂದ ಹಿಂದಿನ ಕಾಲಗಳಿಂದಲೂ ನೋಡಿದರೆ ಯುದ್ಧದಲ್ಲಿ ಬಲಿಷ್ಠವಾದ ಪುರುಷರೇ ಪಾಲ್ಗೊಳ್ಳುತ್ತಿದ್ದರು. ಯಾರಿಗಾದರೂ ಏನಾದರೂ ಮಾಡಬೇಕೆಂದರೆ ಬಲವಾದ ಶರೀರ ಹೊಂದಿರಬೇಕು. ಆದರೆ ಸ್ತ್ರೀಯರನ್ನು ಹೆಚ್ಚು ಬಲದ ಅವಶ್ಯಕತೆಯಿಲ್ಲದ ಕೆಲಸಗಳಲ್ಲಿ ಇರಿಸುತ್ತಾರೆ.

ಯುದ್ಧಗಳಲ್ಲಿ ಹೋರಾಡುವವರನ್ನು ವೀರ ಎನ್ನುತ್ತಾರೆ. ಪ್ರಾಣ ಹೋಗುತ್ತದೆ ಎಂದು ಭಯಪಟ್ಟು ಓಡಿ ಹೋಗುವವನನ್ನು ಅಂಜುಬುರುಕ ಎನ್ನುತ್ತಾರೆ. ಒಂದು

ವಿಧವಾಗಿ ಜೀವನ ಒಂದು ಯುದ್ಧವೇ. ಬೇರೆ ದೇಶ ರಾಜ್ಯದ ಮೇಲೆ ಮಾಡುವ ಯುದ್ಧದಲ್ಲಿಯೇ ಅಲ್ಲದೇ, ಜೀವನ ಯುದ್ಧದಲ್ಲಿ ಹೋರಾಡುವವನು ಕೂಡಾ ವೀರನೆ. ಎಂತಹ ಪರಿಸ್ಥಿತಿಯಲ್ಲೂ, ಎಷ್ಟು ವಿಧದ ಕಷ್ಟಗಳು ಎದುರಾದರೂ, ಹಿಂದೇಟು ಹಾಕಬಾರದು. ಯಾವುದಕ್ಕೂ ಭಯಪಡಬಾರದು. ಹೇಡಿಯಂತೆ ಆತ್ಮಹತ್ಯೆಗಳು ಮಾಡಿಕೊಳ್ಳಬಾರದು. ಮಾಡಿಕೊಂಡರೆ ಅವರಲ್ಲಿ ವೀರತ್ವ ಇಲ್ಲ ಎಂದು ಅರ್ಥ.

ಕೆಲವರು, ಕೆಲವು ಕಷ್ಟಗಳು ಬರುವ ಹೊತ್ತಿಗೆ ಹೆದರಿ ಗಡಗಡನೆ ಕಂಪಿಸುತ್ತಾರೆ. ಇಂತಹ ಜೀವನ ಏಕೆ? ಬದುಕಿರುವುದಕ್ಕಿಂತ ಸತ್ತರೆ ಮೇಲು! ಎಂದುಕೊಳ್ಳುತ್ತಾರೆ. ಇಂತಹವರನ್ನು ವೀರರು ಎನ್ನುವುದಿಲ್ಲ. ವೀರತ್ವ ಇರುವವರು ಜೀವನ ಸಮರದಲ್ಲಿಯೂ, ಕೊನೆಯವರೆಗೆ ಎಷ್ಟು ಕಷ್ಟಗಳು ಬಂದರೂ ಎದುರಿಸುತ್ತಾನೆ. ಅದರಲ್ಲಿ ಅನುಭವ ಸಂಪಾದಿಸುತ್ತಾನೆ. ಅವನಿಗೆ ಸ್ವಲ್ಪ ಜ್ಞಾನ ಇದ್ದರೆ, 'ಇವೆಲ್ಲ ನಾನು ತಂದುಕೊಂಡಿರುವುದೇ... ಬೇಕೆಂದು ನಾನು ಆಯ್ಕೆ ಮಾಡಿರುವುದು ಇವುಗಳಿಗೆ ನಾನು ಭಯಪಡಬಾರದು ಓಡಿ ಹೋಗಬಾರದು' ಎಂದು ಅವುಗಳನ್ನು ಎದುರಿಸುತ್ತಾನೆ.

ಯಾರು ಈ ಸಮಸ್ಯೆಗಳನ್ನು ಎದುರಿಸಲಾರದೆ ಹೇಡಿಗಳಂತೆ ಆತ್ಮಹತ್ಯೆ ಮಾಡಿಕೊಳ್ಳುವರೋ ಅಂತಹವರಿಗೆ ವೀರತ್ವ ಎನ್ನುವ ಪಾಠ ಕಲಿಸಲು ಪ್ರಕೃತಿ ಇನ್ನೂ ಧಾರುಣವಾದ, ಕಷ್ಟವುಳ್ಳ ಜನ್ಮವನ್ನು ಕೊಡುತ್ತದೆ. ಅನುಭವಿಸುತ್ತೇನೆಂದು, ಎಲ್ಲವನ್ನು ಸಹಿಸುವೆ ಎಂದು ಆಯ್ಕೆ ಮಾಡಿಕೊಂಡು ಬಂದು ಈಗ ಓಡಿ ಹೋಗೋಣವೆಂದು ನೋಡಿದರೆ ಮಾತು ತಪ್ಪಿದರೆ ಮತ್ತೆ ಅದೇ ಪರಿಸ್ಥಿತಿಗಳಲ್ಲಿ ಜನ್ಮ ತೆಗೆದುಕೊಳ್ಳುತ್ತಾರೆ. ಅಂದರೆ ಆರ್ಥಿಕ ಸಮಸ್ಯೆಗಳೊಂದಿಗೆ, ಆತ್ಮಹತ್ಯೆಗಳು ಮಾಡಿಕೊಂಡವರಿಗೆ ಮತ್ತೆ ಅದೇ ಆರ್ಥಿಕ ಸಮಸ್ಯೆಗಳೊಂದಿಗೆ ಕೂಡಿದ ಜನ್ಮ ಬರುತ್ತದೆ.

ಮಾಮೂಲಿಯಾಗಿ ಆದರೆ ಜನ್ಮಗಳು ಕೂಡಲೇ ಬರುವುದೋ, ಇಲ್ಲವೋ... ಆದರೆ ಆತ್ಮಹತ್ಯೆಗಳನ್ನು ಮಾಡಿಕೊಂಡವರು ಮಾತ್ರ, ಕೂಡಲೇ ಭೂಮಿ ಮೇಲೆ ಬರುತ್ತಾರೆ. ಏಕೆಂದರೆ ಅವರು ಆ ಪಾಠ ಕಲಿಯುವ ಆಟವನ್ನು ಸಂಪೂರ್ಣಗೊಳಿಸಿಲ್ಲ. ಅದನ್ನು ಸಂಪೂರ್ಣಗೊಳಿಸಬೇಕೆಂದರೆ, ಅದೇ ವಿಧವಾದ ಸಮಸ್ಯೆಗಳೊಂದಿಗೆ ಮತ್ತೊಂದು ಕಡೆ ಹುಟ್ಟುತ್ತಾರೆ. ಮತ್ತೊಂದು ವಿಧವಾದ ಕುಟುಂಬಗಳಲ್ಲಿ ಹುಟ್ಟುತ್ತಾರೆ. ಆದರೆ ಸಮಸ್ಯೆ ಮಾತ್ರ ಅಂತಹುದೇ ಬರುತ್ತದೆ. ಅಥವಾ ಇನ್ನೂ ಸ್ವಲ್ಪ ಹೆಚ್ಚಾಗಿ ಬರುತ್ತದೆ, ಸಹಿಸಲೇಬೇಕು. ಎಂತಹ ಪರಿಸ್ಥಿತಿಗಳಲ್ಲೂ ಆತ್ಮಹತ್ಯೆ ಮಾಡಿಕೊಳ್ಳಬಾರದು ಎಂದು ಪತ್ರೀಜಿಯವರು ಎಷ್ಟೋ ಬಾರಿ ಹೇಳಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡರೆ ತಪ್ಪಿಸಿಕೊಂಡಂತೆ ಅಲ್ಲ, "ಹೆಂಚಿನ ಮೇಲಿನಿಂದ ಒಲೆಯೊಳಗೆ ರೊಟ್ಟಿ ಬಿದ್ದಂತೆ ಆಗುತ್ತದೆ" ಎಷ್ಟೋ ಜನರು ತಮ್ಮ ಜೀವನದಲ್ಲಿ

ಶಿಕ್ಷೆಯಾದರೆ ಲಂಚಗಳನ್ನು ಕೊಟ್ಟು ತಪ್ಪಿಸಿಕೊಳ್ಳಬಹುದು ಎಂದುಕೊಳ್ಳುತ್ತಾರೆ. ಆದರೆ ಆ ಕಾಣದ ಪ್ರಭುತ್ವದಲ್ಲಿ ಎಂತಹ ಪರಿಸ್ಥಿತಿಗಳಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಸಾಮಾನ್ಯವಾಗಿ ಜೈಲಿನಿಂದ ತಪ್ಪಿಸಿಕೊಂಡರೆ, ಹಿಡಿದು ತಂದು ಮತ್ತೆ ಜೈಲಿನಲ್ಲಿ ಹಾಕಿ ಇನ್ನು ಹೆಚ್ಚಾದ ಶಿಕ್ಷೆಯನ್ನು ಹಾಕುತ್ತಾರೆ. ಹೋಗಲು ಸಾಧ್ಯವಿಲ್ಲದ ರೀತಿ ಕತ್ತಲ ಕೋಣೆಯಲ್ಲಿ ಹಾಕಿ ಸರಪಳಿಗಳಿಂದ ಬಂಧಿಸುತ್ತಾರೆ. ಈ ಭೂಮಿ ಎನ್ನುವ ಜೈಲಿನಿಂದ ಶಿಕ್ಷೆ ಅನುಭವಿಸಿದಂತೆ ತಪ್ಪಿಸಿಕೊಳ್ಳಬೇಕೆಂದು ನೋಡಿದರೆ, ಅವನನ್ನು ಪ್ರಕೃತಿಯು ಓಡಿಹೋಗುವೆಯಾ ಮೂರ್ಖ ಎಂದು ಹೇಳಿ ಮತ್ತೆ ಕರೆದುಕೊಂಡು ಬಂದು ಧಾರುಣವಾದಂತಹ ಜನ್ಮವನ್ನು ಅವನಿಗೆ ನೀಡುತ್ತದೆ.

ಆದ್ದರಿಂದ ಎಂತಹ ಪರಿಸ್ಥಿತಿಗಳಲ್ಲೂ, ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು ಎನ್ನುತ್ತಾರೆ. ಕಷ್ಟಗಳು ಬಂದರೂ ಅವರು ಎದುರಿಸುವ ಶಕ್ತಿ ಧೈರ್ಯ ಬೇಕೆಂದರೆ, ಸಾಧನೆ ಮಾಡಬೇಕು. ಅದಕ್ಕೆ ಭೀಮವರಂ ಮೂರು ದಿನಗಳ ಕ್ಲಾಸಿಗೆ ಬಂದಂತಾದರೆ ಅವರಿಗೆ ಸಾಧನೆಯಲ್ಲಿ ದೃಡತ್ವ ಬರುತ್ತದೆ. ನೀವು ಕೆಲವು ತಿಂಗಳು ಕ್ರಮವಾಗಿ ಬಂದರೆ, ನಿಮಗೆ ತಿಳಿಯದಂತೆ ಎಷ್ಟೋ ಶಕ್ತಿ ಹೆಚ್ಚಿಸಿಕೊಳ್ಳುವಿರಿ. ಶಕ್ತಿ ಇದ್ದವರು ಮಾತ್ರ ಯಾವುದನ್ನೂ ಲೆಕ್ಕಿಸದಂತೆ ಎಲ್ಲವನ್ನು ಸಹಿಸುತ್ತಾರೆ. ಯಾರಿಗಾದರೂ ಕಷ್ಟಗಳು ಬರುತ್ತವೆ.. ಬರದಂತೆ ಇರಲು ಸಾಧ್ಯವಿಲ್ಲ. ಆದರೆ ಸಾಧನೆ ಮಾಡಿದವರಿಗೆ ಅದು ಕಷ್ಟ ಎನಿಸುವುದಿಲ್ಲ.

ಶಕ್ತಿ ಇಲ್ಲದಿದ್ದರೆ ವಿಲವಿಲನೇ ಒದ್ದಾಡುತ್ತಾರೆ. 'ಅಯ್ಯೋ ಜೀವನ ಹೀಗೆ ಆಯಿತು ಎಂದು ಕೊಳ್ಳುತ್ತಾರೆ. ನನ್ನಿಂದ ಸಾಧ್ಯವಿಲ್ಲ ಸಾಯುತ್ತೇನೆ.. ಭಗವಂತನು ನನಗೆ ಅನ್ಯಾಯ ಮಾಡಿದ್ದಾನೆ. ನಾನೇನು ತಪ್ಪು ಮಾಡಿದ್ದಕ್ಕೆ ಈ ಶಿಕ್ಷೆ ' ಎಂದು ಆಲೋಚಿಸುತ್ತಾ ಇರುತ್ತಾನೆ.

ಕಷ್ಟ ಬಂದಾಗ ಆತ್ಮಹತ್ಯೆ ಮಾಡಿಕೊಳ್ಳುವುದಲ್ಲ. ವೀರತ್ವವನ್ನು ಪ್ರದರ್ಶಿಸಬೇಕು. ಸತ್ಯವನ್ನು ಆಚರಿಸಲು ವೀರತ್ವ ಹೊಂದಿರಲೇ ಬೇಕು. ಸತ್ಯ ಆಚರಿಸುವುದು ಎಂದರೆ ಸಾಮಾನ್ಯವಾದ ವಿಷಯವಲ್ಲ. ಸತ್ಯವನ್ನು ಹೇಳಲು, ಮಾತನಾಡಲು, ಬೋಧಿಸಲು, ಆಚರಿಸಲು, ಸತ್ಯದಲ್ಲಿ ಜೀವಿಸಲು, ಸತ್ಯವನ್ನು ಸ್ಥಾಪಿಸಲು ಭಯಪಡಬಾರದು. ಓಡಿ ಹೋಗಬಾರದು. ವೀರನಂತೆ ನಿಲ್ಲಬೇಕು. ಎಷ್ಟೋ ವಿಮರ್ಶೆಗಳು ಬರುತ್ತವೆ ಎಷ್ಟು ವಿಮರ್ಶಿಸಿದರು ಕಂಗಾಲಾಗಬಾರದು.

ನಾವು ಗಮನಿಸಿದರೆ, ಪತ್ರೀಜಿಯವರು ಲೋಕದಲ್ಲಿ ಆಚರಿಸುವುದಕ್ಕಿಂತ, ವಿರುದ್ಧವಾದದ್ದನ್ನೇ ಹೇಳುತ್ತಿದ್ದರು. ತುಂಬಾ ಜನರು ಅವರನ್ನು ವಿಮರ್ಶಿಸುತ್ತಿದ್ದರು. ಆದರೂ ಅವರೇನು ತಮ್ಮ ತತ್ವದಿಂದ ಹಿಂದೆ ಸರಿಯಲಿಲ್ಲ. ಈತನಿಗೆ ಎಷ್ಟು ಧೈರ್ಯ ಎಂದುಕೊಳ್ಳುತ್ತಿದ್ದೆನು. ಅವರು ಎಂತಹ ಸಭೆಯಲ್ಲಾದರೂ, ಎಂತಹವರು ಇದ್ದರೂ, ಇದ್ದದ್ದನ್ನು ಇರುವಂತೆ ಹೇಳುತ್ತಿದ್ದರು.

ಪತ್ರೀಜಿಯವರು ವಿಗ್ರಹ ದೇವರಲ್ಲ ಎನ್ನುತ್ತಿದ್ದರು. ಹೀಗೆ ಹೇಳಲು ಎಂತಹ ಧೈರ್ಯವಿರಬೇಕು!? ಇದರಿಂದ ಎಷ್ಟೋ ಕಡೆ ಗಲಾಟೆಗಳು ನಡೆಯಿತು. ಆದರೆ ಅವರು ಮಾತ್ರ ವೀರನಂತೆ ನಿಂತರು. ಸತ್ಯ ಹೇಳಿ ಅದರಿಂದ ಬರುವ ಗೊಡವೆ ನನಗೇಕೆ ಎಂದು ಓಡಿ ಹೋಗಲಿಲ್ಲ. ಆತ ಇರುವವರೆಗೂ, ಸತ್ಯವನ್ನೇ ನಿರ್ಭಯವಾಗಿ ಹೇಳುತ್ತಾ ಇದ್ದರು. ವೀರತ್ವ ಎಂದರೆ ಅದೇ...

ಪತ್ರೀಜಿಯವರು ಮಾಂಸ ತಿನ್ನಬಾರದು ಎಂದು ಹೇಳಿದರು. ಆದರೆ ಎಲ್ಲರೂ ಮಾಂಸ ತಿನ್ನುವವರೇ ಎಷ್ಟೋ ಜನ ಅವರ ಮಾತಿಗೆ ತಿರುಗಿ ಬಿದ್ದರು. "ಏನು ಯಾರು ತಿನ್ನುತ್ತಿಲ್ಲವೇ? ಮಾಂಸದ ಅಂಗಡಿಯವರು, ಕುರಿ ಮೇಕೆಯನ್ನು ಸಾಕುವವರು ಏನಾಗಬೇಕು? ಇವರು ಏಕೆ ಹೀಗೆ ಹೇಳುತ್ತಿದ್ದಾರೆ? ಎಂದು ವಿಮರ್ಶಿಸುತ್ತಿದ್ದರು. ಆದರೂ ಸರಿ ಸತ್ಯವನ್ನು ಹೇಳಲು ಆತ ಧೃತಿಗೆಡಲಿಲ್ಲ. ಹಿಂದೇಟು ಹಾಕಲಿಲ್ಲ.

ನಾನು ಒಂದು ಹಳ್ಳಿಗೆ ಹೋದೆನು. ಅಲ್ಲೆಲ್ಲಾ ಚೆನ್ನಾಗಿ ಮಾಂಸಾಹಾರ ತಿನ್ನುವವರೇ ಇದ್ದರು... ಈ ವಿಷಯ ಹೇಳಿದರೆ, ಸ್ವಲ್ಪ ಜನ ಸುಮ್ಮನಿದ್ದರು. ಆದರೆ ಒಬ್ಬನು ಏಕಾಏಕಿ ಹೊಡೆಯಲು ಬಂದನು. ಇಲ್ಲಿಗೆ ಬಂದು ನೀನು ಹೇಳುವ ಪಾಠಗಳು ಇವೆಯೇನು? ನಾವು ಜೀವಿಸುತ್ತಿರುವುದೇ ಅವುಗಳಿಂದ. ನೀನು ಬೇಡ ಎಂದು ಹೇಳುತ್ತಿರುವೆಯಲ್ಲ? ನಮ್ಮ ಮುಂದಿನ ಜೀವನ ಹೇಗೆ? ತಿನ್ನದೆ ಯಾರಿದ್ದಾರೆ? ಮನುಷ್ಯ ಮಾಂಸಾಹಾರ ತಿನ್ನದಿದ್ದರೆ ಹೇಗೆ ಜೀವಿಸುತ್ತಾನೆ..? ಎಂದು ಹೀಗೆ ಧ್ಯಾನಕ್ಕೆ ಎದುರಾಗಿ ಮಾತನಾಡಿದನು. ನಾನು ಹೇಳಿದ್ದನ್ನು ಹೇಳಿದ್ದೇನೆ ನಿನಗೆ ಇಷ್ಟವಾದರೆ ಆಚರಿಸು, ನಿನಗೆ ಅರ್ಥವಾಗದಿದ್ದರೆ ನಾನೇನು ಮಾಡಲು ಸಾಧ್ಯವಿಲ್ಲ ಎಂದು ಸುಮ್ಮನಾದರು.

ಇಂತಹವೆಲ್ಲವನ್ನು ನೋಡಿ ನಾನು ಎಲ್ಲಿ ಹೋದರೂ, ನಮ್ಮ ಮಾಸ್ಟರ್ಗಳು, ಸರ್ ಇಲ್ಲೆಲ್ಲ ಮಾಂಸಹಾರ ತಿನ್ನುವವರೇ ಹೆಚ್ಚಾಗಿದ್ದಾರೆ ಧ್ಯಾನ ಹೇಳಿ ನಿಧಾನವಾಗಿ ಅವರೇ ಬಿಡುತ್ತಾರೆ ಎಂದು ಹೇಳುತ್ತಿದ್ದರು. ಸತ್ಯವೇನು ಎನ್ನುವುದು ನನಗೆ ತಿಳಿದಿತ್ತು. ಹೇಳದಿದ್ದರೆ ನಾವು ಅಲ್ಲಿಗೆ ಹೋಗುವುದು ವ್ಯರ್ಥ. ಹಾಗೆ ಮಾಡಿದರೆ ವೀರತ್ವ ಇಲ್ಲದಿರುವಂತೆ ಅಲ್ಲವೇ?

ಅಷ್ಟೇ ಅಲ್ಲ ನಮಗೆ ಯಾವಾಗಲೂ ಅವಕಾಶ ಬರುವುದಿಲ್ಲ. ಅವಕಾಶ ಬಂದಾಗ ನೂರು ಜನರಿಗೋ, ಐವತ್ತು ಜನರಿಗೋ ಹೇಳಿದರೆ ಅದರಲ್ಲಿ ಒಬ್ಬ ಬದಲಾದರು ಸಾಕು.. ಆ ಕ್ಲಾಸ್ ಮುಗಿದ ನಂತರ ಮತ್ತೆ ಅವರು ಇಂತಹ ಕ್ಲಾಸ್ ಅನ್ನು ನಿರ್ವಹಿಸುತ್ತಾರೋ, ಇಲ್ಲವೋ. ಬಂದ ಅವಕಾಶವನ್ನು ನಾನು ಬಿಡುತ್ತಿರಲಿಲ್ಲ. ಧೈರ್ಯವಾಗಿ ಹೇಳುತ್ತಿದ್ದೆನು.

ಹಾಗೆಯೇ ಪತ್ರೀಜಿಯವರು ಔಷಧಿಗಳನ್ನು ಬಳಸಬೇಡಿ ಎನ್ನುತ್ತಿದ್ದರು. ಅದಕ್ಕೂ ಕೂಡ ಎಷ್ಟೋ ಜನ ಡಾಕ್ಟರ್ಸ್ ಅವರನ್ನು ವಿಮರ್ಶಿಸುತ್ತಿದ್ದರು. ಔಷಧಿಗಳಿಲ್ಲದಂತೆ ಹೇಗೆ

ಆಗುತ್ತದೆ ಎಂದು ಕೆರಳಿದ್ದು ಇದೇ.. ಪತ್ರೀಜಿಯವರು ಹೇಳುವುದೆಲ್ಲ ವಿರುದ್ಧವಾಗಿಯೇ ಇರುತ್ತಿತ್ತು. ಆದರೆ ಮಾತ್ರ ಎಲ್ಲವೂ ಸತ್ಯಗಳೇ.. ಅವರು ನೀನು ದೇಹವಲ್ಲ ಎನ್ನುತ್ತಾರೆ. ಇದು ವಿಚಿತ್ರವೇ..ಎಲ್ಲರೂ ನಾವು ದೇಹ ಎಂದುಕೊಂಡರೆ, ಈತ ನೀನು ದೇಹವಲ್ಲಾ ಎನ್ನುತ್ತಿದ್ದರು. ಹಾಗೆ ಸತ್ಯ ಹೇಳಬೇಕು ಎಂದರೆ ಧೈರ್ಯ ಇರಬೇಕು.

ಆದರೆ ಈಗ ಎಲ್ಲರೂ ಸತ್ಯಮಾರ್ಗವಾದ 'ಶ್ವಾಸದ ಮೇಲೆ ಗಮನ'ವಿಟ್ಟು ಅಸತ್ಯ ಮಾರ್ಗವಾದ ಮಾರ್ಗದರ್ಶನ ಧ್ಯಾನವನ್ನು ಅನುಸರಿಸುತ್ತಿದ್ದಾರೆ. ಎಲ್ಲರೂ "ಮಾರ್ಗದರ್ಶನ" ಧ್ಯಾನಕ್ಕೆ ಹೋಗುತ್ತಿದ್ದಾರೆ. ಅಸತ್ಯ ಆಕರ್ಷಿಸಿದಷ್ಟು ಸತ್ಯ ಆಕರ್ಷಿಸದು.

ಇದು ಸತ್ಯವಲ್ಲ ಎಂದು ಹೇಳಲು ಎಷ್ಟೋ ಧೈರ್ಯವಿರಬೇಕು? ಆ ಪರಿಸ್ಥಿತಿಯನ್ನು ಎದುರಿಸಬೇಕು ಎಂದರೆ ವೀರತ್ವವನ್ನು ಪ್ರದರ್ಶಿಸಬೇಕು. ಆದರೆ ನಾನು ಎಲ್ಲಿಯೂ ಸತ್ಯವನ್ನು ಹೇಳಲು ಹಿಂಜರಿಯಲಿಲ್ಲ, ಭಯಪಡಲಿಲ್ಲ. ಯಾರೇನಾದರೆ ನನಗೇನು ಅವನ ಕಷ್ಟ ಅವನದು ನಮಗೇಕೆ ಎಂದು ನಾನು ರಾಜಿಯಾಗಲಿಲ್ಲ. ಎಲ್ಲವನ್ನು ನಿಖರವಾಗಿ ಹೇಳುತ್ತಿದ್ದೆನು.

ಅದರ ಮೇಲೆ ಪುಸ್ತಕಗಳನ್ನು ಬರೆದನು. ಎಷ್ಟೋ ಜನರು 'ಶ್ವಾಸದ ಮೇಲೆ ಗಮನ' ಧ್ಯಾನ ಸರಿಯಾದದ್ದು ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಹೊಸಬರಿಗಾಗಿ ಎಂದು ಸಮಜಾಯಿಸಿ ಕೊಟ್ಟು ಮಾರ್ಗದರ್ಶನ ಧ್ಯಾನ ಹೇಳಿಕೊಡುತ್ತಿದ್ದಾರೆ.

ಬುದ್ಧನು 'ಆನಾಪಾನಸತಿ' ಎಂದನು. ಅದನ್ನೇ ಪತ್ರೀಜಿ 'ಶ್ವಾಸದ ಮೇಲೆ ಗಮನ ಧ್ಯಾನ' ಎಂದರು. ನಾವು ಜೂಮ್ ನಲ್ಲಿ ಬರುವವರೆಲ್ಲಾ, ಬುದ್ಧ ಸ್ಥಿತಿಯಲ್ಲಿ ಇರುವವರು. ಈ ಬುದ್ಧ ಸ್ಥಿತಿಯಲ್ಲಿ ಇರುವವರು ಮಾತ್ರ ಧೈರ್ಯವನ್ನು, ವೀರತ್ವವನ್ನು ಪ್ರದರ್ಶಿಸುತ್ತಾರೆ.

ಆದರೆ ಬುದ್ಧಿ ಸ್ಥಿತಿಯಿಂದ, ಆತ್ಮ ಸ್ಥಿತಿಯಲ್ಲಿ ಬಂದರೆ ಇನ್ನೂ ಎಷ್ಟೋ ಕಲಿಯುತ್ತಾರೆ. ವೀರತ್ವವನ್ನು, ಧೈರ್ಯವನ್ನು ಪ್ರದರ್ಶಿಸುತ್ತಾರೆ. ತಾಳ್ಮೆ, ನೈಪುಣ್ಯತೆ ಕಲಿಯುತ್ತಾರೆ. ಅವರಿಗೆ ಇಲ್ಲದ ಗುಣ ಎನ್ನುವುದು ಯಾವುದೂ, ಇರುವುದಿಲ್ಲ. ಆತ್ಮ ಎಂದರೆ ಭಗವಂತ. ಆತನಿಗೆ ಸಕಲ ಸದ್ಗುಣಗಳು ಇರುತ್ತವೆ. ಸಕಲ ಲಕ್ಷಣಗಳು ಇರುತ್ತವೆ. ಸಾಧನೆ ತೀವ್ರವಾಗಿ ಮಾಡುತ್ತಾ ಹೋದಂತೆ... ಆ ಲಕ್ಷಣಗಳೆಲ್ಲ ಬರುತ್ತವೆ. ಅವನು ಏನಾದರೂ ಮಾಡುತ್ತಾನೆ, ಏನಾದರೂ ಸಾಧಿಸುತ್ತಾನೆ

ಈ ವೀರತ್ವ ಎನ್ನುವುದು ಪುರುಷ ಶರೀರದೊಂದಿಗೆ ಅಧಿಕವಾಗಿ ಕಲಿಯುತ್ತಾರೆ. ಸುಮಾರು 250 ಜನ್ಮಗಳು ಸ್ತ್ರೀ ಶರೀರದೊಂದಿಗೆ, 250 ಜನಗಳು ಪುರುಷ ಶರೀರದೊಂದಿಗೆ ತೆಗೆದುಕೊಂಡು, ಅವುಗಳಲ್ಲಿ ಒಂದೊಂದು ಲಕ್ಷಣ ಕಲಿತುಕೊಳ್ಳುತ್ತಾರೆ.

ಆದ್ದರಿಂದ ಜೀವನ ಯೋಜನೆಯಲ್ಲಿ ಕಲಿಯಬೇಕಾಗಿರುವುದರ ಅನುಗುಣವಾಗಿ ಈ ಜನ್ಮ ಇರುತ್ತದೆ. ಆದ್ದರಿಂದ ಸತ್ಯ ಹೇಳಲು ಹಿಂಜರಿಯಬೇಡಿ.

## 5) ನಿರ್ಭಯ

ಪುರುಷ ಜನ್ಮದಲ್ಲಿ ಕಲಿತುಕೊಳ್ಳುವ ಮತ್ತೊಂದು ಲಕ್ಷಣ ಎಂದರೆ, ನಿರ್ಭಯತೆ. ಒಂದು ಜನ್ಮದಲ್ಲಿ ಆಗದಿದ್ದರೂ ಕೆಲವು ಜನ್ಮಗಳಲ್ಲಾದರೂ, ನಿರ್ಭಯವಾಗಿ ಜೀವಿಸುವುದನ್ನು ಕಲಿತುಕೊಳ್ಳುತ್ತಾರೆ. ಎಲ್ಲಿಗೆ ಹೋದರು, ಎಲ್ಲಿ ಇದ್ದರೂ ಪುರುಷ ನಿರ್ಭಯವಾಗಿರುತ್ತಾನೆ. ಅದಕ್ಕೆ ಪುರುಷನು ಎಲ್ಲಿಯಾದರೂ ಸರಿ ಒಬ್ಬಂಟಿಯಾಗಿ ಹೋಗುತ್ತಾನೆ. ಆದರೆ ಸ್ತ್ರೀಯರಿಗೆ, ಯಾರಾದರೂ ಜೊತೆ ಇರಬೇಕು. ಸ್ತ್ರೀ ಶರೀರ ಬಲಹೀನವಾದದ್ದು, ಕೋಮಲತೆಯಿಂದ ಕೂಡಿದೆ. ಸ್ತ್ರೀಯರು ಒಂಟಿಯಾಗಿ ಹೋಗಲಾಗದಿರುವುದಕ್ಕೆ ಮುಖ್ಯ ಕಾರಣ ಶೀಲ ಹೋಗುತ್ತದೆ ಎನ್ನುವ ಭಯ. ಯಾರಾದರೂ ಮಾನಭಂಗ ಮಾಡುತ್ತಾರೆ ಎನ್ನುವ ಭಯ ಇರುತ್ತದೆ.

ಆದರೆ ಪುರುಷನು ಗರ್ಭ ಧರಿಸುವುದಿಲ್ಲ. ಪುರುಷನಿಗೆ ಶೀಲದ ಗೊಡವೆ ಇರುವುದಿಲ್ಲ. ಆದ್ದರಿಂದ ಆ ವಿಧವಾದ ಭಯ ಪುರುಷನಲ್ಲಿ ಇರುವುದಿಲ್ಲ. ಪುರುಷ ಜನ್ಮದಲ್ಲಿ ನಿರ್ಭಯವಾಗಿ ಜೀವಿಸುವುದನ್ನು ಕಲಿತುಕೊಳ್ಳಲು, ಇದೂ ಒಂದು ಕಾರಣ. ಪುರುಷರು ಯಾರಾದರೂ ಭಯಪಡುತ್ತಿದ್ದಾರೆ ಎಂದರೆ ಅವರು ಇನ್ನೂ ಧೈರ್ಯ ಕಲಿತಿಲ್ಲ. ಆ ಲಕ್ಷಣ ಕಲಿತಿಲ್ಲ ಎಂದು ಅರ್ಥ. ಅಷ್ಟೇ ಅಲ್ಲ ಅದಕ್ಕೆ ಮುಂಚೆ ಅವರು ತೆಗೆದುಕೊಂಡ ಸ್ತ್ರೀ ಜನ್ಮಗಳಲ್ಲಿ ಇದ್ದ ಲಕ್ಷಣಗಳು ಇನ್ನು ಆ ಆತ್ಮದಿಂದ ಹೋಗಿಲ್ಲ ಎಂದು ಅರ್ಥ. ಹಾಗಾಗಿ ಭಯ ಪಡುತ್ತಾ ಇರುತ್ತಾರೆ.

ಮಾನವ ಎಂದರೆ ಶರೀರವಲ್ಲ ಮನಸ್ಸು, ಬುದ್ಧಿ, ಆತ್ಮ ಎಂದು ಎಷ್ಟೋ ಬಾರಿ ಹೇಳಿಕೊಂಡಿದ್ದೇವೆ. ಅಂದರೆ ಮಾನವರಲ್ಲಿ ಶಾರೀರಿಕ ಸ್ಥಿತಿಯಲ್ಲಿ ಜೀವಿಸುವವರು ಇದ್ದಾರೆ, ಮಾನಸಿಕ ಸ್ಥಿತಿಯಲ್ಲಿ ಜೀವಿಸುವವರೂ ಇದ್ದಾರೆ. ಬುದ್ಧಿ ಸ್ಥಿತಿಯಲ್ಲಿ ಜೀವಿಸುವವರು ಕೂಡಾ ಇದ್ದಾರೆ. ಆತ್ಮ ಸ್ಥಿತಿಯಲ್ಲಿ ಜೀವಿಸುವವರು ಇದ್ದಾರೆ.

ಸಹಜವಾಗಿ ದೇಹ ಸ್ಥಿತಿ, ಮನೋ ಸ್ಥಿತಿಯಲ್ಲಿರುವವರು ಎಲ್ಲದಕ್ಕೂ ಭಯ ಪಡುತ್ತಾ ಇರುತ್ತಾರೆ. ಆದರೆ ಯಾರಾದರೂ ಸರಿ.. 'ಶ್ವಾಸದ ಮೇಲೆ ಗಮನ' ಧ್ಯಾನದ ಮೂಲಕ ಬುದ್ಧಿ ಸ್ಥಿತಿಗೆ ಬಂದರೆ, ಅವರಿಗೆ ಶಾರೀರಿಕ ಸದೃಢತೆ ಇಲ್ಲದಿದ್ದರೂ, ನಿರ್ಭಯವಾಗಿ ತಮ್ಮ ಬುದ್ಧಿ ಕುಶಲತೆಯಿಂದ, ಎಂತಹ ಸಂದರ್ಭ ಎದುರಾದರೂ ಧೈರ್ಯವಾಗಿ ಅದನ್ನು ಎದುರಿಸುತ್ತಾರೆ. ಇದು ನಮಗೆ ಅರ್ಥ ಆಗಬೇಕೆಂದರೆ, ಪಂಚತಂತ್ರದಲ್ಲಿರುವಂತಹ ಒಂದು ಕಥೆಯನ್ನು ತಿಳಿದುಕೊಳ್ಳೋಣ.

# ಮೊಲ ಮತ್ತು ಸಿಂಹದ ಕಥೆ

ಒಂದು ಅಡವಿಯಲ್ಲಿ, ಒಂದು ಸಿಂಹ ಪ್ರವೇಶಿಸಿತು. ಅದು ಎಲ್ಲಾ ಪ್ರಾಣಿಗಳನ್ನು, ತನ್ನ ಇಷ್ಟ ಬಂದಂತೆ ಕೊಲ್ಲುತ್ತಿತ್ತು. ಆಗ ಪ್ರಾಣಿಗಳೆಲ್ಲ ಸಮಾವೇಶವಾಗಿ, 'ಹೀಗೆ ಇದ್ದರೆ ನಮಗೆ ಶಾಂತಿ ಇರುವುದಿಲ್ಲ ಆ ಸಿಂಹದೊಂದಿಗೆ ರಾಜಿ ಮಾಡಿ ಕೊಳ್ಳೋಣ. ಪ್ರತಿದಿನ ಒಬ್ಬರು ಆಹಾರವಾಗಿ ಹೋಗೋಣ ಆಗ ಅದು ಇನ್ಯಾರ ಮೇಲು ದಾಳಿ ಮಾಡದು ನಾವು ಧೈರ್ಯವಾಗಿ ಜೀವಿಸಬಹುದು' ಎಂದು ಹೇಳಿ ನಿರ್ಣಯಿಸಿಕೊಂಡು ಸಿಂಹದೊಂದಿಗೆ ಹೇಳಿದರೆ, ಅದು ಅಂಗೀಕರಿಸಿತು. ಹಾಗೆ ಒಪ್ಪಿಕೊಂಡಂತೆ ಒಂದೊಂದು ದಿನ ಒಂದೊಂದು ಪ್ರಾಣಿ, ಅದಕ್ಕೆ ಆಹಾರವಾಗಿ ಹೋಗುತ್ತಿದ್ದವು. ಒಂದು ದಿನ ಮೊಲದ ಸರದಿ ಬಂದಿತು.

ಆ ಮೊಲವು ಸಿಂಹದ ಬಳಿಗೆ ಹೋಗುತ್ತಾ... 'ಈ ಸಿಂಹದ ಪೀಡೆ ತೊಲಗಿಸಿಕೊಂಡರೆ ಯಾವ ಗೊಡವೆಯೂ ನಮಗೆ ಇರುವುದಿಲ್ಲ' ಎಂದು ತನ್ನ ಬುದ್ಧಿ ಕುಶಲತೆಯೊಂದಿಗೆ ಆಲೋಚಿಸಿ.., ಸಿಂಹದ ಬಳಿಗೆ ಹೋಗಿ, " ರಾಜ ನೀನೆ ದೊಡ್ಡವನು ಎಂದುಕೊಳ್ಳುತ್ತಿರುವೆ. ಆದರೆ ನಿನಗಿಂತ ಬಲವಾದವನು, ನಿನಗಿಂತ ದೊಡ್ಡದಾದ ಇನ್ನೊಂದು ಸಿಂಹ ಬಂದಿದೆ. ಇನ್ನೂ ನಿನ್ನ ಆಟ ಸಾಗುವುದಿಲ್ಲ ಎಂದು ಹೇಳಿತು.

ಆಗ ಆ ಸಿಂಹಕ್ಕೆ ಕೋಪ ಬಂದು ಪೌರುಷ ಹೆಚ್ಚಾಗಿ, ನನಗಿಂತ ಬಲವಾದವನೆ? ಯಾರು ಹೇಳು? ಅವನ ವಿಷಯವನ್ನು ನೋಡೋಣ ಎಂದಿತು. ಆಗ ಮೊಲವು ನನ್ನೊಂದಿಗೆ ಬಾ ಎಂದು ಹೇಳಿ, ಅಡವಿಯಲ್ಲಿ ಪಾಳು ಬಿದ್ದಿರುವಂತಹ ಒಂದು ಬಾವಿಯನ್ನು ತೋರಿಸಿ ಅದೋ ಅದರಲ್ಲಿ ಆ ಸಿಂಹವಿದೆ ಎಂದು ಹೇಳಿತು. ಕೂಡಲೇ ಸಿಂಹ ಆ ಬಾವಿಯೊಳಗೆ ಬಗ್ಗಿ ನೋಡಿದರೆ, ನೀರಿನಲ್ಲಿ ಅದರ ಪ್ರತಿಬಿಂಬವೇ ಕಾಣಿಸಿತು. ಅದು ಮತ್ತೊಂದು ಸಿಂಹ ಇದೆ ಎಂದುಕೊಂಡು ಅದನ್ನು ನೋಡಿ ಘರ್ಜಿಸಿತು. ಆಗ ಆ ಬಾವಿಯಿಂದ ಪ್ರತಿಧ್ವನಿ ಬಂದು ಅದು ಕೂಡ ಘರ್ಜಿಸಿದಂತೆ ಕಾಣಿಸಿತು. ನಿನ್ನ ವಿಷಯ ಹೇಳುತ್ತೇನೆ ಎಂದು ಕೂಡಲೇ ಬಾವಿಗೆ ಧುಮುಕಿ ನೀರಿನಲ್ಲಿ ಮುಳುಗಿ ಸತ್ತು ಹೋಯಿತು.

ಹಾಗೆ ಮೊಲವು ತನ್ನ ಬುದ್ಧಿಕುಶಲತೆಯೊಂದಿಗೆ, ಅಷ್ಟು ದೊಡ್ಡ ಸಿಂಹವನ್ನೇ ಸೋಲಿಸಿತು. ಅಂದರೆ ದೇಹ ಸ್ಥಿತಿಯಲ್ಲಿ, ಮನೋ ಸ್ಥಿತಿಯಲ್ಲಿ ಜೀವಿಸಿದ್ದಷ್ಟು ಕಾಲ ನಾವು ಯಾವ ಪರಿಸ್ಥಿತಿಯನ್ನು ಎದುರಿಸಲಾರೆವು. ತುಂಬಾ ಜನ ಬಲವಿದ್ದರೆ ನಿರ್ಭಯವಾಗಿ ಜೀವಿಸಬಹುದೆಂದುಕೊಳ್ಳುತ್ತಾರೆ. ಆದರೆ ಬಲಕ್ಕಿಂತ ಧೈರ್ಯ, ಬುದ್ಧಿ ಇದ್ದರೆ ಎಂತಹ ಪರಿಸ್ಥಿತಿಯನ್ನಾದರೂ ದಾಟಬಹುದು. ದೇಹಶಕ್ತಿಗಿಂತ ಬುದ್ಧಿಶಕ್ತಿ ದೊಡ್ಡದು ಎನ್ನುತ್ತಾರೆ.

ನಾನು ಅದಕ್ಕೆ ಬುದ್ಧಿ ಸಂಪಾದಿಸಿಕೊಳ್ಳಿ ಎನ್ನುತ್ತೇನೆ. ಈ ಜನ್ಮದಲ್ಲಿ ನೀವು ಬುದ್ಧಿ ಸ್ಥಿತಿಗೆ ಬಂದರೂ, ನೀವು ತುಂಬಾ ಸಾಧಿಸಿದಂತೆ. ತುಂಬಾ ಅದೃಷ್ಟವಂತರೇ ಎಂದು

ಹೇಳಬಹುದು. ನೀವು ತಮೋಗುಣದಲ್ಲೋ, ರಜೋ ಗುಣದಲ್ಲೋ ಇರುವಿರಿ ಎಂದರೆ, ಬುದ್ಧಿ ಸ್ಥಿತಿಗೆ ಬಂದಂತೆ ಅಲ್ಲ. ಸಾತ್ವಿಕಗುಣಕ್ಕೆ ಬಂದಾಗ ಮಾತ್ರ ನೀವು ಬುದ್ಧಿಸ್ಥಿತಿಗೆ ಬಂದಂತೆ ಅರ್ಥ. ಅದಕ್ಕಾಗಿ ತೀವ್ರವಾದ ಧ್ಯಾನ ಸಾಧನೆ ಮಾಡಿ ಸಾತ್ವಿಕವಾದ ಶಾಕಾಹಾರವನ್ನು ತೆಗೆದುಕೊಳ್ಳಿ. ಈ ಎರಡು ಇದ್ದರೆ ಸಾಕು ಮತ್ಯಾವುದರ ಅವಶ್ಯಕತೆಯೂ ಇಲ್ಲ.

ಭೀಮವರಂ ಬಂದಾಗಲೇ ಅಂತಹ ತೀವ್ರ ಸಾಧನೆ ನೀವು ಮಾಡಬಲ್ಲಿರಿ. ಅಷ್ಟೇ ಅಲ್ಲ ಸರಿಯಾದ ಸಾಧನೆ ಎಂದರೆ, 'ಶ್ವಾಸದ ಮೇಲೆ ಗಮನ' ಇರಿಸಿ ನಿಶಬ್ದ ಧ್ಯಾನ ಮಾಡಬಲ್ಲಿರಿ.. ಮತ್ತೆಲ್ಲಿಗೆ ಹೋದರೂ, ನಿಜವಾದ ಸರಿಯಾದ ಸಾಧನೆ ಇಲ್ಲ. ಮಾರ್ಗದರ್ಶನ ಧ್ಯಾನ ಎನ್ನುತ್ತಾರೆ, ಸಂಗೀತ ಎನ್ನುತ್ತಾರೆ, ಪತ್ರೀಜಿಯವರು ಸೂಚಿಸಿದ್ದು ಎನ್ನುತ್ತಾರೆ. ಹೀಗೆ ಎಷ್ಟೋ ಕಾರಣಗಳನ್ನು ಹೇಳಿ ಸರಿಯಾದ ಸಾಧನೆ ಮಾಡಲಾರದೆ ಹೋಗುತ್ತಿದ್ದಾರೆ. ಹಾಗೆ ಎಷ್ಟು ಸಂವತ್ಸರಗಳು ಮಾಡಿದರೂ, ಮಾಡಿದ್ದೆಲ್ಲ ವ್ಯರ್ಥವೇ ಆಗುತ್ತದೆ.

ತೀವ್ರವಾದ ಸಾಧನೆ ಮಾಡಿದಾಗ ಮಾತ್ರ ನೀವು ಬುದ್ಧಿ ಸ್ಥಿತಿಗೆ ಬರುತ್ತೀರಾ. ಆಗ ನಿಮ್ಮ ಜೀವನದಲ್ಲಿ ಎಂತಹ ಸಂದರ್ಭ ಎದುರಾದರೂ, ಅದನ್ನು ನಿಮ್ಮ ಬುದ್ಧಿ ಕುಶಲತೆಯೊಂದಿಗೆ ದಾಟಿ ಹೋಗಬಹುದು. ಬಲವುಳ್ಳವನಾದರೂ, ಬಲಹೀನನಾದರೂ, ನಿಮಗೆ ಏನು ಸಂಬಂಧವಿಲ್ಲ ಅದಕ್ಕೆ ಬಲದ ಅಗತ್ಯವಿಲ್ಲ.

ಗಂಡ ಹೆಂಡತಿಯರಲ್ಲಿ ಆದರೂ, ಇನ್ನೆಲ್ಲಿಯಾದರೂ ಸರಿ ಯಾವ ಸಂದರ್ಭದಲ್ಲಿ ನಮ್ಮ ಎದುರುನಲ್ಲಿರುವವರು ಏನು ಮಾತಾಡಿದರೂ, ಅದಕ್ಕೆ ತಕ್ಕ ಉತ್ತರ ನಾವು ಹೇಳಬಲ್ಲೆವು. ಆಗ ಅವರು ಆಲೋಚನೆಗೆ ಬೀಳುತ್ತಾರೆ. ಮತ್ತೆ ಏನು ಹೇಳುವುದಿಲ್ಲ. ಅದೇ ನೀವು ಬುದ್ಧಿ ಸ್ಥಿತಿ ದಾಟಿ, ಆತ್ಮ ಸ್ಥಿತಿಗೆ ಸೇರಿಕೊಂಡರೆ, ಪ್ರಾಣವನ್ನು ಲೆಕ್ಕಿಸದೆ ಯಾವ ಪರಿಸ್ಥಿತಿಯನ್ನಾದರೂ ಧೈರ್ಯವಾಗಿ ಎದುರಿಸುವಿರಿ. ಅದಕ್ಕೆ ಶಾರೀರಿಕ ಬಲದ ಅಗತ್ಯವಿಲ್ಲ. ಬೇಕಾಗಿರುವುದು ನಿರ್ಭಯತ್ವ.

ಆತ್ಮವೆಂದರೆ ಭಗವಂತ, ಭಗವಂತನಿಗೆ ಭಯವೆಲ್ಲಿರುತ್ತದೆ ? ಎಲ್ಲಾ ನಿರ್ಭಯವೇ... ಆದ್ದರಿಂದ ಅಂತಹವರು ಯಾವ ಪರಿಸ್ಥಿತಿ ಏನಾದರೂ ನಿರ್ಭಯವಾಗಿ ಎದುರಿಸುತ್ತಾರೆ, ನಿರ್ಭಯವಾಗಿ ಪ್ರವರ್ತಿಸುತ್ತಾರೆ.

ಆತ್ಮ ಸ್ಥಿತಿಯಲ್ಲಿರುವಂತಹ ಮಹಮದ್ ಪ್ರವಕ್ತನನ್ನೇ ತೆಗೆದುಕೊಳ್ಳೋಣ. ಆತ ಹೆಚ್ಚಾಗಿ ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದನು. ಆತ ಒಮ್ಮೆ ಯುದ್ಧ ಮಾಡುತ್ತಿರುವಾಗ ಶತ್ರು ಆತನನ್ನು ಬೀಳಿಸಿ ಕತ್ತಿಯನ್ನು ಮಹಮ್ಮದ್ ಕೊರಳಿನ ಮೇಲೆ ಇಟ್ಟು ನಿನ್ನನ್ನು ಈಗ ಯಾರು ಬಂದು ರಕ್ಷಿಸುತ್ತಾರೆ? ನಾನು ನೋಡುತ್ತೇನೆ ಎಂದನು. ಆಗ ಮಹಮ್ಮದ್ ಪ್ರವಕ್ತ

ವಿಚಲಿತನಾಗದೇ, ಭಯಪಡದೆ ನನ್ನ " ಅಲ್ಲಾ " ಬಂದು ರಕ್ಷಿಸುತ್ತಾನೆ ಎಂದು ತುಂಬಾ ಧೈರ್ಯದಿಂದ ಹೇಳಿದನು. ಹಾಗೆಯೇ ಮಹಮ್ಮದ್ ಹೇಳಿದ ಕೂಡಲೇ ಅವನು ಸ್ವಲ್ಪ ತಡವರಿಸಿದನು. ಅದೇ ಕ್ಷಣದಲ್ಲಿ ಮಹಮದ್ ಅವನ ಮೇಲೆ ತಿರುಗಿ ತನ್ನ ಕತ್ತಿಯನ್ನು ಅವನ ಕೊರಳಿನ ಮೇಲೆ ಇಟ್ಟು ನಿನಗೆ " ಅಲ್ಲಾ " ಕೂಡಾ ಇಲ್ಲ. ನಿನ್ನನ್ನು ಯಾರು ರಕ್ಷಿಸುತ್ತಾರೆ? ನಾನು ನೋಡುತ್ತೇನೆ ಎಂದನು. ಅಂದರೆ ಅಂತಹ ಸೋಲುವ ಸಮಯದಲ್ಲೂ ಆತ ತನಗಿಂತ ಬಲವಾದವರನ್ನು ನಿರ್ಭಯವಾಗಿ ಎದುರಿಸಿದನು.

ಆತ್ಮಸ್ಥಿತಿಯಲ್ಲಿ ಇರುವವರು ಯಾವಾಗಲಾದರೂ ಸರಿ ಹಾಗೆ ನಿರ್ಭಯವಾಗಿ ಜೀವಿಸುತ್ತಾರೆ. ನಾವು ಪತ್ರೀಜಿಯವರನ್ನು ತೆಗೆದುಕೊಂಡರೆ, ಮಹಮದ್ ಪ್ರವಕ್ತನಂತೆ ಯಾವಾಗಲೂ ಆತ್ಮಸ್ಥಿತಿಯಲ್ಲಿ ಇರುವಂತಹ ಉನ್ನತ ವ್ಯಕ್ತಿ. ಆ ಸ್ಥಿತಿಯಲ್ಲಿ ಇರುವುದರಿಂದಲೇ, ಆತ ಹೇಳುವ ಸತ್ಯಗಳು ಲೋಕ ವಿರುದ್ಧವಾಗಿ ಇರುತ್ತವೆ. ಆತ ಹೇಳುವ ಸತ್ಯಗಳನ್ನು ಯಾರು ಸುಲಭವಾಗಿ ಜೀರ್ಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಅವರು ಮಾತ್ರ ಧೈರ್ಯವಾಗಿ ಹೇಳುತ್ತಾರೆ. ಆತ ವಿಗ್ರಹ ದೇವರಲ್ಲ, ವಿಗ್ರಹವನ್ನು ಆರಾಧಿಸುವ ಅಗತ್ಯವಿಲ್ಲ, ಸತ್ಯವನ್ನು ಆರಾಧಿಸಿ ಎಂದು ಹೇಳುತ್ತಿರುವಾಗ ಕೆಲವು ಕಡೆ ಕೆಲವು ಸಂದರ್ಭಗಳಲ್ಲಿ, ಅಜ್ಞಾನದಲ್ಲಿರುವವರು ಅವರ ಮೇಲೆ ವಾದ ಮಾಡಿದರು ವಾದ ಮಾಡಿದ್ದಲ್ಲದೆ, ಅವರ ಮೇಲೆ ದಾಳಿ ಮಾಡಿದ ಸಂದರ್ಭಗಳು ಇವೆ. ಆತ್ಮ ಸ್ಥಿತಿಯಲ್ಲಿ ಇರುವ ಪತ್ರೀಜಿ ನಿರ್ಭಯವಾಗಿ ತಾನು ಹೇಳಲು ಬಯಸಿರುವ ಸತ್ಯವನ್ನು ಧೈರ್ಯವಾಗಿ ಹೇಳುತ್ತಿದ್ದರು.

ಹಾಗೆ ಹೇಳುವಾಗ ಪ್ರಕೃತಿ ಸಹಕಾರವು ಇರುತ್ತದೆ. ಅಂತಹ ಸಂದರ್ಭದಲ್ಲಿ ಅವರಿಗೆ ಎಂತಹ ಪರಿಸ್ಥಿತಿ ಎದುರಾದರೂ, ಪ್ರಕೃತಿ ಸಹಕಾರದೊಂದಿಗೆ ಅವರು ಅದನ್ನು ಸುಲಭವಾಗಿ ಎದುರಿಸುತ್ತಾರೆ. ನಿಜವಾಗಿಯೂ ಅಷ್ಟು ಜನ ಎದುರು ತಿರುಗಿದಾಗ ಹಠಾತ್ತಾಗಿ ಮೇಲೆ ಬಂದರೆ ಪತ್ರೀಜಿಯವರು ಒಬ್ಬರೇ ಆ ಪ್ರಕೃತಿ ಸಹಕಾರದೊಂದಿಗೆ ಆ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದರು.

ನಾನು ಅದನ್ನೇ ಹೇಳುತ್ತಾ ಇರುತ್ತೇನೆ "ಸತ್ಯವನ್ನು ಹಿಡಿದುಕೊಳ್ಳಿ, ಸತ್ಯವನ್ನೇ ಬೋಧಿಸಿ, ಸತ್ಯದಲ್ಲಿ ಜೀವಿಸಿ, ಪ್ರಕೃತಿಯ ಸಹಕಾರ ನಿಮಗೆ ಸಂಪೂರ್ಣವಾಗಿ ಇರುತ್ತದೆ" ಎಂದು ಹೇಳುತ್ತಿರುತ್ತೇನೆ. ನಿಮಗೆ ಒಂದು ಹೇಳುತ್ತೇನೆ ನೀವು ಪುರುಷರಾದರೂ, ಬಲಹೀನವಾದ ಶರೀರವಿರುವ ಸ್ತ್ರೀಯಾದರೂ, ನಿರ್ಭಯವಾಗಿ ವರ್ತಿಸಬೇಕೆಂದರೂ, ಹಾಗೆ ಜೀವಿಸಬೇಕೆಂದರೂ, ಆತ್ಮಸ್ಥಿತಿಯನ್ನು ಸಂಪಾದಿಸಿಕೊಳ್ಳಬೇಕು. ಕನಿಷ್ಠ ಬುದ್ಧಿ ಸ್ಥಿತಿಗಾದರೂ ಸೇರಿಕೊಳ್ಳಬೇಕು. ಆಗ ಯಾವುದಕ್ಕೂ ಭಯಪಡುವುದಿಲ್ಲ.

ತುಂಬಾ ಜನರು ಭೀಮವರಂ ಬರಲು ಹೇಳಿದರೆ, ಒಬ್ಬರೇ ಬರುವುದು ಆಗುವುದಿಲ್ಲ ಎನ್ನುತ್ತಾರೆ. ನನ್ನ ಹಣ ಕಳೆಯುತ್ತದೆ, ಬಂಗಾರ ಕಳೆದು ಹೋಗುತ್ತದೆ.

ಅಥವಾ ನನಗೆ ಏನಾದರೂ ನಡೆಯಬಹುದು ಎಂದು ಹೇಳುತ್ತಾರೆ. ನಿಮ್ಮಿಂದ ಯಾರಿಗೂ ಹಾನಿ ಆಗದಿದ್ದರೆ ಯಾರಿಂದಲೂ ನಿನಗೆ ಹಾನಿಯಾಗುವುದಿಲ್ಲ. ನೀವು ಯಾರ ಹಣವನ್ನಾದರೂ, ಬೇರೆ ಯಾವ ಮೋಸ ಮಾಡದಿದ್ದರೆ, ಇತರರಿಗೆ ನಷ್ಟ ಉಂಟು ಮಾಡದಿದ್ದರೆ, ನಿಮಗಿರುವ ಹಣಕ್ಕೆ ಯಾವ ಆಪತ್ತು ಬರುವುದಿಲ್ಲ.

ನೀವು ಇತರರನ್ನು ಮೋಸ ಮಾಡಿದರೆ, ನೀವು ಮನೆಗೆ ಎಷ್ಟು ಬೇಗ ಹಾಕಿದ್ದರು, ಯಾರೋ ಒಬ್ಬರು ಬಂದು ದೋಚುತ್ತಾರೆ. ಆದರೆ ನೀವು ಯಾರ ಸಂಪತ್ತನ್ನು ಆಶಿಸದಿರುವಾಗ, ಮೋಸಗೊಳಿಸದೇ ಇರುವಾಗ, ಯಾವ ಕಾರಣದಿಂದಾರೂ ಸರಿ, ನೀವು ಬಾಗಿಲು ತೆಗೆದು ಮಲಗಿಕೊಂಡರೂ, ಮನೆಗೆ ಯಾರೂ ಬರುವುದಿಲ್ಲ. ಏನಾದರೂ ಆಗಿದೆ ಎಂದರೆ,  ನೀನು ಏನೋ ಮಾಡಿರುವೆ ಎಂದು ಅರ್ಥ.

ಕೆಲವರು ಸ್ತ್ರೀಯರನ್ನು ಕಿಡ್ನಾಪ್ ಮಾಡುತ್ತಾರೆ. ಬ್ರೊಥೆಲ್ ಹೌಸ್‌ಗೆ ಮಾರಾಟ ಮಾಡುತ್ತಾರೆ ಎಂದು ಹೇಳಬಹುದು. ಆದರೆ ಅವರೆಲ್ಲ ಅಂದರೆ ಆ ಸ್ತ್ರೀಯರು ತಮ್ಮ ಗತಜನ್ಮದಲ್ಲಿ ಪುರುಷರಾಗಿ ಮಾನಭಂಗ, ಅಪಹರಣ ಮಾಡಿ ಬೇರೆ ಸ್ತ್ರೀಯರನ್ನು ಭಾಧಿಸಿದವರೇ...ಈ ಜನ್ಮದಲ್ಲಿ ಸ್ತ್ರೀಯಾಗಿ ಹುಟ್ಟಿ ಅಂತಹ ನರಕವನ್ನು ಅನುಭವಿಸುತ್ತಿದ್ದಾರೆ.

ನೆನಪಿರಲಿ ನೀವು ಧರ್ಮಯುತವಾಗಿದ್ದಾಗ, ನ್ಯಾಯಯುತವಾಗಿರುವಾಗ, ನೀತಿಯಿಂದ ಜೀವಿಸಿದಾಗ, ನಿಮಗೇಕೆ ಭಯ? ಅವರೊಂದಿಗೆ ಹೋಲಿಸಿಕೊಳ್ಳುವುದು ಏಕೆ? ಅಂತಹ ತಪ್ಪುಗಳನ್ನು ಮಾಡಿದರೆ ನೀವು ಭಯಪಡಬೇಕು. ನೀವು ಇಂತಹ ಕೆಲಸಗಳನ್ನು ಮಾಡುವವರೇ?, ನೆನಪಿರಲಿ ಪ್ರಾರಂಭ ಜನ್ಮದಲ್ಲಿರುವವರು ಹಾಗೆ ಮಾಡುತ್ತಾರೆ. ನಂತರ ಕಲಿತುಕೊಳ್ಳುತ್ತಾರೆ. ಅದು ಅವರಿಗೆ ಸಂಬಂಧಿಸಿದೆ. ಹುಚ್ಚರಂತೆ ಅವರಿಗೆ ಆಗಿದೆ ಆದ್ದರಿಂದ ನನಗೂ ಹಾಗೆ ಆಗುತ್ತದೆ ಎಂದುಕೊಳ್ಳುವುದೇಕೆ?  ನೀವೆಲ್ಲ 350 ಜನ್ಮಗಳನ್ನು ದಾಟಿ ಬಂದಿರುವಿರಿ...

ನಿಮಗೆ ಆ ಪಾಠಗಳೆಲ್ಲವೂ ಆಗಿ ಹೋಗಿದೆ, ದೋಚಿಕೊಳ್ಳುವುದು, ದೋಚಿಕೊಳ್ಳಲ್ಪಡುವುದು ಮಾನಭಂಗ ಮಾಡುವುದು, ಮಾನಭಂಗಕ್ಕೆ ಒಳಗಾಗುವುದು ಎಲ್ಲವೂ ಮುಗಿದಿದೆ. ಈಗ ನಿಮ್ಮ ಸ್ಥಿತಿ ಏನೆಂದರೆ, ಜ್ಞಾನವನ್ನು ಸಂಪಾದಿಸಿಕೊಂಡು ಜನ್ಮರಾಹಿತ್ಯಸ್ಥಿತಿ ಸಂಪಾದಿಸುವ ಪ್ರಯತ್ನ ಮಾಡುತ್ತಿದ್ದೀರಿ. ಆ ಸ್ಥಾಯಿಯನ್ನು ತಲುಪಿದ್ದೀರಿ.

ನಿಮಗೆ ಇಷ್ಟು ಜನ್ಮಗಳು ಕಳೆದಿವೆ ಎಂದು ಹೇಳುತ್ತಿದ್ದರೂ, ಇನ್ನೂ ನಿಮ್ಮಲ್ಲಿ ಭಯ ಹೋಗುತ್ತಿಲ್ಲವೆಂದರೆ, ನಿಮ್ಮಲ್ಲಿ ಇನ್ನೂ ಮೂರ್ಖತ್ವ ಹೋಗಿಲ್ಲ. ನಾನೇನಾದರೂ ತಪ್ಪು ಮಾಡಿರುವೆನೆ ಎಂದು ನಿಮಗೇನಾದರೂ ಸಂದೇಹವಿದ್ದರೆ,  ಒಂದು ವೇಳೆ ನೀವು ಹಾಗೆ

ಮಾಡಿದ್ದರೆ, ಈಗ ಏನಾದರೂ ಆಗುವುದೇನೋ ಎಂದುಕೊಂಡರೆ, ನೀನು ಮನೆ ಹತ್ತಿರ ಇದ್ದರೂ... ಆಗುವುದು ಆಗಿಯೇ ತೀರುತ್ತದೆ. ಎಷ್ಟು ಜಾಗ್ರತೆಗಳನ್ನು ತೆಗೆದುಕೊಂಡರೂ, ಮಾಡಿದ್ದನ್ನು ಅನುಭವಿಸಲೇಬೇಕು. ತಪ್ಪಿಸಿಕೊಳ್ಳುವುದು ನಿನ್ನಿಂದ ಸಾಧ್ಯವಿಲ್ಲ. ತುಂಬಾ ಜನರು ಮನೆಯಿಂದ ಆಚೆ ಹೋದರೆ, ಅಪಘಾತದಲ್ಲಿ ಕಾಲು ಮುರಿಯುವುದೇನೋ ಎಂದು ಮನೆಯಲ್ಲಿ ಎಷ್ಟೋ ಜಾಗರೂಕರಾಗಿ ಇರುತ್ತಾರೆ. ಆದರೆ ಮನೆಯಲ್ಲಿದ್ದರೂ ಬಾತ್ರೂಮ್ ನಲ್ಲಿ ಬಿದ್ದು ಕಾಲು ಮುರಿದುಕೊಂಡವರು ಎಷ್ಟೋ ಮಂದಿ ಇದ್ದಾರೆ. ಕರ್ಮ ಫಲಿತವನ್ನು ತಪ್ಪಿಸಿಕೊಳ್ಳುವುದು ಯಾರಿಗೂ ಸಾಧ್ಯವಿಲ್ಲ.

ನಿನಗೆ ಯಾರಿಂದಲೂ ಹಾನಿಯಾಗಬಾರದು, ನೀನು ಯಾವುದಕ್ಕೂ ಭಯಪಡಬಾರದು ಎಂದರೆ ನಿನ್ನಿಂದ ಯಾರಿಗೂ ಕಷ್ಟವಾಗಲಿ, ನಷ್ಟವಾಗಲಿ, ಹಾನಿಯಾಗಲಿ, ಹಿಂಸೆಯಾಗಲಿ ಆಗದಂತೆ ಜಾಗ್ರತೆ ವಹಿಸು. ಇದನ್ನು ನೀನು ಮಾಡಬಲ್ಲೆಯಾದರೆ ನಿನಗೆ ಏನೂ ಆಗುವುದಿಲ್ಲ.

ತುಂಬಾ ಜನರು ಹೇಳುತ್ತಾರೆ ನಮ್ಮ ಮನೆಯಲ್ಲಿ ಇರುವೆ, ಇಲಿ, ಜಿರಳೆಗಳು ಬರುತ್ತಿವೆ ಎನು ಮಾಡುವುದು? ಎಂದು ಕೇಳುತ್ತಾರೆ. ಅವುಗಳನ್ನು ಕೊಲ್ಲದೆ ನೀನು ಜೀವಿಸು ಆಗ ಯಾವುದು ನಿನ್ನ ತಂಟೆಗೆ ಬರುವುದಿಲ್ಲ. ಸೊಳ್ಳೆಯಾದರೂ ಸರಿ ನಿಮ್ಮ ಮನೆಗೆ ಬಂದರೂ, ನಿಮ್ಮ ತಂಟೆಗೆ ಬರುವುದಿಲ್ಲ. ಆ ಸ್ಥಿತಿಯನ್ನು ಸಂಪಾದಿಸಿಕೊಳ್ಳಬೇಕು. ನೀವು ಇನ್ನೂ ಬುದ್ಧಿಯ ಸ್ಥಿತಿಗೆ ಬಾರದಿದ್ದರೆ ಇಂತಹವನ್ನು ಆಲೋಚಿಸುವಿರಿ.

ಅದು ನನಗೆ ಏನಾದರೂ ಹಾನಿ ಮಾಡುತ್ತದೆಯೇನೋ ಎನಿಸಿದರೆ, ಇಲಿಯನ್ನು ಹಿಡಿದು ಹೊರಗೆ ಬಿಡು, ಕೊಲ್ಲದಿರು. ಔಷಧಿಯನ್ನು ಇಡಬಾರದು. ಜಿರಳೆಯನ್ನು ಮೊರದಲ್ಲಿ ತೆಗೆದುಕೊಂಡು ಹೊರಗೆ ಬಿಡು. ನೀನು ಹಾಗೆ ಮಾಡುತ್ತಾ ಇದ್ದರೆ, ಅವು ನಿನ್ನ ತಂಟೆಗೆ ಬರುವುದಿಲ್ಲ. ನಿನ್ನ ಭಾವವನ್ನು ಗ್ರಹಿಸಬಲ್ಲ ಶಕ್ತಿ ಅವುಗಳಿಗೆ ಇದೆ ಅವುಗಳ ಭಾವವನ್ನು ಗ್ರಹಿಸುವ ಶಕ್ತಿ ನಿನಗೆ ಇಲ್ಲ. ಯಾವ ಪ್ರಾಣಿಯನ್ನಾದರೂ ಸರಿ ನೀವು ಗಮನಿಸಿ ನಿಮಗೆ ಎದುರಾದಾಗ ಅವು ನಿಮ್ಮ ಕಣ್ಣಲ್ಲಿ ನೋಡುತ್ತವೆ. ಕಣ್ಣಿನ ಮೂಲಕ ಭಾವವನ್ನು ಗ್ರಹಿಸುತ್ತದೆ. ನೀನು ಹಾನಿ ಮಾಡುವ ಉದ್ದೇಶದೊಂದಿಗೆ ಇರುವೆಯಾ ಎಂದು ನೋಡುತ್ತದೆ. ನೀನು ಭಯದಿಂದ ಅದನ್ನು ಕೋಲಿನಿಂದ ಹೊಡೆಯಬೇಕು ಕೊಲ್ಲಬೇಕೋ ಎಂದು ಆಲೋಚಿಸುವೆ. ಅದಕ್ಕೆ ಹಾನಿ ಮಾಡಬೇಕೆಂಬ ಭಾವ ನಿನ್ನಲ್ಲಿ ಕಾಣಿಸಿದರೆ ನೀನು ಹಾನಿ ಮಾಡುವುದರೊಳಗೆ ಅದು ನಿನ್ನ ಮೇಲೆ ದಾಳಿ ಮಾಡುತ್ತದೆ.

ಆದ್ದರಿಂದ ನೀನು ಧರ್ಮವಾಗಿ ಜೀವಿಸಿದರೆ, ಯಾರಿಗೂ ಭಯಪಡಬೇಕಾದ ಕೆಲಸವಿಲ್ಲ. ನಿರ್ಭಯವಾಗಿ ಜೀವಿಸಬಹುದು. ಅದಕ್ಕಾಗಿ ಇವೆಲ್ಲ ನೀವು ಕಲಿತುಕೊಳ್ಳುತ್ತಿದ್ದೇವೆ. ಎಷ್ಟು ಕಾಲ ಜೀವಿಸಿದ್ದೇವೆ ಎಂದು ಹೇಳಿಕೊಳ್ಳುವುದಲ್ಲ. ಹೇಗೆ

ಜೀವಿಸಿದ್ದೇವೆ ಎನ್ನುವುದು ಮುಖ್ಯ. ಎಲ್ಲದಕ್ಕೂ ಭಯ ಪಡುತ್ತಾ, ಯಾವಾಗಲೂ ಗೊಂದಲದಿಂದ, ಅಶಾಂತಿಯಿಂದ, ದುಃಖದೊಂದಿಗೆ ಜೀವಿಸುವುದು ಒಂದು ಜೀವನವೇ?

ಹಾಗಾಗಿ ಭೀಮವರಂಗೆ ಬಂದು ಕೆಲವು ತಿಂಗಳುಗಳ ಕಾಲ ತೀವ್ರವಾದ ಸಾಧನೆ ಮಾಡಿ, ಬುದ್ಧಿ ಸ್ಥಿತಿಗೆ ಬನ್ನಿ... ಆಗ ನೋಡಿ ನಿಮ್ಮಲ್ಲಿ ಎಷ್ಟು ಬದಲಾವಣೆ ಬರುತ್ತದೆ. ನೀವು ಧೈರ್ಯವಾಗಿ ಜೀವಿಸುವುದಲ್ಲದೆ, ನಿರ್ಭಯವಾಗಿ ಜೀವಿಸುವುದಲ್ಲದೆ ಎಲ್ಲರನ್ನೂ ಆ ವಿಧವಾಗಿ ಜೀವಿಸುವಂತೆ ಮಾಡುವಿರಿ.

# "ಧ್ಯಾನದ ಲಾಭಗಳು"

- ಎಲ್ಲಾ ಕಾಯಿಲೆಗಳು ಶೀಘ್ರಗತಿಯಲ್ಲಿ ಗುಣವಾಗುತ್ತದೆ.
- ಜ್ಞಾಪಕ ಶಕ್ತಿ ಹೆಚ್ಚುತ್ತದೆ.
- ದುಶ್ಚಟಗಳು ಸಹಜವಾಗಿ ಅಂತ್ಯವಾಗುತ್ತದೆ.
- ಮನಸ್ಸು ಸದಾ ಉಲ್ಲಾಸವಾಗಿರುತ್ತದೆ.
- ನಿದ್ದೆ ಮಾಡಬೇಕಾದ ಸಮಯ ಕಡಿಮೆ ಆಗುತ್ತದೆ.
- ವೈಯಕ್ತಿಕ ಸಂಬಂಧಗಳು ಪ್ರಾಮಾಣಿಕ ಮತ್ತು ಪರಿಣಾಮಕಾರಿಯಾಗುತ್ತವೆ.
- ಯೋಚನಾ ಶಕ್ತಿ ಅತಿ ಅದ್ಭುತವಾಗಿ ಹೆಚ್ಚಾಗುತ್ತದೆ.
- ಜೀವನದ ಉದ್ದೇಶವನ್ನು ಚೆನ್ನಾಗಿ ಅರಿತುಕೊಳ್ಳಬಹುದು.
- ಕುಂಡಲಿನಿ ಶಕ್ತಿ ಜಾಗೃತಗೊಳ್ಳುವುದರಿಂದ ಮೂರನೇ ಕಣ್ಣು ತೆರೆದುಕೊಳ್ಳುತ್ತದೆ.
- ಸೂಕ್ಷ್ಮ ಶರೀರಯಾನ ಆರಂಭಗೊಳ್ಳುವುದು.
- ಗತಜನ್ಮಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.
- ಪರಮಾತ್ಮ ಮತ್ತು ಇತರ ಪರಮಗುರುಗಳ ಜೊತೆಗೆ ಅನುಸಂಧಾನವಾಗಿ ವ್ಯಕ್ತಿಗತ ಸಂದೇಶಗಳು ಪಡೆಯಬಹುದು.
- ಎಲ್ಲಾ ಕೆಲಸಕಾರ್ಯಗಳನ್ನು ಸಮರ್ಥವಾಗಿ ಮಾಡಬಹುದು.
- ಅತೀಂದ್ರಿಯ ಜ್ಞಾನ ವೃದ್ಧಿಯಾಗುತ್ತದೆ.
- ಕೊನೆಯದಾಗಿ, ಬುದ್ಧತ್ವವನ್ನು ಸಾಧಿಸಬಹುದು.

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**




ಸಹಜವಾಗಿ ನಾನು ಸ್ತ್ರೀ ಅಥವಾ ನಾನು ಪುರುಷ ಎಂದುಕೊಳ್ಳುತ್ತಾರೆ. ಆದರೆ ಇವೆಲ್ಲವೂ ನಮಗೆ ಜನ್ಮಗಳು. ಸ್ತ್ರೀಯಾದರೆ, ಸ್ತ್ರೀಜನ್ಮ, ಪುರುಷನಾದರೆ, ಪುರುಷ ಜನ್ಮ ಎನ್ನುತ್ತೇವೆ. ಆದರೆ ನಾವು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ. ನಾವೆಲ್ಲರೂ ಆತ್ಮಸ್ವರೂಪರು. ಆತ್ಮ ಸ್ವರೂಪರಾದ ನಾವು ಪೂರ್ಣಾತ್ಮನಿಂದಾಗಲಿ, ಮೂಲ ಚೈತನ್ಯದಿಂದಾಗಲಿ ಬೇರ್ಪಟ್ಟ ಅಂಶಾತ್ಮರು. ಈ ಅಂಶಾತ್ಮ ಒಂದು ಮಾನವ ಶರೀರದಲ್ಲಿ ಪ್ರವೇಶಿಸಲ್ಪಟ್ಟು ಜೀವನೆಂದು ಕರಯಲ್ಪಡುತ್ತದೆ.

ಆ ಜೀವನಿಗೆ, ಆ ಪೂರ್ಣಾತ್ಮ ಒಂದು ಲಕ್ಷ್ಯವನ್ನು ನಿರ್ದೇಶಿಸುತ್ತದೆ.... ನೀನು ಈ ಭೂಮಿ ಮೇಲೆ ಎಷ್ಟೋ ಪಾಠಗಳನ್ನು ಕಲಿತುಕೊಂಡು, ಜ್ಞಾನವನ್ನು ಹೊಂದಿ ನಮ್ ಸ್ಥಾಯಿಗೆ ಅಭಿವೃದ್ಧಿ ಹೊಂದಬೇಕು. ಅಂದರೆ ಪೂರ್ಣಾತ್ಮವಾಗಬೇಕು. ಅಲ್ಲಿಯವರೆಗೂಸ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುವೆಯೆಂದು ಹೇಳಿ, ಜನನ ಮರಣ ಚಕ್ರದಲ್ಲಿ ಪ್ರವೇಶಿಸುವಂತೆ ಮಾಡುತ್ತದೆ. ಹಾಗೆ ಪ್ರತಿಯೊಬ್ಬರು ಮಾನವ ಶರೀರದಲ್ಲಿ ಪ್ರವೇಶಿಸುತ್ತಾರೆ. ಅಂದಿನಿಂದ ಕರ್ಮ ಚಕ್ರವು ಪ್ರಾರಂಭವಾಗುತ್ತದೆ.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 60/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ
ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ
https: //www.youtube.com/pmckannada • www.meditationeverywhere.org
• www.pssmovement.org

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀರಾಮಧಾಮ ಧ್ಯಾನಕೇಂದ್ರ,
ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - ೫೬೦ ೦೬೬
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503
ವಿಜಯಲಕ್ಷ್ಮಿ ಎಸ್.ಎನ್ / 8050082689